ಶ್ರೀಸತ್ಯಧರ್ಮತೀರ್ಥವಿರಚಿತಾ

ಗಂಗಾಲಹರೀ

ಮತ್ತು ಗಂಗಾಸ್ತೋತ್ರಸಂಗ್ರಹ



ಡಾ. ಭೀಮಸೇನಾಚಾರ್ಯ ಮಳಗಿ

ಶ್ರೀಸತ್ಯಧರ್ಮತೀರ್ಥವಿರಚಿತಾ

ಗಂಗಾಲಹರೀ

ಮತ್ತು

ಗಂಗಾಸ್ತೋತ್ರಸಂಗ್ರಹ

(ಗಂಗಾಲಹರಿಯ ವೈಶಿಷ್ಟ್ಯದೊಂದಿಗೆ ಕನ್ನಡಾನುವಾದ
ನಾಮಾವಲಿ ಹಾಗೂ ಹಾಡುಗಳ ಸಂಗ್ರಹ)

ಡಾ. ಭೀಮಸೇನಾಚಾರ್ಯ ಮಳಗಿ

ಪ್ರಕಾಶಕರು
ಶ್ರೀಶ್ರುತೀಶ ಪ್ರಕಾಶನ,
ಧಾರವಾಡ.

Gangalahari of Shri Satyadharmateertha and **Gangastotrasangra** Edited with an introduction, Kannada Translation, explanatory notes and compiled by **Dr. Bhimasenacharya Malagi** M.A., Ph. D. Dharwad.

First Edition **2014**

Publishers : **Shri Shruteesh Prakashna**
Basavanagar Part-1,
Haliyal road, Dharwad - 580003
Ph: 0836 2779190
Cell : +919482777648

D.T.P. **Shri Shruteesh D.T. P. Centre,**
Dharwad.

Price

Cover Design **Shri Raghavendra Kukanur, Dharwad.**

Printer **Natural Printers, Near C. B. T, Dharwad**

॥ ಶ್ರೀಸತ್ಯಧರ್ಮತೀರ್ಥಗುರುಭ್ಯೋ ನಮಃ ॥

ಶ್ರೀಸತ್ಯವರದುಗ್ಧಾಬ್ಧೇಃ ಉತ್ಥಿತಾ ಜಗತೀತಲೇ ।
ಸುಧಾ ಶ್ರೀಸತ್ಯಧರ್ಮಾಖ್ಯಾ ಪಾವಯೇತ್ ಸ್ಮರತಸ್ಸತಃ ॥



ಭಾಗೀರಥೀಯದಗ್ರೇಭೂತ್ ಶಂಭುರ್ಭಾತಿ ಯದಗ್ರತಃ ।
ತಾನ್ ವಂದೇ ಸತ್ಯಧರ್ಮಾಖ್ಯಾನ್ ಸುಧಾಜೀವನಪಾವನಾನ್ ॥

ಶ್ರೀ1008ಶ್ರೀಸತ್ಯಧರ್ಮತೀರ್ಥರ ಮೂಲವೃಂದಾವನ
ಹೊಳೆಹೊನ್ನೂರು

ಆಚಾರ್ಯವಾಣಿ....

(ಧ್ಯಾನಪ್ರಮೋದಾದ್ಯನೇಕ ಪ್ರಶಸ್ತಿಪುರಸ್ಕೃತ
ಪಂ. ಪೂ. ಮಳಗಿ ಜಯತೀರ್ಥಾಚಾರ್ಯರ ಮುನ್ನುಡಿ)

॥ ಗಂಗಾಜನಕ ಶ್ರೀಕೃಷ್ಣಾಯ ನಮಃ ॥
॥ ಶ್ರೀಭಾರತೀರಮಣಾಯ ನಮಃ ॥

ಗಂಗೆಯಲ್ಲಿ ಮೀಯುವ ಮೊದಲು

ವೈಷ್ಣವ ಸಂಸ್ಕೃತಿಯ ಪ್ರತೀಕ ಗಂಗಾ. ಗಂಗೆ ಸದಾ ಜೀವಂತ. ಬತ್ತುವುದಿಲ್ಲ. ವೈಷ್ಣವ ಸಂಸ್ಕೃತಿ ಸದಾ ಹರಿಯುವ ಪ್ರವಾಹ. ಜೀವಂತ ಧಾರಾ. ನಿಲ್ಲದ ಪ್ರವಾಹ. ಗಂಗೆ ಭಾರತೀಯರ ಅಂತರಂಗೆ. ದೇವಿಗಂಗೆ. ಗಂಗಾದೇವಿ. ಶ್ರೀಹರಿಯ ಪ್ರತಿಮೆ ಗಂಗಾ. ಮಹಾನದಿ. ವರುಣನ ಮಡದಿ. ಮಾನವರ ತಾಯಿ. ಪಾವನಗೈಯುವ ಪ್ರವಾಹ. ಹರಿಯ ಪಾದೋದಕ. ಬ್ರಹ್ಮ ನೀಡಿದ ತೀರ್ಥ. ಶಿವನ ಜಡೆಯ ಜಲಧಾರೆ.

ಬೆಳ್ಳಿಯ ಬೆಟ್ಟ ಹಿಮಗಿರಿ. ಉತ್ತುಂಗ ಶಿಖರಗಳು. ಉನ್ನತಗಿರಿ. ನಗಾಧಿರಾಜ. ತಾಳ್ಮೆಯ ಮೂರ್ತಿ. ನಿರ್ವಿಕಾರ ರೂಪಿ. ಉನ್ನತ ಧ್ಯೇಯದ ಪ್ರತೀಕ. ಬದರಿಯಲ್ಲಿ ನಾರಾಯಣನನ್ನು ಹೊತ್ತಗಿರಿ. ಶಿವನಿಗೆ ಕೈಲಾಸದ ತಾಣ ನೀಡಿದಿ ಗಿರಿ. ಈ ಹಿಮಗಿರಿಯ ಶಿಖರದಿಂದ ಧಾವಿಸುವಳೀ ಗಂಗೆ. ಚಿರಂತನ ಉತ್ಸಾಹ. ಬೆಳ್ಳಗಿನ ಹಾಲಿನ ಹೊಳೆ. ತಡೆಯಿಲ್ಲದ ಪ್ರವಾಹ. ನಿತ್ಯವಾದ ನೀರು. ಸದಾ ಹರಿಯುವ ಚೈತನ್ಯ. ಗತಿಶೀಲ ಶಕ್ತಿ. ನಿಲ್ಲುವ ಅಶಕ್ತಿಯಿಲ್ಲ. ಭಾರತೀಯರ ಜ್ಞಾನದಂತೆ. ಚಿರಂತನ ಚಿಂತನ. ಎಲ್ಲರ ಮೈ ಮನ ತೊಳೆಯುವ ತಾಯಿ. ಜ್ಞಾನದ ಧಾರೆಯಂತೆ ಈ ಗಂಗೆ. ಉಚ್ಚ ಬುದ್ಧಿಯ ಗಿರಿಯಿಂದ ಹರಿವ ಜ್ಞಾನಗಂಗೆ.

ಆನಂದ ನೀಡುವ **"ಅಲಕನಂದಾ"**.

ಬದುಕನ್ನು ಭದ್ರಗೊಳಿಸುವ **"ಭದ್ರಾ"**.

ಒಳಗಣ್ಣು ನೀಡುವ **"ಚಕ್ಷು"**

ಇವು ಗಂಗೆಯ ಪ್ರವಾಹಗಳು.
ಇವಳು ಭರತೀಯರ ಬದುಕಿನ ಪಾವನ ಗಂಗೆ.
ಶ್ರದ್ಧೆಯ ಸರ್ವಸ್ವ.
ಭುವಿಯ ಭಾಗ್ಯ.

ಆಸ್ತಿಕರ ಸೌಭಾಗ್ಯ.
ಜನರಿಗೆ ಧನಧಾನ್ಯ ನೀಡುವ ಭಾಗ್ಯದೇವಿ.

ಸ್ವರ್ಗದ ಸಿರಿಯ ನೆಲೆಯಿಂದ ಭಾರತ ಭುವಿಯ ನೆಲಕ್ಕೆ ಇಳಿದು ಬಂದ ಮಹಾ ತಾಯಿ. ಈ ಗಂಗೆಯಿಂದ ಭಾರತವೇ ತೀರ್ಥಕ್ಷೇತ್ರವಾಯಿತು. ಹರಿಯ ದೇವಸ್ಥಾನವಾಯಿತು. 'ದೇವಭೂಮಿಯೆನಿಸಿತು. ಋಷಿಮುನಿಗಳ ಆಶ್ರಮವೆನಿಸಿತು. ಜ್ಞಾನದ ಬೀಜ ಬಿತ್ತಿ ಬೆಳೆಯಲು ನೀರು ನೀಡಿದ ತಾಯಿಯಾದಳು. ಪಾಪ ಕಳೆವ, ಪುಣ್ಯ ತರುವ, ಜೀವನಾಡಿ, ಜೀವನದಿ ಈ ಗಂಗಾಮಾತೆಯಾದಳು.

ಗಂಗೆ ಹರಿಯುವ ನೀರು, ಮಂಗಲವೀವ ಮುತ್ತೈದೆ. ಮೈ ತುಂಬಿದ ನಾರಿ. ಹರನ ಶಿರವೇರಿ ಧರೆಗೆ ಇಳಿದವಳು. ಶಿವ ಹೊತ್ತು, ಹೆತ್ತು, ಇತ್ತ ನೀರು. ಹರಿಯ ಪಾದದಿಂದ ಹರಿದವಳು. ನಾಲ್ಮೊಗನ ಕಮಂಡಲು ನೀರು. ಹೀಗೆ ಗಂಗೆ ವಿಷ್ಣುಭಕ್ತರಿಗೆ ಶಿವನಲ್ಲಿ ಆಸಕ್ತರಿಗೆ, ಬ್ರಹ್ಮವಾದಿಗಳಿಗೆ ಎಲ್ಲರಿಗೂ ಬೇಕಾದವಳು. ತೀರ್ಥಪಾದೆ. ವಿಷ್ಣುಪದಿ. ಇದು ಭಾರತೀಯರ ಧಾರ್ಮಿಕರ ಗಂಗಾಭಾವ. ಗಂಗಾಭಕ್ತಿ.

ಗಂಗೆ ಸುರನದಿ. ದೇವಲೋಕದಲ್ಲಿ ಹರಿವ ನದಿ. ಸುರರು ಮೈತೊಳೆವ ಜಲ. ಸ್ವರ್ಗದ ನೆಲದಲ್ಲಿ ಹರಿವ ಜಲ. ಈ ಜಲದಲ್ಲಿ ಮಿಂದು ಮುಳುಗಿ ದೇವತೆಗಳು ಅಮರರಾದರು. ಅದಕ್ಕೇ ಶ್ರೀರಾಮನ ಹಿರಿಯ ಭಗೀರಥ ತನ್ನ ಹಿರಿಯರ ಉದ್ಧಾರಕ್ಕೆ ಗಂಗೆಯನ್ನು ಪೂಜಿಸಿದ. ಪ್ರಾರ್ಥಿಸಿದ. ಭುವಿಗೆ ಬಂದು ತನ್ನ ಹಿರಿಯರನ್ನು ಉದ್ಧರಿಸಲು ಕೇಳಿದ. ಕೈ ಮುಗಿದು ಬೇಡಿದ. ಗಂಗೆ ಒಲಿದಳು. ಹರನ ಜಡೆಯಲ್ಲಿ ಇಳಿದಳು. ಹಿಮಗಿರಿಯಿಂದ ಬಂದಳು. ಅಂತೆಯೇ **ಭಾಗೀರಥಿಯಾದಳು**.

ಜಹ್ನುವಿನಿಂದ **ಜಾಹ್ನವೀಯಾದಳು**.

ಮಂದರನ್ನು ಉದ್ಧರಿಸುವ **ಮಂದಾಕಿನಿಯಾದಳು**.

ಪಾಪ ತೊಳೆದು **ಪಾವನಗೈವ ತಾಯಿಯಾದಳು**. ದೇಹ ತೊಳೆದು, ಮನದ ಕಳೆಯ ಕಳೆದು, ತಾಪ ಹರಿದು, ಕಂಡವರನ್ನೆಲ್ಲ ಕಾಪಾಡುವ ಮಹಾಮಾತೆಯಾದಳು. ಪತಿತ ಪಾವನೆ ತಾಯಿ ಗಂಗೆ. ಜಗವೇ ನಂಬಿದ ಜಗದಂಬೆ. ಭೇದ ತೊರೆದು ಹತ್ತಿರ ಕರೆದು ಪಾಪ ಕಳೆವ ಮಾತೆ.

ಗಂಗೆ ಹಿರಿಮೆ ವೇದದಲ್ಲಿ ಮೊದಲು ಬಂದಿತು. **"ಇಮಂ ಮೇ ಗಂಗೇ ಯಮುನೇ ಸರಸ್ವತಿ", "ಸಿತಾಽಸಿತೆ ಸರಿತೇ ಯತ್ರ ಸಂಗತೇ" "ಬಿಳಿಯ ಹಾಲು ಹೊಳೆ ಗಂಗೆ, ಕಪ್ಪು ನೀರಿನ ಕೃಷ್ಣೆ ಯಮುನೆ ಕೂಡುವ ಸ್ಥಳವೇ ತ್ರಿವೇಣಿ ಸಂಗಮ. ಅಲ್ಲಿ ಮುಳುಗಿ ಮಿಂದವ ಮೋಕ್ಷದೂರಿಗೆ ತೆರಳುವ"** ಎಂದು ವೇದ ಹೊಗಳಿದೆ. ಗಂಗೆಯನ್ನು ಮೂಲರಾಮಾಯಣ, ಮಹಾಭಾರತ, ಭಾಗವತ, ವಿಷ್ಣುಪುರಾಣಾದಿ 18 ಪುರಾಣಗಳು,

ವಾಲ್ಮೀಕಿಯ ರಾಮಾಯಣ, ನೂರಾರು ಸ್ಮೃತಿಗಳು, ಧರ್ಮಶಾಸ್ತ್ರಗಳು, ಹೀಗೆ ಅಪಾರವಾದ ಆಧ್ಯಾತ್ಮಿಕ ವಾಙ್ಮಯದ ತುಂಬೆಲ್ಲಾ ಗಂಗೆಯ ಮಹಿಮೆ, ಚರಿತ್ರೆ, ಇತಿಹಾಸ, ಸ್ತೋತ್ರ, ನಾಮಾವಳಿ, ಪೂಜಾವಿಧಾನ, ತೀರ್ಥವಿಧಿ, ಸ್ನಾನ ಎಲ್ಲವೂ ನಿರೂಪಿಸಲ್ಪಟ್ಟಿವೆ. ಗಂಗೆಗೆ ದೊರೆತಷ್ಟು ವಾಙ್ಮಯ ಪ್ರಾಯಃ ಅನ್ಯರಿಗೆ ದೊರೆತಿಲ್ಲ. ಮುಂದೆ ಸಂಸ್ಕೃತ ಸಾಹಿತ್ಯದಲ್ಲಿ ನೂರಾರು ಕವಿಗಳು ಸಾವಿರಾರು ವರ್ಷಗಳಿಂದ ಗಂಗೆಯ ಮೇಲ್ಮೆ, ಮಹಿಮೆ, ಹಿರಿಮೆ ಗರಿಮೆಯನ್ನು ರಸಪೂರ್ಣವಾಗಿ ಹಾಡಿ ಹೊಗಳಿದ್ದಾರೆ. ಜಗತ್ತಿನ ಯಾವ ನದಿಯೂ ಆಧ್ಯಾತ್ಮಿಕವಾಗಿ, ಧಾರ್ಮಿಕವಾಗಿ, ಸಾಹಿತ್ಯಿಕವಾಗಿ ಹೊಗಳಿಸಿಕೊಂಡಿದ್ದೇ ಇಲ್ಲ. ಇವಳೇ ದೇವನದಿ. ನದಿಯ ರೂಪದ ದೇವತೆ. ಇವಳಿಗಿದ್ದಷ್ಟು ಚಾರಿತ್ರಿಕವಾಙ್ಮಯ ಯಾರಿಗೂ ಇಲ್ಲ.

"ವೈಷ್ಣವಾನಾಂ ಯಥಾ ಶಂಭುಃ" ವಿಷ್ಣುಭಕ್ತರಲ್ಲಿ ಶಿವ ಶ್ರೇಷ್ಠ ಭಕ್ತನಿದ್ದಂತೆ. **"ನಿಮ್ನಗಾನಾಂ ಯಥಾ ಗಂಗಾ"** ಹರಿಯು ನದಿಗಳಲ್ಲಿ ಗಂಗೆ ಅತಿ ಶ್ರೇಷ್ಠ ಎನ್ನುವುದು ಭಾಗವತ.

ಶಿವನು ವೈಷ್ಣವರಿಗೆ ಕರುಣಿಸಿದ ಕಾಣಿಕೆ ಎರಡು. ಒಂದು ಭಾಗವತ ಗಂಗೆ. ಇನ್ನೊಂದು ಭಾಗೀರಥಿ ಗಂಗೆ. ಹರಿಯ ಮುಖದಿಂದ ಹರಿದ ಜ್ಞಾನಗಂಗೆ ತಲೆಯಲ್ಲಿ ಧರಿಸಿ ಶುಕರೂಪದಿಂದ ನೀಡಿದರು. ಹರಿಯ ಪಾದದಿಂದ ಹರಿದ ಪ್ರವಾಹವನ್ನು ಶಿವ ತಲೆಯ ಮೇಲೆ ಧರಿಸಿ ನೀಡಿದ. ಹಾಗಾಗಿ ಭಾಗವತ ಶಾಸ್ತ್ರ, ಭಾಗೀರಥೀ ತೀರ್ಥ ಶಿವ ವೈಷ್ಣವರಿಗೆ ನೀಡಿದ.

"ಗಂ" ಗರುಡಾಸನನಾದ ಶ್ರೀಹರಿಯನ್ನು "ಗಾಯತಿ" ಗಾನ ಮಾಡುವಳು ಇವಳು ಅಂತೆಯೇ "ಗಂಗಾ" ಎನ್ನುವರು.

"ಗಂ ಗಮಯತಿ" ಹರಿಯನ್ನು ಹೊಂದಿಸುವಳು.

"ಗಂಗಾ" ಇದು ಹರಿಯ ನಾಮ. ಗಂಗೆಯ ನೀರು ಹರಿಯ ಸ್ವರೂಪ. ಹರಿಯ ಪ್ರತಿಮೆ. ಹರಿಯೇ ಗಂಗೆಯ ನೀರಿನ ಆಕಾರದಲ್ಲಿ, ದ್ರವರೂಪದಿಂದ ಹರಿಯುತ್ತಿರುವ ಇದು ವೇದಾಂತಿಗಳ ಅನುಸಂಧಾನ.

"ಯೋಽಸೌ ಸರ್ವಗತೋ ದೇವಃ ಚಿತ್‌ಸ್ವರೂಪೀ ನಿರಂಜನಃ ।
ಸ ಏವ ದ್ರವರೂಪೇಣ ಗಂಗಾಂಭಃ ನಾತ್ರ ಸಂಶಯಃ ॥"

"ಸರ್ವವ್ಯಾಪಿಯಾದ ಭಗವಂತ, ನಿರ್ದೋಷ. ನಿರ್ಮಲ, ಜ್ಞಾನರೂಪಿ. ಅವನೇ ದ್ರವರೂಪದ ಗಂಗೆಯ ನೀರು. ಇದರಲ್ಲಿ ಸಂಶಯವೇ ಇಲ್ಲ." ಇದು ಸಿದ್ಧಾಂತ. ಆಕಾಶದಲ್ಲಿ ಸ್ವರ್ಗ, ಭೂಮಿಯ ನೆಲ, ಪಾತಾಳದ ತಳದಲ್ಲಿ ಹೀಗೆ ಮೂರು ಲೋಕದಲ್ಲಿ ಹರಿಯುವ ಏಕನದಿಯೇ ತಾಯಿ ಗಂಗೆ.

ನಂದಿನೀ ನಲಿನೀ ಸೀತಾ ಮಾಲತೀ ಚ ಮಲಾಪಹಾ ।
ವಿಷ್ಣುಪಾದಾಬ್ಜಸಂಭೂತಾ ಗಂಗಾ ತ್ರಿಪಥಗಾಮಿನೀ ॥

ಗಂಗೆಗೆ "ನಂದಿನಿ, ನಲಿನಿ, ಸೀತಾ, ಮಾಲತೀ, ಮಲಾಪಹಾ, ಅಲಕನಂದಾ, ಚಕ್ಷು, ಭದ್ರಾ, ವಿಷ್ಣುಪದೀ ಎಂಬ ಅನೇಕ ಹೆಸರುಗಳಿವೆ. ನಿತ್ಯ ಸ್ನಾನಕಾಲದಲ್ಲಿ ಎಲ್ಲಿಯೇ ಯಾವುದೇ ನೀರಿನಿಂದ ಸ್ನಾನ ಮಾಡುವಾಗ "ಗಂಗಾ, ಗಂಗಾ" ಎಂದು ಉಚ್ಚರಿಸಿದರೆ ಆ ನೀರಿನಲ್ಲಿ ಗಂಗೆ ಬರುವಳು. ಆ ಸ್ನಾನ ಪಾವನಗೊಳಿಸುವುದು. ಭಾರತೀಯರ ನಿತ್ಯಜೀವನದಲ್ಲಿ ಗಂಗೆ ಪಡೆದ ಸ್ಥಾನ. ಮಾನ. ಆದರ, ಗೌರವ.

ಇಂತಹ ಅಪಾರಮಹಿಮೆಯ ಗಂಗೆಯನ್ನು ಸಂಸ್ಕೃತದ ಇಪ್ಪತ್ತೆಂಟು ಪದ್ಯಗಳಲ್ಲಿ ಲಹರಿಯಾಗಿ ನೀಡಿದವರು ಶ್ರೀಶ್ರೀಸತ್ಯಧರ್ಮರು. ಶ್ರೀಸತ್ಯಬೋಧತೀರ್ಥರ ವಿದ್ಯಾಶಿಷ್ಯರು. ಅದ್ಭುತ ಪಂಡಿತರು. ವ್ಯಾಖ್ಯಾನಕಾರರು. ಹತ್ತಾರು ಬೃಹತ್ ಲೇಖಕರು. ಕವಿಗಳು, ಅಪರೋಕ್ಷಜ್ಞಾನಿಗಳು. ಉತ್ತರಾದಿಮಠಾಧೀಶರು. ಅವರ "ಗಂಗಾಲಹರಿ" ಸ್ತೋತ್ರವೂ ಹೌದು. ಅದು ಶಾಸ್ತ್ರವೂ ಹೌದು. ಅದು ಇತಿಹಾಸವೂ ಹೌದು. ಮಂತ್ರವೂ ಹೌದು. ಗಂಭೀರ ಶಬ್ದಗಳಿಂದ, ಮಂಜುಲ ಮಾತುಗಳಿಂದ, ಮಧುರ ಕುಣಿತದಿಂದ ಶಿಖರಿಣಿಯಾಗಿ ಸಂಸ್ಕೃತದಲ್ಲಿ ಕುಣಿದಳು. ಲಹರಿಯಾಗಿ ಹರಿದಳು. ಆದರೆ ಈ ಮಿತ ಮಾತಿನ ಅರ್ಥ ಕನ್ನಡಿಗರಿಗೆ ಆಗುವ ಬಗೆ ಹೇಗೆ?

ಅದಕ್ಕಗಿ ಕನ್ನಡದ ಬಯಲು ಭೂಮಿಯಲ್ಲಿ ಹೃದ್ಯಗದ್ಯದಲ್ಲಿ ಈ ಗಂಗೆ ಹರಿಸುವ ಪುಟ್ಟ ಭಗೀರಥ ಬೇಕಾಯಿತು. ಆ ಕಾರ್ಯವನ್ನು ಭಗೀರಥನಾಗಿ ನಿರ್ವಹಿಸಿದವನು ನನ್ನ ಶಿಷ್ಯ ಪಂ. ಭೀಮಸೇನಾಚಾರ್ಯ ಮಳಗಿ. ಇಪ್ಪತ್ತೈದು ವರ್ಷಗಳಿಂದ ನನ್ನ ಒಡನಾಡಿ. ನನ್ನಲ್ಲಿ ಓದಿದ ಶಿಷ್ಯ. ಅಭಿಮಾನಿ. ಇವನು ಸಂಶೋಧಕ. ವಿಮರ್ಶಕ. ಉಪನ್ಯಾಸಕ. ಅಧ್ಯಯನಶೀಲ. ಸದಾ ಪಾಠಪ್ರವಚನದೀಕ್ಷಾಸಂಪನ್ನ, ಸೃಜನಶೀಲ. ಸದಾಚಾರಿ ಈಗಾಗಲೇ ಹತ್ತಾರು ಮೌಲಿಕ ಕೃತಿಗಳನ್ನು ರಚಿಸಿದ ಲೇಖಕ. ಸಾಹಸಿ, ವಿಚಾರಸಾಮರ್ಥ್ಯ, ಭಾಷಾಪ್ರಭುತ್ವ, ಲೇಖನಶೈಲಿ, ಮಾತನಾಡುವ ಕಲೆ, ವಿಚಾರಗಳಲ್ಲಿ ಸ್ವಂತಿಕೆ, ತನ್ನದೇ ದೃಷ್ಟಿಯಲ್ಲಿ ಕಾಣುವಿಕೆ, ಪ್ರತಿಭೆ, ಪಾಂಡಿತ್ಯ ಇವನಿಗೆ ಒಲಿದಿವೆ. ಇದು ಶ್ರೀಹರಿವಾಯುಗಳ ಒಲುಮೆ. ನನ್ನ ಶಿಷ್ಯ ಭೀಮಸೇನ ಛಲಗಾರ. ಮಾಡಬೇಕೆಂಬುದನ್ನು ಮುಂದು ಹಾಕುವುದಿಲ್ಲ. ಮಾಡಿಯೇ ತೀರುವ. ಅಂತೆಯೇ ಇವನಿಂದ ಸಂಘಟನೆ, ಉತ್ಸವ, ಗ್ರಂಥ ಪ್ರಕಾಶನ, ಲೇಖನಗಳು ನಿಲ್ಲದೇ ನಿರಂತರವಾಗಿ ನಡೆಯುತ್ತಿವೆ. ಎಡರು, ತೊಡರು, ತೊಡಕುಗಳಿಗೆ ಹಿಂದೆ ಸರಿಯದೇ ಮುನ್ನಡೆ ಇಡುವ ಮಾಡಿಯೇ ತೀರುವ.

ಇವನು ಶ್ರೀಸತ್ಯಧರ್ಮರ ಗಂಗಾಲಹರಿಗೆ ಕನ್ನಡ ಗದ್ಯ ವೇದಿಕೆಯನ್ನು ಏರಿಸಿದ. ಅವಳಿಗೆ ಮುನ್ನೆಲೆ, ಹಿನ್ನೆಲೆ ಚನ್ನಾಗಿ ಒದಗಿಸಿ, ಅಲಂಕರಿಸಿ, ಗಂಗೆಯನ್ನು

ಕನ್ನಡಕ್ಕೆ ತಂದಿದ್ದಾನೆ. ಮುನ್ನೆಲೆಯಲ್ಲಿಯೂ ಗಂಗೆಯ ಹಿರಿಮೆ ಸಾರಿ, ಕವಿರಾಜರಾದ ಶ್ರೀಸತ್ಯಧರ್ಮತೀರ್ಥರ ಚರಿತ್ರೆ, ಬರಹ, ರಚನೆಯ ಹಿನ್ನೆಲೆ ನೀಡಿ, ಗಂಗಾಲಹರಿಯನ್ನು ಸುಂದರವಾಗಿ ಅನುವಾದಿಸಿದ್ದಾನೆ.

ಮುಂದೆ ಹಿನ್ನೆಲೆಯಾಗಿ "ಶಿಖರಿಣಿ" ವೃತ್ತದ ಬಗ್ಗೆ ವೃತ್ತಶ್ಶಾಸ್ತ್ರದ ವಿಮರ್ಶೆ ಮಾಡಿ, ಮಹತ್ವ ಹೇಳಿ ವೃತ್ತದ ಔಚಿತ್ಯ ನೀಡಿದ್ದಾನೆ. ಶ್ರೀಸತ್ಯಧರ್ಮರ ಗಂಗಾಲಹರಿಯಲ್ಲಿಯ ವೈಶಿಷ್ಟ್ಯಗಳನ್ನು ಎತ್ತಿ ತೋರಿಸಿದ್ದಾನೆ. ಅಲ್ಲಿಯ ಘಟನೆ, ಶಬ್ದಗಳಿಗೆ ಇತಿಹಾಸ ಪುರಾಣಗಳ ಹಿನ್ನೆಲೆ ಕೊಟ್ಟಿದ್ದಾನೆ. ಇಲ್ಲಿ ಬಂದ ಹರಿವಾಯುಗಳ ಮಹಿಮೆ, ವೈಭವ, ನೀತಿ, ತತ್ತ್ವ, ಪ್ರಮೇಯ ಬೋಧನೆಗಳನ್ನು ನಿರೂಪಿಸಿದ್ದಾನೆ.

ಶ್ರೀಸತ್ಯಧರ್ಮರ ಪ್ರತಿಮಾತಿನ ಗಾಂಭೀರ್ಯ, ಚಾತುರ್ಯ, ಮಾಧುರ್ಯ, ರಹಸ್ಯ, ಸ್ವಾರಸ್ಯಗಳನ್ನು ಎತ್ತಿ ತೋರಿಸಿದ್ದಾನೆ.

ಗಂಗೆಯ ಬಗ್ಗೆ ಇರುವ ವಿವಿಧ ಸ್ತೋತ್ರ, ಮಂತ್ರ, ನಾಮಾವಲಿ, ಹಾಡುಗಳನ್ನು ಸಂಗ್ರಹಿಸಿ ನೀಡಿದ್ದಾನೆ. ಹಾಗಾಗಿ ಈ ಗ್ರಂಥ ತನ್ನ ಉಪಯುಕ್ತತೆಯನ್ನು ಹೆಚ್ಚಿಸಿಕೊಂಡಿದೆ. ಪರಿಪೂರ್ಣ ಕೃತಿಯಾಗಿದೆ. ಅದಕ್ಕಾಗಿ ಈತನನ್ನು ಅಭಿನಂದಿಸುವೆ.

ಶ್ರೀಹರಿವಾಯು ಗುರುಗಳು ಇವನಿಗೆ ಇನ್ನೂ ಹೆಚ್ಚಿನ ಶಕ್ತಿ ಸಾಮರ್ಥ್ಯ, ಉತ್ಸಾಹ, ಪ್ರತಿಭೆ, ಆಯು, ಆರೋಗ್ಯ ನೀಡಿ ಇನ್ನೂ ಹೆಚ್ಚು ಕೃತಿಗಳು ಇವನಿಂದ ಬರುವಂತೆ ಮಾಡಲೆಂದು ಕುಲದೈವ ಶ್ರೀಗೋಪಾಲಕೃಷ್ಣನಲ್ಲಿ ಪ್ರಾರ್ಥಿಸುವೆ.

ಆಶ್ವೀನ ಪೌರ್ಣಿಮಾ
ಶ್ರೀವೇದವ್ಯಾಸ ವಿದ್ಯಾಪೀಠ,
ಗಾಂಧೀನಗರ, ಧಾರವಾಡ.

ಪಂ.ಜಯತೀರ್ಥಾಚಾರ್ಯ ಮಳಗಿ
ನಿವೃತ್ತ ಪ್ರಾಧ್ಯಾಪಕರು

ವಿಷಯಸೂಚಿ

ನನ್ನುಡಿ...

॥ ಶ್ರೀಶ್ರುತೀಶಂ ವಂದೇ ॥
॥ ಶ್ರೀಸತ್ಯಾತ್ಮತೀರ್ಥಗುರುಭ್ಯೋ ನಮಃ ॥

ಭಾರತ ಪುಣ್ಯತಮದೇಶ. ಧರ್ಮಭೂಮಿ. ಕರ್ಮಭೂಮಿ. ಈ ದೇಶದ ಪ್ರದೇಶಗಳು ತೀರ್ಥಕ್ಷೇತ್ರಗಳು. ಇಲ್ಲಿರುವ ಗುಡ್ಡಗಳು ಪವಿತ್ರಪರ್ವತಗಳು. ಹರಿಯುವ ನೀರು ಪವಿತ್ರನದಿಗಳು. ಇಂಥ ನೂರಾರು ನದಿಗಳ ಸಾಲಿನಲ್ಲಿ 'ಗಂಗಾನದಿ' ಅತ್ಯುತ್ತಮಳು.

ಶ್ರೀಗಂಗಾದೇವಿ ತ್ರಿವಿಕ್ರಮನ ಪಾದದಡಿಯಿಂದ ಬಂದವಳು (**ವಿಷ್ಣುರ್ವಿಕ್ರಮತೋ ವಾಮಪಾದಾಂಗುಷ್ಠನಖನಿರ್ಭಿಣ್ಣೋರ್......** ಭಾಗ .) ಜೀವೋತ್ತಮ ಚತುರ್ವದನನ ಕಮಂಡಲುವಿನಲ್ಲಿ ಕುಳಿತವಳು (**ಅಥಾಂಘ್ರಯೇ ಪ್ರೋನ್ನಮಿತಾಯ ವಿಷ್ಣೋರುಪಾಹರತ್ ಪದ್ಮಭವೋSರ್ಹಣಾದಿಕಮ್॥** ಭಾಗ.) ವೈಷ್ಣವೋತ್ತಮ ಹರನ ಜಡೆಯಲ್ಲಿ ಮಲ್ಲಿಗೆಯ ಮಾಲೆಯಾದವಳು (**ಗಗನಾಚ್ಛಂಕರಶಿರಸ್ತತೋ ಧರಣಿಮಾಗತಾ** ರಾಮಾ. ..... **ಶಿವಃ ದಧಾರಾವಹಿತೋ ಗಂಗಾಂ ಪಾದಪೂತಜಲಾಂ ಹರೇಃ।** ಭಾಗ.9.8). ಸೂರ್ಯವಂಶಪ್ರದೀಪ ಭಗೀರಥನಿಂದ ಭಾರತದ ಭುವಿಗೆ ಬಂದವಳು. ಜಹ್ನುವಿನಿಂದ ಜಾಹ್ನವಿಯಾದವಳು. ಹಿಮವತ್ಪರ್ವತರಾಜನ ಮಗಳಾಗಿ ಪಾರ್ವತಿಗೆ ಹಿರಿಯ ಸೋದರಿಯೆನಿಸಿದವಳು (**ಜ್ಯೇಷ್ಠಾ ಶೈಲೇಂದ್ರದುಹಿತಾ...** ರಾಮಾ.). ಶಿವನ ಮಗ ಷಣ್ಮುಖನನ್ನು ಗರ್ಭದಲ್ಲಿ ಧರಿಸಿದ ತಾಯಿ (**ಸರ್ವಸ್ರೋತಾಂಸಿ ಪೂರ್ಣಾನಿ ಗಂಗಾಯಾ ರಘುನಂದನ** । ರಾಮಾ.) ಶ್ರೀವರುಣದೇವನ ಮಡದಿ. ಶಂತನುವಿನಿಂದ ಪಿತಾಮಹ ಭೀಷ್ಮನಿಗೆ ಜನ್ಮನೀಡಿದವಳು. (**ಶಂತನೋರಪ್ಯಮರನದ್ಯಾಂ ಜಾಹ್ನವ್ಯಾಮುದಾರುಕೀರ್ತಿರಶೇಷ ಶಾಸ್ತ್ರಾರ್ಥವಿದ್ಭೀಷ್ಮಃ ಪುತ್ರೋSಭೂತ್** । ವಿ. ಪು.) ಇವು ಶ್ರೀಗಂಗಾದೇವಿಯ ಪ್ರಮುಖ ಪವಿತ್ರಗಾಥೆಗಳು.

ಅನಾದಿ ವೇದಗಳು ಮುಕ್ತಕಂಠದಿಂದ ಶ್ರೀಗಂಗಾದೇವಿಯನ್ನು ಹೊಗಳಿವೆ. ನದಿಗಳನ್ನು ವರ್ಣಿಸುವ ಸಂದರ್ಭದಲ್ಲಿ ಮೊದಲಿನ ಸ್ಥಾನ ಶ್ರೀಗಂಗಾದೇವಿಗೇ ಮೀಸಲಿಟ್ಟಿವೆ. (**ಇಮಂ ಮೇ ಗಂಗೇ ಯಮುನೇ...**)

ಆದಿಕವಿ ಶ್ರೀವಾಲ್ಮೀಕಿಗಳು ತನ್ನ ರಾಮಾಯಣದಲ್ಲಿ ಇವಳ ಚರಿತ್ರೆಯನ್ನು ವರ್ಣಿಸಿದರು. ಇದು ಪೌರುಷೇಯ ವಾಙ್ಮಯದ ಆದಿದಾಖಲೆ.

ಶ್ರೀವಾಲ್ಮೀಕಿಗಳು ಸೂರ್ಯವಂಶದ ದೊರೆಗಳ ಚರಿತ್ರೆಯಲ್ಲಿ ಬರುವ ಗಂಗೆಯ ಪಾತ್ರವನ್ನು ಸುಂದರವಾಗಿ ಚಿತ್ರಿಸಿದ್ದಾರೆ. ಜೊತೆಗೆ ಷಣ್ಮುಖನ ಅವತಾರದ ಪ್ರಸಂಗದಲ್ಲೂ ಗಂಗಾದೇವಿಯ ಸಾಧನೆಯನ್ನು ಬಣ್ಣಿಸಿದ್ದಾರೆ. ಆದರೆ; ಅದರ ಹಿಂದಿನ ಕಥೆಯನ್ನು ಅವರು ನಮೂದಿಸಿಲ್ಲ. ಬೇರೆ ಗಂಗಾಸ್ತೋತ್ರಗಳನ್ನೂ ಕಾಣಿಸಿಲ್ಲ. ಕಾರಣ ಆ ಕಾವ್ಯಕ್ಕೆ (ರಾಮಾಯಣಕ್ಕೆ) ಅದು ಅಪ್ರಸ್ತುತ.

ಹಾಗಾದರೆ ಆ ಪೂರ್ವಕಥೆ ನಮಗೆ ಬೇಕಲ್ಲ! ಶ್ರೀಗಂಗಾದೇವಿಯ ಸಮಗ್ರ ಮಾಹಿತಿಯೊಂದಿಗೆ ಆ ಕಥೆಯನ್ನು ತಿಳಿಯ ಬೇಕಾದರೆ, ನಾವು ಶ್ರೀವೇದವ್ಯಾಸರ ಮೊರೆಹೋಗಬೇಕು. ಸುಮಾರು 5000 ವರ್ಷಗಳ ಹಿಂದೆ(?) ಶ್ರೀಗಂಗಾದೇವಿಯ ಮೊದಲ ಪ್ರಸಂಗದಿಂದ ಹಿಡಿದು ಗಂಗೆಯನ್ನು ಪೂರ್ತಿಯಾಗಿ ತಮ್ಮಯ ಭಾಗವತ-ಭಾರತಾದಿಗಳಲ್ಲಿ ಪರಿಚಯಿಸಿದವರು ಶ್ರೀವೇದವ್ಯಾಸರು.

ಆ (ಶ್ರೀವಾಲ್ಮೀಕಿಗಳು ಹೇಳದ) ಪೂರ್ವಕಥೆ ಹೀಗಿದೆ-

ಪುರಾ ಬಭೂವ ಗೋಲೋಕೇ ಸಾ ಗಂಗಾ ದ್ರವರೂಪಿಣೀ।
ರಾಧಾಕೃಷ್ಣಾಂಗಸಂಭೂತಾ ತದಂಶಾ ತತ್ಸ್ವರೂಪಿಣೀ ॥

ಶ್ರೀಗಂಗಾಮಾತೆ ಗೋಲೋಕದಲ್ಲಿದ್ದ ಸರ್ವೋತ್ತಮ ಶ್ರೀಮನ್ನಾರಾಯಣನ ಮತ್ತು ರಾಧಾರೂಪದ ಶ್ರೀಲಕ್ಷ್ಮೀದೇವಿಯ ಮಗಳು.

ಅದೊಂದು ದಿನ ದೇವಲೋಕದ ಸುರರಮಣಿಯರಾದ ಶ್ರೀಲಕ್ಷ್ಮೀ, ಶ್ರೀಸರಸ್ವತಿ ಮತ್ತು ಶ್ರೀಗಂಗಾದೇವಿಯರ ನಡುವೆ (ಪ್ರೇಮ?)ಕಲಹ ಪ್ರಾರಂಭವಾಯಿತು. ಶ್ರೀಸರಸ್ವತಿದೇವಿ ಕೋಪದಿಂದ ಶ್ರೀಲಕ್ಷ್ಮೀದೇವಿಯನ್ನು 'ನದಿ'ಯಾಗೆಂದು ಶಪಿಸಿದಳು. **(ಪರಶುಕ್ಲಳಾದ, ಶುದ್ಧಸತ್ವಮೂರ್ತಿನಿಯಾದ ಶ್ರೀಸರಸ್ವತಿಯು ಭಗವಂತನಿಚ್ಛೆಯಂತೆ ಮಾಡಿದ ನಟನೆಯಿದು ಎಂದು ಭಾವಿಸಬೇಕು.)** ಆಗ ಶ್ರೀಗಂಗಾಮಾತೆಗೆ ಸಿಟ್ಟು ಬಂದು, ನೀನೂ 'ನದಿ'ಯಾಗಿ ಭೂಲೋಕದಲ್ಲಿ ಪ್ರವಹಿಸು ಎಂದು ಶಪಿಸಿದಳು. ಆಗ ಮತ್ತಷ್ಟು ಕಡುಕೋಪದಿಂದ ಶ್ರೀಸರಸ್ವತಿದೇವಿಯು ಶ್ರೀಗಂಗಾಮಾತೆಗೆ, ನೀನೂ ಭೂಲೋಕದಲ್ಲಿ 'ನದಿ'ಯಾಗಿ ಹರಿಯುವಂತಳಾಗು ಎಂದು ಶಪಿಸಿದಳು. ಈ ಶಾಪದ ಪ್ರಸಂಗ ಮುಗಿವ ಸಂದರ್ಭದಲ್ಲಿ ಶ್ರೀನಾರಾಯಣ ಆ ಸ್ಥಳದಲ್ಲಿ ಪ್ರತ್ಯಕ್ಷನಾಗಿ ಈ ಮೂವರಿಗೂ ಈ ರೀತಿ ಆಜ್ಞೆ ಮಾಡಿದ

"ಕಲಯಾ ಚ ಸರಿದ್ಭೂತ್ವಾ ಶೀಘ್ರಂ ಗಚ್ಛ ವರಾನನೇ ।
ಭಾರತಂ ಭಾರತೀಶಾಪಾನ್ನಾಮ್ನಾ ಪದ್ಮಾವತೀ ಭವ ॥
ಗಂಗೇ ಯಾಸ್ಯಸಿ ಚಾಂಶೇನ ಪಶ್ಚಾತ್ತ್ವಂ ವಿಶ್ವಪಾವನೀ ।
ಭಾರತಂ ಭಾರತೀಶಾಪಾತ್ಪಾಪದಾಹಾಯ ದೇಹಿನಾಮ್ ॥

ಭಗೀರಥಸ್ಯ ತಪಸಾ ತೇನ ನೀತಾ ಸುದುಷ್ಕರಾತ್ ।
ನಾಮ್ನಾ ಭಾಗೀರಥೀ ಪೂತಾ ಭವಿಷ್ಯಸಿ ಮಹೀತಲೇ ॥
ಮದಂಶಸ್ಯ ಸಮುದ್ರಸ್ಯ ಜಾಯಾ ಜಾಯೇ ಮಮಾಜ್ಞಯಾ ।
ಮತ್ಕಲಾಂಶಸ್ಯ ಭೂಪಸ್ಯ ಶಂತನೋಶ್ಚ ಸುರೇಶ್ವರಿ ॥
ಗಂಗಾಶಾಪೇನ ಕಲಯಾ ಭಾರತಂ ಗಚ್ಛ ಭಾರತೀ ।"

ಇದು ಭಗೀರಥಪ್ರಯತ್ನದ ಮೊದಲು ನಡೆದ ದೇವಲೋಕದ ವ್ಯಾಪಾರ. ಶ್ರೀವ್ಯಾಸರು ಇದನ್ನು ಇಷ್ಟಕ್ಕೇ ಬಿಡದೆ; ಮುಂದೆ ಇನ್ನೂ ವಿಸ್ತರಿಸುತ್ತಾರೆ.

ಶ್ರೀಭಗೀರಥ ತಪಸ್ಸು ಮಾಡಿದ. ಆಗ ಗೋಲೋಕದೊಡೆಯ ಶ್ರೀಕಿಶೋರ ವೇಣುಕೃಷ್ಣ ಪ್ರತ್ಯಕ್ಷನಾದ. ಶ್ರೀಭಗೀರಥನಿಗೆ ಅನುಗ್ರಹ ನೀಡಿ; ಶ್ರೀಗಂಗಾದೇವಿಯನ್ನು ಸ್ಮರಿಸಿದ. ಒಡನೆಯೇ ಗಂಗಾದೇವಿ ಶ್ರೀವಿಷ್ಣುವಿನಿಂದ ಮುಂದೆ ಕೈಜೋಡಿಸಿ ನಿಂತಳು. ಆಗ ಭಗವಂತ–

"ಭಾರತಂ ಭಾರತೀಶಾಪಾತ್ ಗಚ್ಛ ಶೀಘ್ರಂ ಸುರೇಶ್ವರಿ ।
ಸಗರಸ್ಯ ಸುತಾನ್ಪೂರ್ವಾನ್ಪೂತಾನ್ಕುರು ಮಮಾಜ್ಞಯಾ ।
ತ್ವತ್ಸ್ಪರ್ಶವಾಯುನಾ ಪೂತಾ ಯಾಸ್ಯಂತಿ ಮಮ ಮಂದಿರಮ್ ॥" ಎಂದು ಆದೇಶಿಸಿದ. ವಿಷ್ಣುವಿನ ಈ ಆದೇಶವನ್ನು ಹೊಂದಿ ಅನಂತರ ಗಂಗಾದೇವಿಯು ಭಗೀರಥನನ್ನು ಬೆನ್ನಟ್ಟಿ ಭಾಗೀರಥಿಯಾದಳು! ಮುಂದಿನ ಶ್ರೀಗಂಗಾಕಥೆ ವಾಲ್ಮೀಕಿ ರಾಮಾಯಣದಲ್ಲಿದೆ. ಶ್ರೀವ್ಯಾಸರ ಗ್ರಂಥಗಳಲ್ಲೂ ವಿಸ್ತಾರವಾಗಿದೆ. ಜೊತೆಗೆ ಅನೇಕ ಶ್ರೀಗಂಗಾಸ್ತೋತ್ರಗಳೂ ಇವೆ. ಹೀಗೆ ಶ್ರೀವೇದವ್ಯಾಸರು ಶ್ರೀಗಂಗಾದೇವಿಯ ಸಮಗ್ರ ಮಾಹಿತಿಯನ್ನು ತಮ್ಮಯ ಗ್ರಂಥಗಳಲ್ಲಿ ವಿವರಿಸಿದ್ದಾರೆ.

ಇವರ ನಂತರದ ವಾಙ್ಮಯಗಳಲ್ಲೂ ಅನೇಕ ಕವಿಗಳು ಶ್ರೀಗಂಗಾದೇವಿಗೆ ಉತ್ಕೃಷ್ಟಸ್ಥಾನವನ್ನು ನೀಡಿದ್ದಾರೆ. ಭಕ್ತಿಯಿಂದ ಅವಳನ್ನು ಆರಾಧಿಸಿದ್ದಾರೆ. ಈ ಸಾಲಿನಲ್ಲಿ ಶ್ರೀವೇದವ್ಯಾಸರ ನಿಜಾನುಯಾಯಿಗಳಾದ ಶ್ರೀಮಾಧ್ವರು ಅದ್ವಿತೀಯರು. ಮಾಧ್ವ ವಾಙ್ಮಯದ ಅನೇಕ ದಾಸಶ್ರೇಷ್ಠರೂ ಇವಳನ್ನು ಮುಕ್ತಕಂಠದಿಂದ ಕನ್ನಡದಲ್ಲಿ ಕೊಂಡಾಡಿದ್ದಾರೆ. ಸಂಸ್ಕೃತದ ಸ್ತೋತ್ರಗಳ ಮುಖಾಂತರ ಇವಳನ್ನು ಮೆಚ್ಚಿಸಿದವರೇ ಹೆಚ್ಚು. ಕನ್ನಡದ ಗಂಗಾಸ್ತೋತ್ರಗಳು ಮನಸ್ಸಿಗೆ ಮುದನೀಡುವಂತೆ ಸಂಸ್ಕೃತದ ಗಂಗಾ ಸ್ತೋತ್ರಗಳೂ ಮನಸ್ಸನ್ನು ಸಂತೋಷಗೊಳಿಸುತ್ತವೆ. ವಿಶಿಷ್ಟಭಕ್ತಿಯನ್ನು ಜಾಗೃತ ವಾಗಿಸುತ್ತವೆ. ಏಕೆಂದರೆ–

ಸಂಸ್ಕೃತ ಪ್ರಪಂಚದ ಪ್ರಾಚೀನ ಭಾಷೆ. ದೇವವಾಣಿ. ಅನಾದಿಕಾಲದ ವೇದಗಳು ಸಂಸ್ಕೃತದಲ್ಲಿವೆ. ಆದಿ ಹೇಳಲು ಬರುವ ಪೌರುಷೇಯ ವಾಙ್ಮಯವೂ ಸಂಸ್ಕೃತಪದಗಳನ್ನೇ ಅವಲಂಬಿಸಿವೆ. ನಮ್ಮ ಇತಿಹಾಸ – ವಿಜ್ಞಾನ ಸಂಸ್ಕೃತದಲ್ಲಿ. ನಮ್ಮ ಆರೋಗ್ಯದ

ಗ್ರಂಥಗಳೂ–ವಿವಿಧ ದರ್ಶನಗ್ರಂಥಗಳೂ ಸಂಸ್ಕೃತ ಪದಗಳಿಂದಲೇ ರಚಿಸಲ್ಪಟ್ಟಿವೆ. ನಮ್ಮ ಹಿರಿಯರಿಗೆ ಸಂಸ್ಕೃತವೆಂದರೆ; ವಿಶಿಷ್ಟಭಕ್ತಿ. ಸಂಸ್ಕೃತದಿಂದಲೇ ತಾವು ಪಡೆದ ಜ್ಞಾನಶಕ್ತಿಯನ್ನು ಮರಳಿ ಸಂಸ್ಕೃತದಲ್ಲೇ ಇಟ್ಟಿದ್ದಾರೆ. ಹೀಗೆ ಸಂಸ್ಕೃತದಲ್ಲೇ ತಮ್ಮ ಪಾಂಡಿತ್ಯ–ಕವಿತ್ವಪೂರ್ಣ ನೀತಿಬೋಧಕ ವಿಚಾರಗಳನ್ನು ತಿಳಿಸಿ; ಶ್ರೀಗಂಗೆಯನ್ನು ನುತಿಸಿದ, ಶ್ರೀಮಾಧ್ವಪಂಕ್ತಿಮಹನೀಯರಲ್ಲಿ **ಶ್ರೀ1008ಶ್ರೀಸತ್ಯಧರ್ಮತೀರ್ಥಶ್ರೀಪಾದರದು** ಅಗ್ರಸ್ಥಾನ. ಏಕೆಂದರೆ; ಇವರು ಕೇವಲ ಸ್ತೋತ್ರಕಾರರಲ್ಲ. ಶ್ರೇಷ್ಠಗ್ರಂಥಕಾರರು. ಅದ್ವಿತೀಯ ವಿಮರ್ಶಕರು. ಉತ್ತಮ ಟಿಪ್ಪಣಿಕಾರರು, ವಾಕ್ಚತುರರು, ಶಾಪಾನುಗ್ರಹಶಕ್ತರೂ ಕೂಡಾ ಆಗಿದ್ದರು.

ಇವಕ್ಕೆಲ್ಲ ಮುಕುಟಪ್ರಾಯವಾದ ಇನ್ನೊಂದು ಏಕೋತ್ಕೃಷ್ಟವೈಭವ ಇವರಿಗಿತ್ತು. ಅದುವೇ ಪರಮಹಂಸಪೀಠಾಧಿಪತ್ಯ. ಜಗದ್ಗುರು ಶ್ರೀಮನ್ಮಧ್ವಾಚಾರ್ಯರ ಮೂಲ ಮಹಾಸಂಸ್ಥಾನ **ಶ್ರೀಮದುತ್ತರಾದಿಮಠ**. ಇವರು ಈ ಮಠದ ಅಧೀಶರಾಗಿ ಮೂರು ಹೆಚ್ಚಾದ ಮೂರುದಶಕಗಳ ಕಾಲ ಶ್ರೀಮನ್ಮೂಲಸೀತಾರಾಮರ ಪಾದಾರ್ಚಕರಾಗಿದ್ದರು. ಈ ಏಕೋತ್ಕೃಷ್ಟತೆ ಇನ್ನಾವ ಕವಿಗಿದೆ!

ಕವಿಗಳಿಗೆ ಪರಮಹಂಸಪೀಠಾಧಿಪತ್ಯವಿಲ್ಲ. ಪರಮಹಂಸಪೀಠಾಧಿಪತಿಗಳಲ್ಲಿ ಕವಿತ್ವವಿದ್ದರೂ ವಿರಕ್ತರಾದ್ದರಿಂದ ತಾವು ಕವಿಗಳೆಂದು ಕೆಲವರು ತೋರಿಸಿಲ್ಲ. ಆದರೆ ಶ್ರೀಸತ್ಯಧರ್ಮತೀರ್ಥರು ವಿರಕ್ತರಾಗಿ ಅದ್ಭುತವಾದ ಕವಿತ್ವವನ್ನೂ ಪ್ರದರ್ಶಿಸಿ, ಪರಮಹಂಸಪೀಠಾಧಿಪತಿಗಳೂ ಆಗಿದ್ದು ಬಹಳ ವಿಶೇಷ.

ಪೂರ್ವವಂಶೇತಿಹಾಸ

ಮಹಾಕವಿಗಳಾದ ಶ್ರೀಸತ್ಯಧರ್ಮತೀರ್ಥರ ಪಾವನ ಚರಿತ್ರೆಗೆ ಮೂಲ ಆಕರ ಶ್ರೀಸತ್ಯಧರ್ಮ ಗುರುಚಂದ್ರಕಲೋದಯ ಮಹಾಕಾವ್ಯ. **ಪಂ ಕಲ್ಲಾಪೂರ ರಾಮಚಂದ್ರಾಚಾರ್ಯ**ರೆಂಬ ಶ್ರೀಗಳ ಶಿಷ್ಯರೇ ರಚಿಸಿದ ಸುಂದರವಾದ ಕಾವ್ಯವಿದು. ಈ ಕಾವ್ಯದಲ್ಲಿ 16 ಉಲ್ಲಾಸಗಳಿವೆ. 400 ಶ್ಲೋಕಗಳಿವೆ. ಈ ಗ್ರಂಥದ ಆಧಾರದಿಂದ ಕವಿ ಪರಿಚಯ ತಿಳಿಯುವುದಾದರೆ;

ಜಗದ್ಗುರು ಶ್ರೀಮನ್ಮಧ್ವಾಚಾರ್ಯರ ಮೂಲ ಮಹಾಸಂಸ್ಥಾನದಲ್ಲಿ ಪರಮ ವೈರಾಗ್ಯಸಾಗರರಾದ **ಶ್ರೀ1008ಶ್ರೀಸತ್ಯನಿಧಿತೀರ್ಥರು** ವೇದಾಂತಸಾಮ್ರಾಜ್ಯವನ್ನು ಆಳುತ್ತಿದ್ದರು. ಶ್ರೀಪಾದರ ಕಾಲ; ಸುವರ್ಣಯುಗ. ಜ್ಞಾನಯುಗವೆಂದರೆ ತಪ್ಪಲ್ಲ. ನೋಡಿದಲ್ಲೆಲ್ಲಾ ಜ್ಞಾನಿಗಳ ತಂಡೇ ಇರುತ್ತಿತ್ತು. ಈ ತಂಡಗಳ ಮಧ್ಯದಲ್ಲೊಂದು ತಂಡ ವಿಶಿಷ್ಟವಾಗಿತ್ತು. ಆ ವಿಶೇಷ ತಂಡದಲ್ಲಿ ಒಂದೇ ಕುಟುಂಬದ ಒಂಭತ್ತು ಅದ್ವಿತೀಯ ವಿದ್ವಾಂಸರು ಸುಶೋಭಿತರು. ಈ ಒಂಭತ್ತು ಜನರು ಬಂದರೆ ಪರವಾದಿಗಳ

ಎದೆ ನಡಗುತ್ತಿತ್ತು. ಸ್ವವಾದಿಗಳ ಪಡೆ ಜೈಕಾರ ನುಡಿಯುತ್ತಿತ್ತು. ಒಂಭತ್ತು ಜನರ ಈ ಅದ್ವಿತೀಯ ವಿದ್ಯಾವೈಭವವನ್ನು, ವಾಕ್ಯಾರ್ಥ ಕೌಶಲ್ಯವನ್ನು ಕಂಡು ಪರಮಹಂಸಪೀಠಾಧಿಪರು ಇವರಿಗೆ **"ನವರತ್ನ"** ಎಂಬ ಬಿರುದನ್ನು ಕೊಟ್ಟು ಅನುಗ್ರಹಿಸಿದರು. ಅಂದಿನಿಂದ ಇವರ ಮನೆತನ **ನವರತ್ನ** ಮನೆತನವಾಯಿತು.

ಈ ನವರತ್ನರಲ್ಲಿ ಜ್ಯೇಷ್ಠರು **ಶ್ರೀಮುದ್ಗಲಾಚಾರ್ಯರು**. ತಮ್ಮ ತಪಸ್ಸು-ಪಾಂಡಿತ್ಯದಿಂದಲೂ ಇವರು ಜ್ಯೇಷ್ಠರೇ ಆಗಿದ್ದರು. ಹೀಗೆ ಈ ವಂಶ ತನ್ನ ಪಾಂಡಿತ್ಯದಿಂದಲೇ ಲೋಕವಿಶ್ರುತವಾಯಿತು. ಮುಂದೆ ಈ ವಂಶದಲ್ಲಿ ಈ ಮಹನೀಯರ ಹೆಸರಿನಿಂದಲೇ ಕಂಗೊಳಿಸಿದವರು **ಶ್ರೀಮುನಿ ಮುದ್ಗಲಾಚಾರ್ಯರು**.

ಶ್ರೀಸತ್ಯಧರ್ಮತೀರ್ಥರ ಅವತಾರ

ಶ್ರೀಮುನಿ ಮುದ್ಗಲಾಚಾರ್ಯರ ತಪಸ್ಸಿನ ಫಲ. ಶ್ರೀ1008ಶ್ರೀಸತ್ಯಬೋಧ ತೀರ್ಥಶ್ರೀಪಾದರ ವಿಶೇಷ ಅನುಗ್ರಹ. ಶುಕ್ಲ ಸಂವತ್ಸರದ, ಪುಷ್ಯ ಕೃಷ್ಣಪಕ್ಷದ ಷಷ್ಠಿಯಂದು ಸವಣೂರಿನಲ್ಲಿ ದೇವತೆಗಳೊಬ್ಬರು ಅವತರಿಸಿದರು. ಪುರಷೋತ್ತಮನಾದ ಶ್ರೀಮನ್ನಾರಾಯಣನ ವಿಶೇಷ ಅನುಗ್ರಹವಿರಲೆಂದು ಅವತರಿಸಿದ ಈ ಮಗುವಿಗೆ **"ಪುರುಷೋತ್ತಮ"**ನೆಂದು ನಾಮಕರಣ ಮಾಡಿದರು.

ಬಾಲ್ಯದಲ್ಲೇ ತಮ್ಮ ಅಪ್ರತಿಮ ವಿದ್ವತ್ತಿನಿಂದ ಎಲ್ಲರಿಗೂ ಪ್ರೀತಿಪಾತ್ರರಾಗಿದ್ದರು ಶ್ರೀಪುರುಷೋತ್ತಮಾಚಾರ್ಯರು. ಸದಾ ಸರ್ವಮೂಲ-ಶ್ರೀಮನ್ನ್ಯಾಯಸುಧಾಗ್ರಂಥಗಳ ಪಾಠ, ಭಾಗವತಾದಿ ಗ್ರಂಥಗಳ ಪ್ರವಚನ, ಗ್ರಂಥಗಳ ಲೇಖನ ಇವುಗಳಲ್ಲೇ ಸಮಯವನ್ನು ಕಳೆಯುತ್ತಿದ್ದರು. **ವಿರಹಿಮೋದಸುಧಾವ್ಯಾಖ್ಯಾ, ಶ್ರೀರಂಗೇಶ್ವರ ಶೃಂಗಾರಲಹರೀ, ಅಂತರ್ಲಾಪಿಕಾ, ಬಹಿರ್ಲಾಪಿಕಾ, ಲಲಿತಪದಮಂಜರಿ, ಶ್ರೀವಾದಿರಾಜ ಸ್ತೋತ್ರ**ಗಳನ್ನು ಪೂರ್ವಾಶ್ರಮದಲ್ಲೇ ರಚಿಸಿದ್ದರು. ಸವಣೂರಿನ ದಿವಾನ ಖಂಡೇರಾಯರು ಇವರ ಸಾವಿರಾರು ವಿದ್ಯಾಶಿಷ್ಯರಲ್ಲಿ ಒಬ್ಬರು.

ಶ್ರೀಮೂಲಸೀತಾರಾಮರ ಸಂದರ್ಶನ

ಚತುರ್ಯುಗಮೂರ್ತಿ, ಚತುರ್ಮುಖಬ್ರಹ್ಮಕರಾರ್ಚಿತ ಹೆಚ್ಚಾಗಿ ಶ್ರೀರಾಮ ತಾನೇ ಅರ್ಚಿಸಿದ ಅದ್ಭುತ ಪ್ರತಿಮೆಗಳು; ಶ್ರೀಮೂಲಸೀತಾರಾಮರ ದಿವ್ಯ ಪ್ರತಿಮೆಗಳು. ಶ್ರೀಹಂಸನಾಮಕನ ಸಾಕ್ಷಾತ್ ಪೀಠದಲ್ಲಿ ವಿರಾಜಮಾನರಾದ ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥಭಗವತ್ಪಾದರ ಆರಾಧ್ಯದೈವರು. ಶ್ರೀಮದಾಚಾರ್ಯರ ನಂತರ ಈ ಪ್ರತಿಮೆಗಳನ್ನು ಶ್ರೀ1008ಶ್ರೀಪದ್ಮನಾಭತೀರ್ಥಾದಿ ಯತಿಪುಂಗವರು ಭಕ್ತಿಯಿಂದ ಪೂಜಿಸುತ್ತ, ಮಧ್ವಮತ ಪ್ರಸಾರ ಗೈಯುತ್ತ ಬಂದಿದ್ದರು. ಈ ಸತ್ಸಂಪ್ರದಾಯ

ಮುಂದುವರೆಯುತ್ತ ಈ ದಿವ್ಯ-ಭವ್ಯಪೀಠದಲ್ಲಿ ಶ್ರೀ1008ಶ್ರೀಸತ್ಯವರತೀರ್ಥ ಶ್ರೀಪಾದಂಗಳವರು ಶ್ರೀಮೂಲಸೀತಾರಾಮರನ್ನು ಭಕ್ತಿಯಿಂದ ಆರಾಧಿಸುತ್ತಿದ್ದರು. ಶ್ರೀಮಧ್ವಮತವನ್ನು ಪ್ರಸಾರಗೈಯುತ್ತ ನಾಮಗೊಂಡ್ಲು ಎಂಬ ಪ್ರಾಂತಕ್ಕೆ ಶ್ರೀಪಾದರು ದಿಗ್ವಿಜಯಗೈದರು.

ಶ್ರೀರಾಮನಿಚ್ಛೆ, ಕಲಿಯುಗ. ಈ ಬಾರಿ ನಿಜಕಳ್ಳರು ಶ್ರೀಮೂಲಸೀತಾರಾಮನ ಪೆಟ್ಟಿಗೆಯನ್ನು ದುಡ್ಡಿನ ಪೆಟ್ಟಿಗೆಯೆಂದು ತಪ್ಪಾಗಿ ತಿಳಿದು ದೇವರ ಪೆಟ್ಟಿಗೆಯನ್ನು ಕಳ್ಳತನಮಾಡಿದರು. ಗುರುಗಳು ಶ್ರೀಮೂಲಸೀತಾರಾಮರನ್ನು ಕಾಣದೇ ಏನನ್ನೂ ಸ್ವೀಕರಿಸಲಾರೆ ಎಂದು ಪ್ರಾಯೋಪವೇಶಕ್ಕೆ ಕುಳಿತರು. ಈ ವಾರ್ತೆ ಶ್ರೀನವರತ್ನ ಪುರುಷೋತ್ತಾಮಾಚಾರ್ಯರಿಗೆ ಮುಟ್ಟಿತು. ಕೂಡಲೇ ಅವರು ನಾಮಗೊಂಡ್ಲಕ್ಕೆ ತೆರಳಿದರು. ಇವರು ಬಂದದ್ದನ್ನು ನೋಡಿದ ಗುರುಗಳಿಗೆ ಶ್ರೀರಾಮ ಸಿಕ್ಕಷ್ಟೆ ಸಂತೋಷ. ಇನ್ನು ಶ್ರೀರಾಮ ಸಿಗುವುದರಲ್ಲಿ ಸಂದೇಹವೇ ಇಲ್ಲ ಎಂದು ನಿಟ್ಟುಸಿರು ಬಿಟ್ಟು ತಾವು ಮಾತ್ರ ಪ್ರಾಯೋಪವೇಶವನ್ನು ಮುಂದುವರೆಸಿದರು. ಅದೊಂದು ಶುಭ ಘಳಿಗೆ. ಶ್ರೀನವರತ್ನಾಚಾರ್ಯರು ಪ್ರಾತರ್ವಿಧಿಗಾಗಿ ನಿರ್ಮಲ ಸರೋವರವೊಂದಕ್ಕೆ ತೆರಳಿದರು. ಆಶ್ಚರ್ಯ! ಶ್ರೀಮೂಲಸೀತಾರಾಮರು ಅದೇ ಸರೋವರದ ದಂಡೆಯ ಮೇಲಿದ್ದರು. ಕಳ್ಳರು ದೇವರನ್ನು ಅಲ್ಲೆ ಇಟ್ಟು ಹೋಗಿದ್ದರು!

ಲೌಕಿಕ ಕಳ್ಳರಿಗೆ ದುಡ್ಡು ಬೇಕು. ದೇವರಲ್ಲ. ಅಲೌಕಿಕವೇಷದ ಕೆಲಕಳ್ಳರಿಗೆ ದುಡ್ಡು-ಕೀರ್ತಿ-ಪ್ರತಿಷ್ಠೆಗಾಗಿ ದೇವರು ಬೇಕು! ಹೀಗಾಗಿ ತನ್ನಲ್ಲಿಯೇ ಇದ್ದ ದೇವರನ್ನು ಮುಗ್ಧಜನರ ಮುಂದೆ ತೋರಿಸಿ, ಇಲ್ಲದ ಮಹತ್ವವನ್ನೆಲ್ಲ ಆ ಪ್ರತಿಮೆಗೆ ಆರೋಪಿಸುತ್ತಾರೆ. ಏನೇನೋ ಕಥೆ ಕಟ್ಟುತ್ತಾರೆ. ಇವರ ಪರಮೋದ್ದೇಶ ತಾನೇ ಎಲ್ಲರಿಗಿಂತ ಉತ್ತಮನೆಂದು ತೋರಿಸಿಕೊಳ್ಳುವುದಾಗಿರುತ್ತದೆ. ಅದಕ್ಕಾಗಿ ಇವರಿಗೆ ದೇವರು ಬೇಕು! ಸಾಧನೆಗಾಗಿ ಅಲ್ಲ.

ಆದರೆ, ಈ ಕಳ್ಳರು ಲೌಕಿಕರು. ಆದ್ದರಿಂದ ದೇವರನ್ನು ತೆಗೆದುಕೊಂಡು ಹೋಗಿರಲಿಲ್ಲ. ಸರೋವರದ ದಂಡೆಯ ಮೇಲೆ ದೇವರ ಪ್ರತಿಮೆಗಳನ್ನು ಇಟ್ಟು ಹೋಗಿದ್ದರು. ಅಂತೂ ಶ್ರೀಪುರುಷೋತ್ತಮಾಚಾರ್ಯರಿಗೆ ಪರಮಾನಂದ. ಗುರುಗಳಿಗೆ ಕೂಡಲೇ ಸುದ್ದಿ ಮುಟ್ಟಿಸಿ ಹರ್ಷಿಸಿದರು. ಗುರುಗಳು ಶ್ರೀಮೂಲಸೀತಾರಾಮ ಚಂದ್ರದೇವರನ್ನು ವೈಭವದಿಂದ ವಾದ್ಯನಗಾರಿಗಳೊಂದಿಗೆ ಶ್ರೀಮಠಕ್ಕೆ ತಂದು ಭಕ್ತಿಯಿಂದ ಪೂಜಿಸಿದರು. ಅಂದೇ ತೀರ್ಮಾನ ತೆಗೆದುಕೊಂಡು, ಶ್ರೀಮೂಲಸೀತಾರಾಮರ ಪೂಜೆಗೆ ಇವರೇ ಅಧಿಕಾರಿಗಳು ಅದಕ್ಕಾಗಿ ಮುಂದೆ ಇವರಿಗೇ ಮೂಲಸಂಸ್ಥಾನವನ್ನು ಒಪ್ಪಿಸಬೇಕೇಂದು ನಿರ್ಧರಿಸಿದರು. ಈ ವಿಚಾರವನ್ನು ಶ್ರೀನವರತ್ನಾಚಾರ್ಯರಿಗೆ ತಿಳಿಸಿದರು. ಗುರುಗಳ ಆಜ್ಞೆ ಸದಾ ಶಿರಸಾ ಧಾರ್ಯ. ಶ್ರೀನವರತ್ನಾಚಾರ್ಯರೂ ಒಪ್ಪಿದರು. ಶುಭದಿನದಂದು ಆಶ್ರಮವನ್ನು ಕೊಟ್ಟರು. ವೇದಾಂತಸಾಮ್ರಾಜ್ಯದಲ್ಲಿ ಕುಳ್ಳಿರಿಸಿ **"ಶ್ರೀಸತ್ಯಧರ್ಮತೀರ್ಥ"**ರೆಂದು ನಾಮಕರಣ ಮಾಡಿದರು.

ಅಪೂರ್ವಸಾಧನೆ

ಶ್ರೀಸತ್ಯಧರ್ಮತೀರ್ಥರು ವೇದಾಂತಸಾಮ್ರಾಜ್ಯದ ಮೇರುತೀರ್ಥರು. ಮೂಲಸಂಸ್ಥಾನಾಧಿಪತ್ಯಕ್ಕೆ ಮುಖ್ಯಮೆರಗು; ವಾಕ್ಯಾರ್ಥ **(ಪರಮತೀಯರೊಂದಿಗೆ)** ಪರವಾದಿನಿಗ್ರಹ. ದುರ್ಮತಗಳ ವಿಭಜನಪೂರ್ವಕ ಸ್ವಮತಸ್ಥಾಪನ. ಗ್ರಂಥರಚನ. ಅವು; ಪರಮತ ನಿರಾಕರಣಪೂರ್ವಕ ಸ್ವಮತಸ್ಥಾಪನ ಗ್ರಂಥಗಳು. **(ಮಠೀಯ ಗಲಭೆಯ ಹೊತ್ತಿಗೆಗಳಲ್ಲ!)** ಪ್ರಾಚೀನಗ್ರಂಥಗಳ ಸಂಗ್ರಹಣ. ಇಂದು ಅವುಗಳ ಪುನರ್ಮುದ್ರಣ. ಆದರೆ ಅಂದು ಪುನಃ ಲೇಖನ. ವಿದ್ಯಾರ್ಥಿಗಳಿಗೆ ನಿತ್ಯ ಶ್ರೀಮನ್ನ್ಯಾಯಸುಧಾಪಾಠವನ್ನು ತಾವೇ (ಪೀಠಾಧಿಪತಿಗಳೇ) ಹೇಳುವುದು. ಬೇರೆ ಬೇರೆಡೆ ಸಂಚಾರ ಮಾಡಿ ಭಕ್ತರಿಗೆ ದೇವರದರ್ಶನ ಮಾಡಿಸಿ, ತಪ್ತಮುದ್ರಾಧಾರಣದ ಮುಖಾಂತರ ವೈಷ್ಣವಚಿಹ್ನೆಗಳನ್ನು ನೀಡಿ ಅವರನ್ನು ಉದ್ಧರಿಸುವುದು ಅರ್ಥಾತ್ ದೇಶ ದಿಗ್ವಿಜಯ ಇವು ಇವರ ಮುಖ್ಯಕಾರ್ಯ. ಇನ್ನು ಊರು ಊರುಗಳಲ್ಲಿ ಮಠಗಳನ್ನು ನಿರ್ಮಿಸುವುದು, ಅಲ್ಲಲ್ಲಿ ದೇವರ – ದೇವತೆಗಳ ಮೂರ್ತಿಯನ್ನು ಪ್ರತಿಷ್ಠಾಪಿಸುವುದು ಇವೇ ಮೊದಲಾದವುಗಳು ಪೀಠಾಧಿಪತಿಗಳು ಮಾಡಲೇಬೇಕಾದ ದ್ವಿತೀಯ ಮುಖ್ಯಕಾರ್ಯ. ಇವೆರೆಡನ್ನೂ ಪೂರ್ಣಪ್ರಮಾಣದಲ್ಲಿ ಮಾಡಿದವರು ಶ್ರೀಸತ್ಯಧರ್ಮತೀರ್ಥಶ್ರೀಪಾದರು.

ಶ್ರೀಸತ್ಯಧರ್ಮತೀರ್ಥರು ಅನೇಕಶಾಸ್ತ್ರಗಳಲ್ಲಿ ಅನೇಕ ಪರಮತೀಯರೊಂದಿಗೆ ವಾಕ್ಯಾರ್ಥ ಮಾಡಿದ್ದು ಪ್ರಸಿದ್ಧವಿದೆ. ಅವರಲ್ಲಿ ಪ್ರಮುಖರು **'ಅಹೋಬಲಜೀಯರು', 'ತಿರುಮಲಾಚಾರ್ಯ' 'ಶ್ರೀನಿವಾಸಾಚಾರ್ಯ', 'ರಾಮಶೇಷ', 'ವೈಯಾಕರಣ ಗಜಕಂಠೀರವ ಬಿರುದಾಂಕಿತ ವೈಯಾಕರಣಿ' 'ತ್ರಿಯಂಬಕಶಾಸ್ತ್ರಿ'**ಯೇ ಮೊದಲಾದವರು ಶ್ರೀಗಳ ಜೊತೆ ವಾಕ್ಯಾರ್ಥ ಮಾಡಿ ಪರಾಜಿತರಾದ ಪರಮತೀಯರು.

ಗ್ರಂಥರಚನೆಯನೆಯಲ್ಲೂ ಶ್ರೀಗಳದ್ದು ಅಪೂರ್ವಸಾಧನೆ. ಅವರು ತಮ್ಮ ಪೂರ್ವಾಶ್ರಮದಲ್ಲೇ ಅನೇಕ ಕೃತಿಗಳನ್ನು ಬರೆದಿದ್ದರು. ಇಂದು ಉಪಲಬ್ಧವಿದ್ದದ್ದು ಓಂದೆ ಉಲ್ಲೇಖಿಸಿದ ಗ್ರಂಥಗಳು ಮಾತ್ರ. ಆಶ್ರಮಸ್ವೀಕಾರಾನಂತರ ಶ್ರೀಪಾದರಿಗೆ ಬಿಡುವಿನ ಸಮಯವೆಂಬುದೇ ಇಲ್ಲ. (ಇಂದಿಗೂ ಇದು ಕಾಣುವ ಸತ್ಯ) ತಪ್ಪದೇ ನಿತ್ಯ ನೂರಾರು ವಿದ್ಯಾರ್ಥಿಗಳಿಗೆ ಶ್ರೀಮನ್ನ್ಯಾಯಸುಧಾ ಪಾಠ. ಇವರ ದರ್ಶನಕ್ಕೆಂದು ಬಂದ ಭಕ್ತರಿಂದ ಪಾದಪೂಜೆಯನ್ನು ಸ್ವೀಕರಿಸಿ ಅವರಿಗೆ ತಪ್ತಮುದ್ರಾದಿಗಳನ್ನು ನೀಡುವುದು ಅಥವಾ ಇವರೆ ದಿಗ್ವಿಜಯ ಗೈಯುತ್ತ ಬೇರೆ ಬೇರೆ ಪ್ರದೇಶಗಳಿಗೆ ಹೋಗಿದ್ದರೆ ಅಲ್ಲಿಯ ಲಕ್ಷಾಧಿಕ ಶ್ರೀಮಠದ ಶಿಷ್ಯರಿಗೆ ವೈಷ್ಣವದೀಕ್ಷೆಯನ್ನು ನೀಡುವುದು. ಭಕ್ತಿಯಿಂದ ಕ್ರಮವಾಗಿ ಚತುರ್ಯುಗ ಮೂರ್ತಿಯನ್ನು ಪೂಜಿಸುವುದು. ತೀರ್ಥ – ಮಂತ್ರಾಕ್ಷತೆ, ಬಳಲಿ ಬಂದ ಭಕ್ತರ ಕಷ್ಟ ಕೇಳಿ ಅವುಗಳಿಗೆ ಪರಿಹಾರವನ್ನು ತಿಳಿಸುವುದು,

ಪ್ರತಿನಗರಗಳ ಶಾಖಾಮಠಗಳ ವಿಚಾರಣೆ. ಸ್ವಕೀಯ-ಪರಕೀಯವಿರೋಧ ಅಬ್ಬಬ್ಬ! ನೆನಸಿದರೆ ತನು ನಡುಗುವುದು. ಮನ ಮಣಿಯುವುದು. ಇಂಥ ಸಮಯದಲ್ಲೂ ಈ ಮಹನೀಯರು ಬಹೂತ್ತಮ ಗ್ರಂಥಗಳನ್ನು ರಚಿಸಿದ್ದಾರೆ. ಇಂದು ಉಪಲಬ್ಧವಿದ್ದ ಅವರ ಗ್ರಂಥಗಳೆಂದರೆ;

ಸ್ವತಂತ್ರಗ್ರಂಥಗಳು

1. ಗಂಗಾಲಹರೀ
2. ಕವಿಕಂಠಮಣಿ
3. ಯದುವರಚರಿತಾಮೃತಲಹರೀ
4. ಭಗವದ್ಭಜನಮ್
5. ವಿರಹಿಮೋದಸುಧಾ
6. ಹಿತೋಪದೇಶಃ
7. ಶ್ರೀರಂಗೇಶ್ವರ ಶೃಂಗಾರಲಹರೀ
8. ಶ್ರೀಲಕ್ಷ್ಮೀನರಸಿಂಹಸ್ತೋತ್ರಮ್
9. ಗೀತಾಮಾಹಾತ್ಮ್ಯಸಾರಸಂಗ್ರಹ
10. ನಿತ್ಯಸಂಸಾರಿಲಿಂಗಭಂಗವಿಚಾರಃ
11. ನವಗ್ರಹಸ್ತೋತ್ರಮ್
12. ಶ್ರೀವಾದಿರಾಜಸ್ತೋತ್ರಮ್
13. ಶ್ರೀಪಾದಪಾದುಕಾಸ್ತೋತ್ರ
14. ಅಂತರ್ಲಾಪಿಕಾಃ
15. ಬಹಿರ್ಲಾಪಿಕಾಃ
16. ಭವಾನೀಸ್ತೋತ್ರಮ್
17. ಹೇಮಾವತೀನದೀಸ್ತೋತ್ರಮ್
18. ಆಶೀರ್ವಚನಮ್
19. ಸುಭಾಷಿತಗಳು
20. ಶ್ರೀಪಾದಪಾದುಕಾಸ್ತೋತ್ರ (ಚಿಕ್ಕ)
21. ಗುರ್ವಷ್ಟಕಮ್
22. ಪ್ರಾಕೃತಕೃತಿಗಳು

ವ್ಯಾಖ್ಯಾನಗ್ರಂಥಗಳು

1. ತತ್ತ್ವಸಂಖ್ಯಾನಟಿಪ್ಪಣಿ
2. ಲಲಿತಪದಮಂಜರೀ (ನಮಕಚಮಕವ್ಯಾಖ್ಯಾ)
3. ಶ್ರೀಮದ್ಭಾಗವತಟಿಪ್ಪಣಿ
4. ವಿರಾಟಪರ್ವಟಿಪ್ಪಣಿ
5. ಉದ್ಯೋಗಪರ್ವಟಿಪ್ಪಣಿ
6. ರಾಮಾಯಣಟಿಪ್ಪಣಿ
7. ಶ್ರೀಪಾದಪಾದುಕಾವ್ಯಾಖ್ಯಾನಮ್
8. ತರಂಗಿಣೀಶ್ಲೋಕವ್ಯಾಖ್ಯಾ
9. ವಿಷ್ಣುತತ್ತ್ವವಿನಿರ್ಣಯಟೀಕಾ
10. ಭಾಷ್ಯದೀಪಿಕಾಯುಕ್ತಿ
11. ವಿರಹೀಮೋದಸುಧಾವ್ಯಾಖ್ಯಾ

ಇವುಗಳಲ್ಲಿ ತರಂಗಿಣಿಶ್ಲೋಕವ್ಯಾಖ್ಯಾ ಮತ್ತು ಪ್ರಾಕೃತಕೃತಿಗಳು ಇನ್ನೂ ಅನುಪಲಬ್ಧವೆಂದು ಡಾ. ವ್ಯಾಸನಕೇರಿ ಪ್ರಭಂಜನಾಚಾರ್ಯರು ತಮ್ಮ ಶ್ರೀಸತ್ಯಧರ್ಮತೀರ್ಥಕೃತಿಮಂಜರಿಯಲ್ಲಿ (ಐತರೇಯ ಪ್ರಕಾಶನ, 1988, ಉಪೋದ್ಘಾತ, 12) ಅಭಿಪ್ರಾಯಪಡುತ್ತಾರೆ. ಮುಂದಿನ ಈ ಇಪ್ಪತ್ತೈದು ಸಂವತ್ಸರಗಳಲ್ಲಿ ಈ ಗ್ರಂಥಗಳು ಉಪಲಬ್ಧವಾಗಿರಲೂಬಹುದು! ಪ್ರಾಕೃತಕೃತಿಗಳೆಂದರೆ; ಕನ್ನಡದಲ್ಲಿ ಅವರು ರಚಿಸಿದ ಭಗವನ್ನಾಮಗಳು.

ಗಂಗಾಲಹರಿ ರಚನೆಯ ಹಿನ್ನೆಲೆ

ಪ್ರಸಕ್ತ ಗಂಗಾಲಹರಿಯ ರಚನೆಯ ಕುರಿತು ಗುರುಚಂದ್ರಕಲೋದಯ ಮಹಾಕಾವ್ಯದಲ್ಲಿ ಹೀಗೆ ವರ್ಣಿಸುತ್ತಾರೆ.

ವಿತತ್ಯ ವೇಂಕಟಾಧೀಶಾಜ್ಞಪ್ತಃ ಪ್ರಾಪ್ತಃ ಸ್ವಕಂ ಪುರಮ್ ।
ತುಲಾಲಯೇ ರವೌ ಸ್ನಾತುಂ ಸಹ್ಯಜಾಯಾಮಗಾತ್ ಕ್ವಚಿತ್ ॥
ರಾಮನಾಥಪುರಂ ತಸ್ಮಿನ್ ಮಠೇ ಸಿಂಧೂಪಕಂಠಗೇ ।
ಪಾಠಯನ್ ಪಾಟವತ್ ಪೀಠೇ ಹ್ಯುಪವಿಷ್ಟಸ್ತ್ರಿವಿಷ್ಟಪಾತ್ ॥
ತರಂಗಿಣೀ ವಾಕ್ತರಂಗಾನುತ್ತುಂಗಾನ್ ಸ್ವತರಂಗತಃ ।
ದ್ರಷ್ಟುಂ ಹೃಷ್ಟಮನಾ ಆಗಾತ್ತುಷ್ಟ್ಯೌತ್ಕಂಠ್ಯಾದ್ ಭುವಂ ತದಾ ॥
ಉತ್ಪಾಟ್ಯ ನಿಕಟೇ ಧಾರಾರೂಪತೋ ಮಠತೋ ಬಹಿಃ ।
ಸಹ್ಯಜಾಧಿಷ್ಠಿತಾಂ ಸ್ವಾಂ ಪ್ರತ್ಯೇತದ್ವಕ್ತುಂ ನದೀಂ ಗತಾ ॥
ಯಾವದ್ದೇವಾರ್ಚನಂ ಸಮ್ಯಕ್ ಪ್ರಭೂತಾ ತದನಂತರಮ್ ।
ಆನಿರ್ಗಮಂ ತನುತನುಃ ಸ್ಥಿತಾ ತದನುಸಂಗತಾ ॥
ಯದೋದಿತಾವದನ್ನಂತರಾಗತ್ಯ ಗುರುಸನ್ನಿಧೌ ।
ವರ್ಷರ್ತುರ್ನೈವ ಗರ್ತೋಽಪಿ ವರ್ತತೇತ್ರ ಜಲಾಶಯಃ ॥
ಪರಿತೋ ನಾಸ್ತಿ ಸರ್ವತ್ರಾಧಿತ್ಯಕೈವ ಪ್ರದೃಶ್ಯತೇ ।
ದೃಶ್ಯತೇ ಜಲಧಾರಾಽಪಿ ಪ್ರಚುರಾ ರುಚಿರಾಽಧುನಾ ॥
ಗಂಗೈವ ವಾಕ್ತರಂಗಾಣಾಂ ರಿಂಗಣಂ ದ್ರಷ್ಟುಮಾಗತಾ ।
ನ ಸಂದೇಹೋ ದೇಶಿಕಾರ್ಯಾಃ ಸಪರ್ಯಾಂ ಕುರುತಾತ್ವರಮ್ ॥
ಗುರುಬರ್ಹಿಸ್ತದಾಗತ್ಯ ವಸ್ತ್ರಾಭರಣಪೂರ್ವಕೈಃ ।
ಸಂಪೂಜ್ಯ ಮಜ್ಜನಂ ಧಾರಾಸಿಂಧುಸಂಗೇಽಕರೋತ್ ಪುನಃ ॥
ತುಷ್ಟಾವ ಗಂಗಾಲಹರೀಂ ತನ್ನಾಮಸ್ತುತಿತೋಽಧಿಕಮ್ ।
ಸ್ತೋತ್ರಂ ಯದೋರುಧಾ ಸ್ತುತ್ಯಂ ತತ್ಕರ್ತಾ ಕಿಂ ಸ್ತುತೇಃ ಪದಮ್ ॥

ತಿರುಪತಿಯ ಪಾಪನಾಶನೀಯಲ್ಲಿ ನೀರು ಬರುವಂತ ಅದ್ಭುತ ಮಹಿಮೆಯನ್ನು ತೋರಿಸಿದ ಶ್ರೀಪಾದರು ನಂತರ ಶ್ರೀನರಸಿಂಹಪುರಕ್ಕೆ ಆಗಮಿಸಿದರು. ಅದೊಂದು ದಿನ ಸೂರ್ಯನು ತುಲಾರಾಶಿಯಲ್ಲಿರುವಾಗ ಕಾವೇರಿಯಲ್ಲಿ ಸ್ನಾನ ಮಾಡಬೇಕೆಂದು ಶ್ರೀಪಾದರು "ರಾಮನಾಥಪುರ"ಕ್ಕೆ ಬಂದರು. ಕಾವೇರಿತೀರದಲ್ಲಿದ್ದ ಮಠದಲ್ಲಿ ಪಾಠವನ್ನು ಹೇಳುತ್ತ ಕುಳಿತಿದ್ದರು. ಆಗ ಗಂಗಾದೇವಿ ಸ್ವರ್ಗದಿಂದ ಭೂಲೋಕಕ್ಕೆ ಬಂದು ಇವರು ಪಾಠ ಹೇಳುತ್ತ ಕುಳಿತಿದ್ದ ಸಮೀಪದಲ್ಲೇ ಭೂಮಿಯನ್ನು ಸೀಳಿ ಧಾರಾಕಾರವಾಗಿ ಹೊರಬಂದಳು. ಶ್ರೀಪಾದರು ಶ್ರೀರಾಮಚಂದ್ರದೇವರ

ಪೂಜೆಯನ್ನು ಮಾಡುವವರೆಗೂ ಧಾರಾಕಾರವಾಗಿ ಬಂದ ನೀರಿನ ಬುಗ್ಗೆ ಎಲ್ಲರಿಗೂ ಕಾಣುವಂತೆ ದಪ್ಪಾಗಿಯೇ ತೋರುತ್ತಿತ್ತು. ನಂತರ ಗುರುಗಳ ಭೀಕ್ಷೆ ಮುಗಿಯುತ್ತ ಬಂದಂತೆ ಆ ನೀರಿನ ಬುಗ್ಗೆ ಚಿಕ್ಕದಾಗುತ್ತ ಹೋಯಿತು. ಗುರುಗಳು ಪಯಣಿಸಿದ ನಂತರ ಧಾರೆಯೂ ಕಾಣದಾಯಿತು.

"ಮಳೆಗಾಲವಲ್ಲ. ಇಲ್ಲಿ ತೆಗ್ಗಿಲ್ಲ. ಒಳಗೆ ಜಲಾಶಯವೂ ಇಲ್ಲ. ಎಲ್ಲ ಕಡೆಗೂ ಎತ್ತರವಾದ ಭೂಮಿ. ಆದರೆ ಈ ಜಲಾಶಯ ಮಠದಲ್ಲಿ ತೋರುತ್ತಿದ್ದುದು ನಮಗೆ ಪರಮಾಶ್ಚರ್ಯ! ಸ್ವಾಮಿ! ಗಂಗೆ ಪ್ರಾದುರ್ಭವಿಸಿದ್ದಾಳೆ. ತಾವೂ ಬೇಗನೇ ಬಂದು ಗಂಗೆಯನ್ನು ಪೂಜಿಸಬೇಕೆಂದು" ಅಲ್ಲಿದ್ದ; ಇದನ್ನೆಲ್ಲ ಕಣ್ಣಾರೆ ಕಂಡ; ಜನಗಳು ಶ್ರೀಗಳನ್ನು ಪ್ರಾರ್ಥಿಸಿದರು. ಒಡನೆಯೇ ಶ್ರೀಪಾದರು ಗಂಗೆಗೆ ವಸ್ತ್ರಾಭರಣಗಳನ್ನು ಸಮರ್ಪಿಸಿದರು. ಆ ಧಾರೆ ಮತ್ತು ಸಂಗಮದಲ್ಲಿ ಸ್ನಾನ ಮಾಡಿದರು. ನಂತರ **"ಗಂಗಾಲಹರೀ"** ಎಂಬ ಸ್ತೋತ್ರವನ್ನು ರಚನೆ ಮಾಡಿದರು. ಹೀಗೇ ಗಂಗಾಲಹರಿಯ ರಚನೆಯ ಹಿನ್ನೆಲೆಯನ್ನು ಕವಿಗಳು ಸ್ಪಷ್ಟವಾಗಿ ಸುಂದರವಾಗಿ ಹೇಳುತ್ತಾರೆ. ಹೀಗೆ ಗಂಗೆ ಬರಲು ಕಾರಣ; ಗುರುಗಳ ವಾಕ್ತರಂಗಗಳು ತನ್ನ ತರಂಗಕ್ಕಿಂತ ಮಿಗಿಲು ಎಂದು ಹೇಳಲು ಬಂದಳೆಂದೂ ವರ್ಣಿಸುತ್ತಾರೆ. ಇದು ಈ ಆಕರದಿಂದ ತಿಳಿದು ಬರುವ ಗಂಗಾಲಹರಿಯ ರಚನೆಯ ಹಿನ್ನೆಲೆ.

ಗಂಗಾಲಹರಿವ್ಯಾಖ್ಯಾನ

ಶ್ರೀಸತ್ಯಧರ್ಮಗುರುವರ್ಯರ ಈ ಉತ್ತಮ ಕೃತಿಗೆ; ಇವರ ಶಿಷ್ಯರೇ ಆದ ಶ್ರೀಕಲ್ಲಾಪೂರ ರಾಮಚಂದ್ರಾಚಾರ್ಯರ ಅದ್ಭುತ ಟೀಕಾವೊಂದಿದೆ ಮತ್ತು ಇನ್ನು ಹಲವರ ಟೀಕೆಗಳಿವೆ ಎಂದೂ ಕೇಳಿದ್ದೇನೆ. ಆದರೆ ಆ ಟೀಕಾಕಾರರ ಹೆಸರಾಗಲಿ, ಆ ಟೀಕೆಗಳ ಮಾಹಿತಿಯಾಗಲಿ ನನಗೆ ಲಭ್ಯವಾಗಿಲ್ಲ. ನಾನೂ ನನ್ನ ಅನುವಾದದಲ್ಲಿ ಈ (ಶ್ರೀಕಲ್ಲಾಪೂರ ರಾಮಚಂದ್ರಾಚಾರ್ಯರ) ಸಂಸ್ಕೃತ ಟೀಕೆಯನ್ನೇ ಅವಲಂಬಿಸಿದ್ದೇನೆ. ಆದರೆ ಕಾರಣಾಂತರಗಳಿಂದ ನಾನು ಟೀಕೆಯನ್ನು ಮುದ್ರಿಸಿಲ್ಲ. ಅದಕ್ಕಾಗಿ ಟೀಕಾಕಾರರಲ್ಲಿ (ಶ್ರೀಕಲ್ಲಾಪೂರ ರಾಮಚಂದ್ರಾಚಾರ್ಯ) ಕ್ಷಮೆಯಾಚಿಸುತ್ತೇನೆ.

ಶ್ರೀಪಾದರ ದಿಗ್ವಿಜಯ

ಶ್ರೀಮದುತ್ತರಾದಿಮಠದ ಉಗಮದ ಉದ್ದೇಶವೇ ದೇಶ ದಿಗ್ವಿಜಯ. ಶ್ರೀಮದಾಚಾರ್ಯರು ಶ್ರೀಪದ್ಮನಾಭತೀರ್ಥರಿಗೆ ಕೊಟ್ಟ ಆದೇಶವೇ ಇದು. ಅವರಿಗೆ ಮೊದಲು ಕೊಟ್ಟ ಪ್ರತಿಮೆಯೂ ಶ್ರೀದಿಗ್ವಿಜಯರಾಮದೇವರ ಪ್ರತಿಮೆಯೇ.

ಈ ಪ್ರತಿಮೆ ಇಂದೂ ಶ್ರೀಮದುತ್ತರಾದಿಮಠದಲ್ಲಿ ನಿತ್ಯ ಪೂಜೆಗೊಳ್ಳುತ್ತಿದ್ದುದು ವಿದಿತ ವಿಷಯ. ಈ ಸಂಪ್ರದಾಯವನ್ನು (ದಿಗ್ವಿಜಯಗೈವುದನ್ನು) ಈ ಪೀಠದಲ್ಲಿ ಬಂದ ಯಾರೂ (ಈವರೆಗೂ) ತಪ್ಪಿಸಿಲ್ಲ. ಆ ಸಾಲಿನಲ್ಲೂ ಹಿರಿಯರು (ಶ್ರೀಸತ್ಯಸಂಕಲ್ಪಾದಿ ಯತಿವರೇಣ್ಯರಿಗಿಂತ) ಶ್ರೀಸತ್ಯಧರ್ಮತೀರ್ಥರು.

ಶ್ರೀಪಾದರು **ತಿರುಪತಿ, ಉಡುಪಿ, ರಾಮೇಶ್ವರ ಕೊಲ್ಲಾಪೂರ, ಪಂಢರಪುರ, ಶ್ರೀರಂಗಪಟ್ಟಣ, ಶ್ರೀಮುಷ್ಣ, ಶ್ರೀರಂಗವೇ** ಮುಂತಾದ ಅನೇಕ ಪ್ರಾಂತಗಳಲ್ಲಿ ಇವರು ಸಂಚಾರ ಮಾಡಿದ್ದು ಶ್ರೀಸತ್ಯಧರ್ಮಗುರು ಚಂದ್ರಕಲೋದಯ ಮಹಾಕಾವ್ಯದಲ್ಲಿ ಉಲ್ಲೇಖಗೊಂಡಿದೆ. ಕೃತಿವಿಸ್ತಾರವಾಗುವ ಭಯದಿಂದ ನಾನು ಶ್ರೀಸತ್ಯಧರ್ಮತೀರ್ಥರ ದಿಗ್ವಿಜಯ, ಅವರ ಅಪಾರಮಹಿಮೆ, ಪಾಠಕೌಶಲ್ಯ, ಶಿಷ್ಯವರ್ಗವೇ ಮುಂತಾದ ಅನೇಕ ವಿಷಯಗಳನ್ನು ಇಲ್ಲಿ ಉಲ್ಲೇಖಿಸಿಲ್ಲ. ಅದಕ್ಕಾಗಿ ಶ್ರೀಸತ್ಯಧರ್ಮತೀರ್ಥವರ್ಯರಲ್ಲಿ ಕ್ಷಮೆಯಾಚಿಸುತ್ತೇನೆ.

ಶ್ರೀಪಾದರ ವ್ಯಕ್ತಿತ್ವ

ಶ್ರೀಸತ್ಯಧರ್ಮತೀರ್ಥಶ್ರೀಪಾದರ ವ್ಯಕ್ತಿತ್ವ ಅಸಾಮಾನ್ಯ ಪ್ರಭಾವಶಾಲಿ ವ್ಯಕ್ತಿತ್ವವೆಂದು ಹೇಳಬಹುದು. ಅವರ ವ್ಯಕ್ತಿತ್ವದ ಪ್ರಭಾವ ಎಷ್ಟಿತ್ತೆಂದು ಒಂದನ್ನು ಇಲ್ಲಿ ಸ್ಮರಿಸಬಹುದಾದರೆ;

ಅಂದಿನ ಕಾಲದ **ಮೈಸೂರು ಮಹಾರಾಜ** ಶ್ರೀಸತ್ಯಧರ್ಮತೀರ್ಥಶ್ರೀಪಾದರನ್ನೇ ತನ್ನ ಗುರುಗಳನ್ನಾಗಿ ಸ್ವೀಕರಿಸಿದ್ದ. ಅತ್ಯಂತ ವಿಲಕ್ಷಣಭಕ್ತಿಯನ್ನು ತೋರಿಸುತ್ತಿದ್ದ. ತಾನು ಮಾಡುವ ಯಾವುದೇ ದಾನಗಳಿಗೂ ತನ್ನ ಹೆಸರನ್ನು ಹಾಕದೆ ತನ್ನ ಗುರುಗಳ ಹೆಸರನ್ನೇ ಹಾಕಿಸುತ್ತಿದ್ದ. ಅವನು ಆ ದಾನಕ್ಕೆ **"ಶ್ರೀಸತ್ಯಧರ್ಮತೀರ್ಥರ ಅನುಗ್ರಹದಿಂದ ಮೈಸೂರು ಮಹಾರಾಜ ಕೊಟ್ಟ ಕಾಣಿಕೆ"** ಎಂದು ಅದರಲ್ಲಿ ಬರೆಸುತ್ತಿದ್ದ. ಇವನು **ಉಡುಪಿಯ ಶ್ರೀಕೃಷ್ಣನಿಗೆ ಬಂಗಾರದ ನಂದಾದೀಪವನ್ನು ಕೊಟ್ಟಿದ್ದಾನೆ.** ಅದು ಈಗಲೂ ಶ್ರೀಕೃಷ್ಣನ ಮುಂದೆ ಶೋಭಿತವಾಗಿದೆ. ಅದಕ್ಕೂ ಹೀಗೇ ಒಕ್ಕಣೆಯಿದೆಯಂದು ನನ್ನ ಬಾಲ್ಯದಲ್ಲಿ ನಾ ಕೇಳಿದ್ದು ಇನ್ನೂ ನನ್ನ ಮಸ್ತಕದಲ್ಲಿ ಅಚ್ಚಳಿಯದೇ ಉಳಿದಿದೆ. ಅದು ಬಾಲ್ಯಾವಸ್ಥೆಯಾದ್ದರಿಂದ ಅವತ್ತು ಮಾತಿನಾಡಿದವರು ಯಾರ್ಯಾರೆಂದು ಗೊತ್ತಿಲ್ಲ.

ವೃಂದಾವನ ಪ್ರವೇಶ

ಶ್ರೀಮದುತ್ತರಾದಿಮಠದ ಪೀಠಾಧಿಪತಿಗಳೆಲ್ಲ ಉತ್ಕೃಷ್ಟ ಜ್ಞಾನಿಗಳು. ಅಷ್ಟೇ ವಿಶಿಷ್ಟ ವಿರಕ್ತರೂ ಕೂಡ. ಪ್ರತಿಯೊಬ್ಬರೂ ಗ್ರಂಥಕಾರರೇ ಆದದ್ದು ಇನ್ನೂ ವಿಶೇಷ. ಈ ಪೀಠದಲ್ಲಿ ಕುಳಿತವರು ಮಾಡುವ ಶ್ರೀಮನ್ನ್ಯಾಯಸುಧಾಗ್ರಂಥದ ಮಂಗಳವಂತೂ

ಎಲ್ಲರಿಂದಲೂ ಎಲ್ಲ ಕಾಲಗಳಲ್ಲೂ ಪ್ರಶಂಸನೀಯವೇ ಆಗಿವೆ. ಸರ್ವಜ್ಞಕಲ್ಪ ಶ್ರೀಮಟ್ಟೀಕಾಕೃತ್ಪಾದರ ಒಂದೊಂದು ಪದಗಳಿಗೆ ನೂರಾರು ಬಗೆಯಲ್ಲಿ ಅರ್ಥವನ್ನು ವಿವರಿಸಿ ತಮ್ಮಲ್ಲಿ ಶ್ರೀಮದಾನಂದತೀರ್ಥರ ದಿವ್ಯ ಸನ್ನಿಧಾನ ನಿತ್ಯ ಇರುತ್ತದೆ ಎಂಬುದನ್ನು ಪ್ರದರ್ಶಿಸುತ್ತಾರೆ. ತಾವು ದೇವಾಂಶಸಂಭೂತರೆಂದು ತಿಳಿಸುತ್ತಾರೆ. **ದೇವತಾಸ್ವಸುಲಭಾ ಪ್ರತಿಭಾತೇ....** ಎಂಬ ಶ್ರೀಸುಮಧ್ವವಿಜಯದ ಶ್ಲೋಕ ನನ್ನ ಈ ಮಾತಿಗೆ ಆಧಾರ.

ಭಗವಂತ ಧರ್ಮಗಳಲ್ಲಿ ಗರಿಷ್ಠ, ಮಧ್ಯಮ ಮತ್ತು ಕನಿಷ್ಠವೆಂದು ಮೂರು ಪ್ರಕಾರಗಳನ್ನು ಮಾಡಿದ್ದಾನೆ. ಶ್ರೀಮಠದ ಮಹನೀಯರೆಲ್ಲ ತಮ್ಮ ಪ್ರತಿಕರ್ಮಗಳಲ್ಲೂ ಮಧ್ಯಮಾಧಮಗಳನ್ನು ಪರಿತ್ಯಜಿಸಿ ಗರಿಷ್ಠಧರ್ಮವನ್ನೇ ಆಯ್ದುಕೊಳ್ಳುತ್ತಾರೆ. ಅರುಣೋದಯದಿಂದ ಅರುಣೋದಯದವರೆಗಿರುವ ಎಲ್ಲ ಕರ್ಮಗಳೂ ಗರಿಷ್ಠವೇ. ತಮ್ಮ ಭೋಜನದಲ್ಲಾಗಲಿ, ದಾಹ ತಣಿಸುವ ನೀರು ಕುಡಿಯು ಸಮಯದಲ್ಲಾಗಲಿ ಅಥವಾ ಏಕಾದಶಿ ಉಪವಾಸ, ಶ್ರೀಕೃಷ್ಣಾಷ್ಟಮೀ ವ್ರತ ಮತ್ತು ಪಾರಣೆಯ ಸಂದರ್ಭ, ತಪ್ತಮುದ್ರಾಧಾರಣ ಯಾವುದನ್ನೇ ವೀಕ್ಷಿಸಿದರೂ ಅಲ್ಲಿ ಗರಿಷ್ಠಧರ್ಮಕ್ಕೆ ಉತ್ತಮ ಉದಾಹರಣೆ ಶ್ರೀಮದುತ್ತರಾದಿಮಠ.

ವೃಂದಾವನ ಪ್ರವೇಶದಲ್ಲೂ ಈ ಗರಿಷ್ಠ ನಿಯಮವನ್ನು ಈ ಮಹನೀಯರಾರೂ ಈವರೆಗೂ (ಶ್ರೀಪದ್ಮನಾಭತೀರ್ಥರಿಂದ ಶ್ರೀಸತ್ಯಪ್ರಮೋದತೀರ್ಥರವರೆಗೂ) ಬಿಟ್ಟುಕೊಟ್ಟಿಲ್ಲ.

ಪ್ರಸಕ್ತ ಕವಿಗಳು ತಮ್ಮ ವೃಂದಾವನ ಪ್ರವೇಶವನ್ನು ಭದ್ರಾನದಿಯ ತಟದ ಹೊಳೆಹೊನ್ನೂರು ಎಂಬ ಗ್ರಾಮವನ್ನು ಆಯ್ದುಕೊಂಡರು. ಹೋಳೆಹೊನ್ನೂರು ಶ್ರೀಮಟ್ಟೀಕಾಕಾರರ ಗುರುಗಳಾದ ಶ್ರೀಅಕ್ಷೋಭ್ಯತೀರ್ಥರು ತಪಗೈದ ಪಾವನ ಸ್ಥಳ ಕೂಡ್ಲಿಗೆ ಅತೀಸಮೀಪ ಸ್ಥಳ.

ಇನ್ನು ತಮ್ಮ ಅವತಾರ ಕಾರ್ಯವನ್ನು ಮುಗಿಸಬೇಕೆಂದು ಇಚ್ಛಿಸಿದ ಈ ಮಹಾನುಭಾವರು ತಮ್ಮ ಉತ್ತರಾಧಿಕಾರಿಗಳಾದ ಶ್ರೀಸತ್ಯಸಂಕಲ್ಪತೀರ್ಥರಿಗೆ ಆಜ್ಞೆಯನ್ನು ನೀಡಿ, ದೂರದ್ಧಲ್ಲಿದ್ದ ಅವರನ್ನು ಕರೆಯಿಸಿಕೊಂಡರು. ಭಕ್ತಿಯಿಂದ ಶ್ರೀಮೂಲ ಸೀತಾರಾಮರನ್ನು ಅರ್ಚಿಸಿದರು. 'ವಿಕೃತಿ' ಸಂವತ್ಸರದ ಶ್ರಾವಣಮಾಸದ ಕೃಷ್ಣ ಪಕ್ಷದ ತ್ರಯೋದಶಿಯಂದು ಭಗವಂತನ ನಾಮಸ್ಮರಣೆಯನ್ನೇ ಮಾಡುತ್ತ ವೃಂದಾವನ ಪ್ರವೇಶ ಮಾಡಿದರು. ಇವರು ವೃಂದಾವನ ಪ್ರವೇಶ ಮಾಡುವುದೇ ತಡ ಹಿಂದಿನ ಹಿರಿಯರಾದ ಶ್ರೀಮಜ್ಜಯತೀರ್ಥರು, ಶ್ರೀವಾದಿರಾಜರು, ಶ್ರೀರಾಘವೇಂದ್ರರು, ಶ್ರೀಸತ್ಯಬೋಧರು ಮತ್ತು ಶ್ರೀಸತ್ಯಸಂಧರು ಒಂದಂಶದಿಂದ ಇವರ ವೃಂದಾವನದಲ್ಲಿ ಬಂದು ನೆಲೆಸಿದರು. ಯಾರಾರು ಎಲ್ಲಿ ನೆಲಿಸಿದ್ದಾರೆಂದು ಭಾವಚಿತ್ರದಲ್ಲಿ ತೋರಿಸಲಾಗಿದೆ.

ಈಗೇಕೆ ಪ್ರಕಟಣೆ!

ಶ್ರೀಮದುತ್ತರಾದಿಮಠದ ಪೀಠಾಧಿಪತಿಗಳೆಲ್ಲ ಮಹಾಮಹಿಮೆರೆಂಬುದು ಪ್ರಾಯಶಃ ಎಲ್ಲ ಸಾತ್ವಿಕರ ಅನುಭವ. ವಿದ್ಯಮಾನ ಜಗದ್ಗುರುಗಳಾದ ಶ್ರೀ1008ಶ್ರೀಸತ್ಯಾತ್ಮ ತೀರ್ಥ ಶ್ರೀಪಾದರಿಗಾದ ಗಂಗಾನುಗ್ರಹ ವೈಭವವನ್ನು ಕೇಳಿದ್ದೆ. ಈಗ ನಾನು ಸ್ವತಃ ಅನುಭವಿಸಿದೆ.

ಸುಮಾರು 20 ವರ್ಷಗಳ ಹಿಂದೆ ನಮ್ಮ ತಂದೆ ಮನೆಯನ್ನು ಕಟ್ಟಿಸಿದ್ದರು. ಪೂರ್ವದಲ್ಲಿ ಭಾವಿಯನ್ನು ತೋಡಿಸಿದ್ದರು. ಉತ್ತಮ ನೀರು ಬಂದಿತ್ತು. ನಮಗಷ್ಟೇ ಅಲ್ಲದೇ ನಮ್ಮ ಮನೆಯ ಸುತ್ತಲಿನ ಜನರು ಆ ನೀರಿನಿಂದಲೇ ತಮ್ಮಯ ಭವನಗಳನ್ನು ನಿರ್ಮಿಸಿಕೊಂಡಿದ್ದರು. ಅಷ್ಟು ಗಂಗೆ ಅನುಗ್ರಹಿಸಿದ್ದಳು. ಸುಮಾರು 8 ವರ್ಷ ನೀರಿನ ಕೊರತೆಯಿರಲಿಲ್ಲ. ಅದೇಕೋ ಗಂಗಾಮಾತೆಗೆ ನಮ್ಮ ಮೇಲೆ ಕೋಪವೋ, ಪ್ರಾರಬ್ಧವೋ ಅಥವಾ ಮಹಾಮಹಿಮ ಶ್ರೀಸತ್ಯಾತ್ಮತೀರ್ಥರ ಮಹಿಮೆ ಗೊತ್ತಾಗಲೆಂಬ ಉದ್ದೇಶವೋ ಬಾವಿ ಬತ್ತಿತು. ನಮ್ಮ ತಂದೆ ವರ್ಷ ವರ್ಷ ಅಗೆಸುತ್ತಿದ್ದರು. ಅದೆಲ್ಲ ವ್ಯರ್ಥವಾಗುತ್ತಿತ್ತು. ಹೀಗೆ 60 ಫೂಟಿನ ವರೆಗೂ ಪ್ರಯತ್ನ ನಡೆದಿತ್ತು. ಆದರೆ ಅದೆಲ್ಲ ನಿಷ್ಪ್ರಯೋಜಕವಾಗಿತ್ತು. ಮನಸ್ಸು ಸೋತಿತು. ಹೀಗಾಗಿ ತೆಪ್ಪಗೆ ಕುಳಿತಿದ್ದೆವು. ಬತ್ತಿದ ಬಾವಿಯಲ್ಲಿ ಕಸ ಬೀಳಲಾರಂಭಿಸಿತು. ಹೀಗೆ ಸುಮಾರು ಹತ್ತು ಹನ್ನೆರೆಡು ವರ್ಷಗಳು ಕಳೆದವು. ನಮ್ಮ ಸುದಿನ **3ನೇ ಮೇ 2014**ರಂದು ಮಹಾಸ್ವಾಮಿಗಳು ನಮ್ಮ ಮನೆಗೆ ಪಾದಪೂಜೆಗೆಂದು ಬಂದರು. ನಮ್ಮ ತಂದೆ ಶ್ರೀಮೂಲರಾಮಚಂದ್ರದೇವರ ಪೂಜೆಗಾಗಿ ಮಹಾಸ್ವಾಮಿಗಳಿಗೆ ಪ್ರಾರ್ಥನೆಯನ್ನು ಸಲ್ಲಿಸಿದರು. ಆಗ ಗುರುಗಳು ಭಾವಿ ಎಲ್ಲಿದೆ? ಎಂದು ಪ್ರಶ್ನಿಸಿದರು. ಆಗ ನಾನು ನಮ್ಮ ಭಾವಿಯ ಕಥೆ ಹೇಳಿದೆ. ಒಡನೆಯೇ ಗುರುಗಳು ಅನುಗ್ರಹಿಸಿ ಮಂತ್ರಾಕ್ಷತೆಯನ್ನು ನಮ್ಮ ತಂದೆಯ ಕೈಯಲ್ಲಿ ಕೊಟ್ಟು "ಭಾವಿಗೆ ಹಾಕು ನೀರು ಬರುತ್ತೆ" ಎಂದು ಹೇಳಿದರು. ಅವರ ಮಹಿಮೆಯ ಅರಿವು ನಮಗಿದ್ದದರಿಂದ ಮೊದಲು ಬಾವಿಯಲ್ಲಿ ಬಿದ್ದ ಹೊಲಸನ್ನು ತೆಗೆಯಲು ಗುತ್ತಿಗೆ ನೀಡಿದೆವು. ಆಶ್ಚರ್ಯ! ಪರಮಾಶ್ಚರ್ಯ! ಕೇವಲ ಕಸ ಹೋಗೋದೆ ತಡ; ಮೂರು ಮಾರ್ಗವಾಗಿ (ಝರಿ) ಗಂಗಾದೇವಿ ನಮ್ಮ ಬಾವಿಯಲ್ಲಿ ಬಂದಳು! ಹಿಂದೆ ತೋಡಿಸಿದಾಗಲೂ ಬರದ ನೀರು, ಈಗ ಮೂರು ಕಡೆ ಬಂದಿದ್ದು ಇವರ ಮಹಿಮೆಯಲ್ಲದೇ ಇನ್ನೇನು!

ಈ ಮಹಿಮಾ ನದಿ ಗುಪ್ತಗಾಮಿನಿಯಾಗದಿರಲೆಂದು ಈ ಮಹಿಮೆಯನ್ನು ಪ್ರಕಟಿಸಲು ಆಶಿಸಿದೆ. ನನಗೆ ಶ್ರೀಪಾದರ ಸ್ವಭಾವ ಗೊತ್ತು. ಅಧಿಕ ವೈರಾಗ್ಯದಿಂದ ಅವರು ತಮ್ಮ ಮಹಿಮೆಯನ್ನು ಹೇಳಿಕೊಳ್ಳುವವರೂ ಅಲ್ಲ. ಹೇಳಿಸಿಕೊಳ್ಳುವವರೂ ಅಲ್ಲ. ಇನ್ನೊಬ್ಬರು ತಮ್ಮ ಮಹಿಮೆಯನ್ನು ಹೇಳಿದರೆ ಅದು ಅವರಿಗೆ ಸಹನೆಯೂ

ಆಗುವುದಿಲ್ಲ. "ನನ್ನ ಮಹಿಮೆಯನ್ನು ಹೇಳಬೇಡ" ಎಂದು ಅವರು ನನಗೆ ಆಜ್ಞೆಯನ್ನೂ ಹಿಂದೇ ಮಾಡಿಯಾಗಿದೆ. ಇವರಿಂದ ಉಪಕೃತನಾದ, ಇವರ ಅನುಭವದ ಅಮೃತವನ್ನು ಉಂಡ ನಾನು; ನನ್ನ ಕರ್ತವ್ಯವನ್ನು ಮಾಡಲೇಬೇಕು. ನನಗಾಗಿ, ನನ್ನ ಮುಂದಿನ ತಲೆಮಾರಿನವರಿಗಾಗಿ ಮತ್ತು ಸಜ್ಜನರಿಗೆ ಈ ಮಹಿಮೆ ಗೊತ್ತಿರಲಿ ಎಂಬ ಬಯಕೆಯಿಂದ.

ಶ್ರೀಗಂಗಾದೇವಿಯನ್ನು ಸ್ತುತಿಸಿದ, ಈ ಮಹಿಮರ ಪರಮಗುರುಗಳಾದ ಶ್ರೀಸತ್ಯಧರ್ಮರ ಶ್ರೀಗಂಗಾಲಹರೀ ಪ್ರಾಯಶಃ ಕನ್ನಡದಲ್ಲಿಲ್ಲ (ನನ್ನ ಶೋಧನೆಯಂತೆ). ಇದನ್ನು ಕನ್ನಡೀಕರಿಸಿ ಮುದ್ರಿಸಿದರೆ ಶ್ರೀಗುರುಗಳೂ ಸಂತೋಷವನ್ನು ಹೊಂದುತ್ತಾರೆ. ಅವರು ಆನಂದ ಪಟ್ಟರೇನೆ ನಮ್ಮ ಬದುಕು ಭವ್ಯ. ಜೊತೆಗೆ ಪರಮಗುರುಗಳ ಅನುಗ್ರಹವೂ ಆಗುತ್ತದೆ. ವಿಶೇಷವಾಗಿ ಶ್ರೀಗಂಗಾದೇವಿಯೂ ನಮ್ಮಲ್ಲಿ ಯಾವತ್ತೂ ಕೃಪೆಯನ್ನಿಡುತ್ತಾಳೆ. ಸಜ್ಜನರೂ ನನ್ನಲ್ಲಿ ದಯೆ ತೋರುತ್ತಾರೆ. ಈ ಕಾರಣಗಳಿಂದ ಶ್ರೀಸತ್ಯಧರ್ಮರ ಗಂಗಾಲಹರಿಯನ್ನು ಕನ್ನಡೀಕರಿಸಿ ಪ್ರಕಟಿಸಿದೆ.

ಕನ್ನಡೀಕರಿಸಿದ ನಾನು ಪಂಡಿತನಲ್ಲ. ಕವಿಯಲ್ಲ. ಉತ್ತಮ ಲೇಖಕನಲ್ಲ. ಬರಹಗಾರನಿಗೆ ಇರಬೇಕಾದ ಯಾವ ಉತ್ತಮ ಗುಣಗಳೂ ನನ್ನಲ್ಲಿ ಇಲ್ಲ. ಪರಮಪೂಜ್ಯಶ್ರೀಪಾದರ ಅನುಗ್ರಹವೊಂದು ಬಿಟ್ಟು ಇನ್ನೇನು ನನ್ನಲ್ಲಿ ಇಲ್ಲ. ಅವರ ಕೃಪೆಯ ಕುಡಿನೋಟದ ಪ್ರಭಾವದಿಂದಲೇ ಗ್ರಂಥ ಅನುವಾದದೊಂದಿಗೆ ಪ್ರಕಟವಾಯಿತು. ಈ ಪುಣ್ಯಚೇತನರಿಗೇ ಈ ಕೃತಿಯನ್ನು ಸಮರ್ಪಿಸಿ, ಹೊರಬರಲು ಕಾರಣೀಭೂತರಾದ ಹಿರಿಯರಿಗೆ ವಂದನೆಗಳನ್ನು ಅರ್ಪಿಸಿ ಪೂರ್ಣವಿರಾಮ ಕೊಡುತ್ತೇನೆ.

ವಂದನಾರ್ಪಣೆ

ಶ್ರೀಹಂಸನಾಮಕ ಪರಮಾತ್ಮನಿಗೆ, ಜಗಜ್ಜನನಿಗೆ, ಶ್ರೀಮದಾನಂದತೀರ್ಥರಿಗೆ, ಶ್ರೀಮಟ್ಟೀಕಾಕಾರರಿಗೆ, ನಂತರದ ಎಲ್ಲ ಪೀಠಾಧಿಪತಿಗಳಿಗೆ, ವಿಶೇಷವಾಗಿ ಶ್ರೀಸತ್ಯಧರ್ಮತೀರ್ಥಶ್ರೀಪಾದರಿಗೆ ಮುಂದಿನ ಎಲ್ಲ ಮಹನೀಯರಿಗೆ, ಏನೂ ಇರದ ನನ್ನನ್ನು ವಿಶೇಷವಾಗಿ ಅನುಗ್ರಹಿಸುತ್ತಿರುವ ಪರಮಪೂಜ್ಯ **ಶ್ರೀ1008ಶ್ರೀಸತ್ಯಾತ್ಮತೀರ್ಥ ಶ್ರೀಪಾದರಿಗೆ** ನನ್ನ ಭಕ್ತಿಯ ಅನಂತ ಶಿರಸಾಷ್ಟಾಂಗ ನಮಸ್ಕಾರಗಳು.

ಪ್ರಪ್ರಥಮಬಾರಿಗೆ ಯಾವ ನಮ್ಮ ಮನೆತನದ ಹಿರಿಯರು ಇಂಥ ಭವ್ಯಪೀಠ **ಶ್ರೀಮದುತ್ತರಾದಿಮಠದ** ಗುರುಗಳಿಗೆ ಶರಣಾಗಿ ಅವರ ಶಿಷ್ಯತ್ವನ್ನು ವಹಿಸಿದರೋ ಆ ಕಾಲದ **ಮಳಗಿ** ಮತ್ತು **ಕೊರ್ಲಹಳ್ಳಿ** (ತಂದೆ+ತಾಯಿ) ಮನೆತನದ **ಹಿರಿಯ ಚೇತನರಿಗೆ** ನನ್ನ ಅನಂತ ಶಿರಸಾಷ್ಟಾಂಗ ನಮಸ್ಕಾರಗಳು. ಅದನ್ನು ಮುಂದೆವರೆಸಿಕೊಂಡು ಬಂದ **ಮುಂದಿನ** ಎಲ್ಲ ಹಿರಿಯರಿಗೂ ನನ್ನ ಸಾಷ್ಟಾಂಗ ನಮಸ್ಕಾರಗಳು.

ವಿದ್ಯಾದಾನ ಮಾಡಿ ನನ್ನನ್ನು ಉದ್ಧರಿಸಿದ, ಈಗಲೂ ಉದ್ಧರಿಸುತ್ತಿರುವ ನನ್ನ ವಿದ್ಯಾಗುರುಗಳಾದ, ಧ್ಯಾನಪ್ರಮೋದಾದಿ ನೂರಾರು ಪ್ರಶಸ್ತಿ ಪುರಸ್ಕೃತರಾದ ಈ ಕೃತಿಗೆ ಆಚಾರ್ಯವಾಣಿಯನ್ನು ಕರುಣಿಸಿದ **ಪಂ. ಪೂ. ಆಚಾರ್ಯರಿಗೆ (ಜಯತೀರ್ಥಾಚಾರ್ಯ ಮಳಗಿ)** ಭಕ್ತಿಪೂರ್ವಕ ನಮನಗಳು. ಇವರು ತಮ್ಮ ವಾಣಿಯಲ್ಲಿ ನನ್ನ ಕುರಿತಾಗಿ ಬರೆದದ್ದು ಅವು ಅವರಲ್ಲಿಯ ಗುಣಗಳೇ ಹೊರತು ನನ್ನವಲ್ಲ. ಇವರ ಅನುಗ್ರಹದಿಂದ ಆ ಗುಣಗಳು ನನ್ನಲ್ಲಿ ಬರಲಿ ಯಾವತ್ತೂ ಇರಲಿ ಎಂದು ಬೇಡುತ್ತೇನೆ.

ಶ್ರೇಷ್ಠವೈಷ್ಣವ ಜನ್ಮನೀಡಿ, ಹಗಲಿರುಳು ನನಗಾಗಿ ದುಡಿದು ದಣಿದ, ನನ್ನ ಪ್ರಗತಿಯಲ್ಲೇ ಸುಖಕಂಡ ನನ್ನ ವೃದ್ಧ ತಂದೆತಾಯಿಯರಾದ **ಶ್ರೀಗೋಪಾಲಾಚಾರ್ಯ ಮಳಗಿ** ಮತ್ತು **ಕು. ಸೌ. ಗೀತಾಬಾಯಿ** ಇವರಿಗೆ ನನ್ನ ಭಕ್ತಿಯ ವಂದನೆಗಳು.


ಭಾವಚಿತ್ರಗಳನ್ನು ಕೊಟ್ಟ **ಪಂ. ಪೂರ್ಣಪ್ರಜ್ಞಾಚಾರ್ಯ ಮಳಗಿ, ಶ್ರೀನವರತ್ನ ಗುರುರಾಜಾಚಾರ್ಯ** ಮತ್ತು **ಶ್ರೀವಾಮನರಾವ ಕುಲಕರ್ಣಿ** ಇವರಿಗೆ ವಂದನೆಗಳು. ಈ ಕೃತಿಯಲ್ಲಿ ಯಾವ ಯಾವ ಜ್ಞಾನಿಗಳ ಪುಸ್ತಕಗಳನ್ನು ಉಲ್ಲೇಖಿಸಿದ್ದೇನೋ ಅವರಿಗೆಲ್ಲ ನನ್ನ ಪ್ರಣಾಮಗಳು.

ಈ ಪುಸ್ತಕದ ಮುದ್ರಣಕ್ಕೆ ಆರ್ಥಿಕ ಸಹಾಯ ನೀಡಿದವರು **ಶ್ರೀ ಕೃಷ್ಣರಾವ ವಿ. ಕುಲಕರ್ಣಿ – ಹ. ಕುಂ. ಸೌ ಸರೋಜಿನಿ ಕೃಷ್ಣರಾವ ಕುಲಕರ್ಣಿ ದಂಪತಿಗಳು.** ಇವರು ಸಾತ್ವಿಕರು. ವೃದ್ಧಾಪ್ಯದ ತಮ್ಮ ಬದುಕನ್ನು ಕೇವಲ ಪಾಠ–ಪ್ರವಚನದಲ್ಲೇ ಕಳೆದು ಸಾರ್ಥಕ ಮಾಡಿಕೊಳ್ಳುತ್ತಿರುವವರು. ತಮ್ಮ ತಂದೆತಾಯಿಯರ ಮೇಲೆ ಅಪಾರ ಭಕ್ತಿಯನ್ನಿಟ್ಟ ಇವರು ತಮ್ಮ ತಂದೆತಾಯಿಯರ ಸ್ಮರಣಾರ್ಥವಾಗಿ ಈ ಪುಸ್ತಕದ ಮುದ್ರಣಕ್ಕೆ ಆರ್ಥಿಕ ಸಹಾಯವನ್ನು ನೀಡಿದ್ದಾರೆ. ಅಲ್ಲದೆ, ಶ್ರೀಶ್ರುತೀಶ ಗ್ರಂಥಾಲಯಕ್ಕೂ ಸಾಕಷ್ಟು ಆರ್ಥಿಕ ಸಹಾಯವನ್ನು ಸಲ್ಲಿಸಿದ್ದಾರೆ. ಇವರ ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಸೊಸೆ ಇವರೆಲ್ಲ ಇವರಷ್ಟೇ ಸಾತ್ವಿಕರು. ಇವರ ಸಮಸ್ತ ಕುಟುಂಬಕ್ಕೆ ಭಗವಂತ ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಕೊಡಲೆಂದು ಪ್ರಾರ್ಥಿಸುತ್ತೇನೆ.

ಡಿ. ಟಿ. ಪಿ ಮಾಡಿದ **ಶ್ರೀಶ್ರುತೀಶ ಡಿ. ಟಿ. ಪಿ ಸೆಂಟರ್**ನವರಿಗೆ, ಹೊದಿಕೆ ವಿನ್ಯಾಸಗೊಳಿಸಿದ **ಶ್ರೀರಾಘವೇಂದ್ರ ಕುಕನೂರು** ಇವರಿಗೆ ನನ್ನ ಶುಭ ಕಾಮನೆಗಳು.

ಡಾ. ಭೀಮಸೇನಾಚಾರ್ಯ ಮಳಗಿ

॥ ಶ್ರೀಗಂಗಾಯೈ ನಮಃ ॥



ಗಂಗೈವ ಪರಮೋ ಬಂಧುಃ ಗಂಗೈವ ಪರಮಂ ಸುಖಮ್ ।
ಗಂಗೈವ ಪರಮಂ ವಿತ್ತಂ ಗಂಗೈವ ಪರಮಾ ಗತಿಃ ॥

ಗಂಗೈವ ಪರಮಾ ಮುಕ್ತಿಃ ಗಂಗಾ ಸಾರತರೇತಿ ಯೇ ।
ವಿಭಾವಯಂತಿ ತೇಷಾಂ ತು ನ ದೂರಸ್ಥಾ ಕದಾಚನ ॥

ಶ್ರೀದೇವಿಭಗವತ

॥ ಶ್ರೀಶ್ರುತೀಶಂ ವಂದೇ ॥
॥ ಶ್ರೀಸತ್ಯಾತ್ಮತೀರ್ಥಗುರುಭ್ಯೋ ನಮಃ ॥

ಗಂಗಾಲಹರೀ

ಶ್ರೀಗುರುಭ್ಯೋ ನಮಃ । ಹರಿಃ ಓಂ ।

ಜಲೇ ಪೀತೇಽಪೀತೇ ಮನಸಿ ಚ ಶುಚಿತ್ವಂ ಜನಕಜಾ
ಭಿರಾಮೇ ಶ್ರೀರಾಮೇ ಮತಿರಿತಿ ಭವೇಽಸ್ಮಿನ್ನಪಿ ಭವೇತ್ ।
ಸುಮೂರ್ಧನ್ಯೇ ಮೂರ್ಧನ್ಯನಿಮಿಷಪುಷೋ ಬಿಭ್ರತಿ ಚ ಯತ್
ಸಸೋಮೇ ಸೋಮೇ ಸತ್ಯವಿಕುಲಲಲಾಮೇ ಯದಭವತ್ ॥ 1 ॥

ಗಂಗಾನದಿಯ ನೀರನ್ನು ಪ್ರಾಶನ ಮಾಡುವುದರಿಂದ ಮನಸ್ಸು ಶುದ್ಧವಾಗುತ್ತದೆ. ಜನಕಾತ್ಮಜಳಾದ ಸೀತೆಗೆ ಆನಂದ ನೀಡಿದ ಶ್ರೀರಾಮನಲ್ಲಿಯೇ ಮನಸ್ಸು ನಿಲ್ಲುತ್ತದೆ. ಚಂದ್ರ ಮತ್ತು ಉಮಾದೇವಿಯರಿಂದ ಸಹಿತನಾದ, ಇಂದ್ರನಿಗಿಂತಲೂ ಗರಿಷ್ಠನಾದ ಮಹದೇವನ ಮುಡಿಯಲ್ಲಿ ಈ ಗಂಗಾದೇವಿ ವಿರಾಜಮಾನಳಾಗಿದ್ದರೂ ಕೂಡಾ ಸೂರ್ಯವಂಶದಲ್ಲಿ ತಿಲಕಪ್ರಾಯನಾದ ಶ್ರೀರಾಮನಲ್ಲಿ ಈ ಜನ್ಮದಲ್ಲಿಯೇ ಮತಿಯನ್ನು ಹುಟ್ಟಿಸುತ್ತಾಳೆ.

ಗಂಗೇಽಗಂ ಗೇಯತೋಯೇ ನಗಮಪರಮಿಮಂ ಚಾಂಹಸಾಂ ಸಂಘಮಂತೇ
ಭಂಗೈರ್ಭಂಗ್ಯೈರುಪೇತಂ ಕಲಯಸಿ ಕಲಯೇಽಸ್ತೇ ಕಿಯಚ್ಚೇತ್ಯವೇಮಿ ।
ವಾತೈರ್ವಾ ತೈಃ ಸುಪೃಕ್ತೈರಲಮಲಮಮಲೇ ಸ್ಪರ್ಶಮಾತ್ರೇಣ ಗಾತ್ರೇ
ಯಾನೇ ಯಾಽನೇನ ವಾಂಛಾ ಹರಿಪುರವಸತೇರ್ನೋ ಬಹುತ್ವೇ ಕಿಮಾಂಧ್ಯಮ್ ॥ 2 ॥

ಅಮ್ಮಾ ಗಂಗೆಯೇ! ನಾವು ನಿನ್ನ ನದಿಯ ನೀರನ್ನು ಪ್ರಾಶನಮಾಡಿದಾಗ ನಿನ್ನ ಅಲೆಗಳೆಂಬ ಕೈಗಳು ಪರ್ವತಗಳಂಥ ನಮ್ಮ ಪಾಪರಾಶಿಗಳನ್ನು ನಾಶಪಡಿಸುತ್ತವೆ. ಅಮ್ಮ! ನಿನಗಿದೇನೂ ಕಷ್ಟಕರವಲ್ಲ! ಏಕೆಂದರೆ; ಜೀವೋತ್ತಮರಾದ ಶ್ರೀಮುಖ್ಯಪ್ರಾಣ ದೇವರು ಶ್ರೀಹರಿಯ ಸಾಮಾಜ್ರ್ಯದ ದಾರಿದೀಪರೂ, ಮುಖ್ಯಾಂಗರೂ ಎಂದು

ಶ್ರುತಿ–ಸ್ಮೃತಿ–ಸೂತ್ರ ಮತ್ತು ಇವುಗಳ ಭಾಷ್ಯಗಳಲ್ಲಿ ತಿಳಿಸಿದ್ದಾರೆ. ಶ್ರೀವಾಯು ದೇವರು ಒಂದೇ ರೂಪದಿಂದ ಈ ಅನಂತಜೀವರಾಶಿಗಳನ್ನು ಉದ್ಧರಿಸಿ ಪರಮಾತ್ಮನ ಬಳಿ ಕರೆದುಕೊಂಡು ಹೋಗುತ್ತಾರೆಂದು ಇರುವಾಗ ನಿನ್ನ ಜೊತೆಗೆ ನಿನ್ನ ಅಂತರ್ಯಾಮಿಯಾಗಿ ಒಂದು ರೂಪ ಮತ್ತು ನಿನ್ನ ಪ್ರತಿಹನಿಗಳಲ್ಲಿ ಬಹುರೂಪಗಳಿಂದ ಇರುವಾಗ ಇದು ನಿನಗೆ ಕಷ್ಟವಾದೀತೇ!

ನ ಗಾಂಗೇ ಗಾಂಗೇಯಸ್ಫುರದತುಲವರ್ಣಾರ್ಣಸಿ ವಿಧೇ
ರ್ವಿಪಾಕೇ ಪಾಕೇಹಾಹೃತಿಪದಮಪೇಕ್ಷ್ಯಂ ದೃಗುಪಗೇ ।
ಅಪಾರೇ ಪಾರೇಶ್ಯೇ ಸತ ಇತಿ ಹರೇರಂಘ್ರಿಲಸಿತಂ
ನಕಾಲೇಽಕಾಲೇ ತಂ ಪದಮಧಿಭು ದಿಶ್ಯಾನ್ನಿಜತುಲಮ್ ॥ 3 ॥

ಅಮ್ಮ! ದೈವವಶಾತ್ ನಿನ್ನ ದರ್ಶನಭಾಗ್ಯ ದೊರಕುತ್ತದೆ. ನಿನ್ನನ್ನು ಸಂದರ್ಶಿಸಿದ ಆ ಭಕ್ತನು ಪಾಕಾಸುರನ ಸಂಹಾರಕನಾದ ಇಂದ್ರನ ಸ್ಥಾನವನ್ನೂ (ಸ್ವರ್ಗವನ್ನು) ಇಚ್ಛಿಸಲಾರ. ಏಕೆಂದರೆ; ನೀನು ಪರಮಾತ್ಮನ ಪಾದದಿಂದ ಜನಿಸಿದವಳು. ನಿನ್ನ ಭಕ್ತರಾದ ನಮಗೆ ಶಾಸ್ವತವಾದ ನಿನ್ನ ತವರಾದ ಆ ಶ್ರೀಹರಿಯ ಪಾದಪದ್ಮಗಳನ್ನು ತೋರಿಸು.

ನ ನೌ ಕಾ ನೌಕಾಽಽಜ್ಯಾ ಹರಿಪದರತೇಸ್ತ್ವದರತೇಃ
ಪ್ರಚೇತಶ್ಚೇತಸ್ಕೇ ಭವತಿ ಭವಸಿಂಧೋಶ್ಚ ತರಣೇ ।
ನ ಮಾತರ್ಮಾತಸ್ತೇ ವಿಷಮಧಿಷಣಾ ಸ್ಯಾದ್ಯದಿ ನುತಿಂ
ಜನ್ಯೈರ್ಯಾಯಾದ್ಯಾಯಾದಿತಿ ವದಸಿ ಮೇ ತೇ ಸ ಚ ಸಮಃ ॥ 4 ॥

ಹೇ ವರುಣನ ಹೃದಯೇಶ್ವರಿಯೆ! ನೀನು ಶ್ರೀಹರಿಯ ಪಾದಾಸಕ್ತಳು. ಆದ್ದರಿಂದ ಈ ಸಂಸಾರಸಾಗರವನ್ನು ದಾಟಲು ನಿನಗೆ ನೌಕೆ ಬೇಕಾಗಿಲ್ಲ.! ಹಾಗೆಯೇ ನನಗೂ ನೌಕೆ ಅವಶ್ಯವಿಲ್ಲ. ನಾನು ನಿನ್ನ ಭಕ್ತನಾದ್ದರಿಂದ ನನಗೆ ನೀನು ಸಹಾಯ ಮಾಡುತ್ತಿ. ಅಮ್ಮ! ನನ್ನಲ್ಲಿ ವಕ್ರದೃಷ್ಟಿಯನ್ನಿಡಬೇಡ. ನೀನೂ ನಿನ್ನ ಭಕ್ತರಲ್ಲಿ ವಕ್ರದೃಷ್ಟಿಯನ್ನಿಡುವವಳೂ ಅಲ್ಲ. ಅಕಸ್ಮಾತ್ ನೀನೇದಾರೂ ವಕ್ರದೃಷ್ಟಿಯಿಂದ ಭಕ್ತರಿಗೆ ವರಗಳನ್ನು ಕೊಡುತ್ತಿಲ್ಲವೆಂತಾಗಿದ್ದರೆ ಈ ನಿನ್ನ ಭಕ್ತರಿಂದ ನೀನು ಪೂಜೆಗೊಳ್ಳುತ್ತಿದ್ದಿಲ್ಲ.

ಸದ್ದೈವಂ ದೈವಂ ಮೇ ತನುಜನುಷ ಇತ್ಯಂಬ ನ ವದೇಃ
ಸ ಗಾಂಗೇಯೋಽಗೇಯೋ ಭವತಿ ತನುಭೂಭಾಗ್ಯಸದಸಿ ।

ನ ದಾಯಾದಾಯಾದಾಃ ಸುದತಿ ಸುದತೀಂ ಮತ್ತ್ರಮುಖಿನಃ
ಸದಾರೋದಾರಾಸ್ತೇ ತುಚ ಇತ ಉದಾರೇ ದಿಶ ದೃಶಮ್ ॥ 5 ॥

ಹೇ ಅಮ್ಮ! ನಿನ್ನ ಮಗನ ದೈವ ಯಾವತ್ತೂ ಒಂದೇ ಬಗೆಯೆಂದು ತಿಳಿಯಬೇಡ. ನಿನ್ನ ಮಗನಾದ ಭೀಷ್ಮನು ಪುತ್ರವಂತರ (ಪಿತೃಗಳ) ಸಭೆಯಲ್ಲಿ ಶ್ಲಾಘ್ಯನಾಗಲಿಲ್ಲ. "ಅವನಿಗೆ ತಕ್ಕವಳಾದ ಕನ್ಯೆಯು ಸಿಗಲಿಲ್ಲ ಅದಕ್ಕಾಗಿ ಅವನು ಊರ್ಧ್ವರೇತಸ್ಕನಾಗಬೇಕಾಯಿತು" ಎಂದು ನೀ ಪ್ರತ್ಯುತ್ತರ ನೀಡಬೇಡ. ನಿನ್ನ ಅನುಗ್ರಹದಿಂದ ಆ ಕೆಲಸವನ್ನು ನಾವು ಮಾಡುತ್ತೇವೆ. ಹೇ ಉದಾರಹೃದಯಿ ಗಂಗೆಯೆ! ನಿನಗೆ ಶರಣು ಬಂದ ನಮಗೆ ಸಹಾಯಕಳಾಗು.

ನ ಚಸ್ಕಂದ ಸ್ಕಂದಾಭಿಧತುಚಿ ವಚೋ ಮೇ ತವ ಸದಾ
ನಿವಾಸೇ ವಾಸೇऽಹೋರ್ನ ಸ ಭವತಿ ಷಾಣ್ಮಾತುರ ಇತಿ ।
ಕುಮಾರೇ ಮಾರೇಷ್ವ್ಯಾऽನನುಗುಣಗಣೇऽಲಕ್ಷ್ಯಲಲನೇ
ನಮೋऽಹಂ ಮೋಹಂ ನೋ ಭಜ ಕುರು ಚ ಕುರ್ವೇ ಮಯಿ ಕೃಪಾಮ್ ॥ 6 ॥

ಅಮ್ಮ! ನಿನ್ನ ಇನ್ನೊಬ್ಬ ಮಗ ಸ್ಕಂದ ಭೀಷ್ಮನಂತಲ್ಲ. ಅವನು ಪ್ರಶಂಸಾರ್ಹ. ಏಕೆಂದರೆ; ಅವನು ಕುಮಾರನಾಗಿಯೂ ಸುಂದರಿಯರ ಕುಡಿನೋಟಕ್ಕೆ ಬಲಿಯಾಗಲಿಲ್ಲ. ಆದರೆ ಅಮ್ಮ! ಅವನಿಗೆ ಆರು ಜನ ತಾಯಂದಿರು. ಹೀಗಾಗಿ ಸದಾ ನಿನ್ನೊಂದಿಗೆ ಅವನು ಇರಲಾರ. ನಿನ್ನ ಮಗನಾದ ನಾನು ಮಾತ್ರ ಯಾವತ್ತೂ ನಿನ್ನ ದಡದ ಮೇಲೆಯೇ ಇರುವೆ. ನೀನೂ ಕೂಡಾ ಸದಾ ನನ್ನನ್ನು ಅನುಗ್ರಹಿಸು.

ನಯಜ್ಞೇ ಯಜ್ಞೇ ಧೀರ್ನ ಭವತಿ ಭವತ್ಯಾ ವನಕಣೇ
ಶುಭಾಪ್ತೇರ್ಭಾಪ್ತೇರ್ವಾ ಘಟಕ ಇತಿ ಲಬ್ಧೇ ತ್ರಿಪಥಗಾ ।
ಸಸಂದರ್ಭೇ ದರ್ಭೇ ಸತಿ ಪರಗತೇರೇಕಮಯನಂ
ಗುಣೋಪೇತೇऽಪೇತೇ ಗುಣತ ಇತಿ ದಿಶ್ಯಾ ನಿಜಸುಖಮ್ ॥ 7 ॥

ಅಮ್ಮ! ನಿನ್ನ ಜಲಕಣಗಳು ಪ್ರಾಪ್ತನಾದ ಪುರುಷನು; ಜ್ಯೋತಿಷ್ಟೋಮಾದಿ ಯಾಗಗಳನ್ನು ಮಾಡಲು ಇಚ್ಛಿಸುವುದಿಲ್ಲ. ಏಕೆಂದರೆ; ಆ ಹೋಮಾದಿಗಳಿಂದ ಪ್ರಾಪ್ತವಾಗುವ ಪುಣ್ಯ ನಿನ್ನ ಜಲಕಣಗಳ ಸ್ಪರ್ಶಮಾತ್ರದಿಂದ ಪುರುಷನು ಪಡೆಯುತ್ತಾನೆ. ನಿನ್ನ ದಂಡೆಯ ಮೇಲೆ ಬೆಳೆದ ದರ್ಭವೂ ಶ್ರೀಹರಿಯ ಚರಣಗಳನ್ನು ಸೇರುತ್ತದೆ. ಹೇ ಸುಗುಣೆ! ನೀನು ನನಗೆ ಮುಕ್ತಿಯಂಬ ಒಂದು ದಾರಿಯನ್ನು ತೋರಿಸು. ನೀನು ತ್ರಿಪಥಗಳಾದ್ದರಿಂದ ನಿನಗೇನೂ ಇದು ಅಶಕ್ಯವಲ್ಲ.

ನ ಜಾನೇ ಶ್ರೀಜಾನೇಶ್ಚರಣಮಖಿಲಂ ತ್ವತ್ಪಿತೃಮುಖಂ
ನಿರೀಕ್ಷ್ಯಾರೀಕ್ಷ್ಯಾಣಾಂ ಪದಮದಿಭು ನೈವಾಸ್ಮಿ ವಿಪದಾಮ್ ।
ಇತೀವಾತೀವಾತೀಪ್ರಗುಣವಚಸಾಂ ಶುದ್ಧಮನಸಾಂ
ಕೃಪಾಪಾತ್ರಂ ಪಾತ್ರಂತರರಹಿತ ಇತ್ಯಂಬ ಕುರು ಗಾಮ್ ॥ 8 ॥

ಹೇ ಅಮ್ಮ! ನಾನು ಶ್ರೀಹರಿಯ ಚರಣಗಳ ಹಿರಿಮೆಯನ್ನು ಅರಿತಿಲ್ಲ. ಆದರೆ, ಅವನ ಪಾದಾಂಗುಷ್ಠದ ಉಗುರಿನಿಂದ ಹೊರ ಬಂದ ನಿನ್ನನ್ನು ಕಾಣಲು ನಾನು ಬಂದಿದ್ದೇನೆ. ನಿನ್ನ ದರ್ಶನ ಮಾತ್ರದಿಂದಲೇ ಮಾನವನ ಎಲ್ಲ ಪಾಪಗಳೂ ಪರಿಹೃತವಾಗುತ್ತವೆ. ಹೆಚ್ಚಾಗಿ ನಾನು ಶುದ್ಧ ಮನಸ್ಕರ ಆಶೀರ್ವಾದವನ್ನೂ ಹೊಂದಿದ್ದೇನೆ. ಈ ಎಲ್ಲ ಕಾರಣಗಳಿಂದ ಅಮ್ಮ! ನನ್ನಲ್ಲಿ ಕೃಪಾದೃಷ್ಟಿನ್ನಿಡು.

ಭವತ್ತೀರೇಽತೀರೇ ಸುಘಟಯ ಕುಟೀರೇ ನಿವಸತಿಂ
ಲಸನ್ನೀರೇಽನೀರೇ ಜನದುರಿತದೂರೀಕೃತಿ ರುಚಿಮ್
ನಭೋಗೇ ಭೋಗೇಚ್ಛಾಂ ಹರಿಪದತುಲಸ್ಯನ್ನಮುಖರೇ
ನಿದೇಶೇ ದೇಶೇ ಮಾಂ ಜನನಿ ವಸತಾಂ ಧೇಹಿ ಚ ಸತಾಮ್ ॥ 9 ॥

ಹೇ ಆಕಾಶಗಂಗೆಯೇ! ಸುಗಂಧಯುಕ್ತ ತಂಗಾಳಿಯ ಈ ನಿನ್ನ ದಡದ ಮೇಲೆಯೇ ಇರುವ ಆಸೆ ನನಗಿದೆ. ಸುಂದರವಾದ ಅರಮನೆಯಂಥ ಮಂದಿರ ನನಗೆ ಬೇಡ. ಕೇವಲ ಕುಟೀರ ಸಾಕು. ನಿನ್ನನ್ನು ಸೇವಿಸುವ ಯೋಗ ಮಾತ್ರವಿರಲಿ. ಅದರಿಂದಲೇ ದುರಿತಗಳು ದೂರವಾಗುತ್ತವೆ. ಸರ್ವೋತ್ತಮನಾದ ವಿಷ್ಣುವಿಗೆ ಸಮರ್ಪಿತವಾದ ತುಳಸಿಯನ್ನು ಸೇವಿಸುವಂಥ ಭಾಗ್ಯವನ್ನು ಕರುಣಿಸು. ಹಾಗೆಯೇ ನಿನ್ನ ತೀರದಲ್ಲಿ ವಾಸಿಸಿದ ನಿನ್ನ ದಾಸರ ದಾಸ್ಯವನ್ನೂ ಕರುಣಿಸು.

ತವಾಮೋದಂ ಮೋದಂ ಮರುದುಪಗಮಾಘ್ರಾಯ ವಿಮದಃ
ಪ್ರಸೂನಾಂತರ್ನಾಂತರ್ಮಮ ಮೃಗಮದಸ್ಯೇತಿ ಸ ಮೃಗಃ ।
ಪರಾಭೂತೋಽಭೂತೋಪಮ ಉರುಚರನ್ನಧ್ವನಿ ಮರು
ದ್ವರೇ ದೃಷ್ಟೇಽದೃಷ್ಟೇ ಕಿಮಿತಿ ಹಠತೋಽಭೂದಿತಿ ಶಠಃ ॥ 10 ॥

ಅಮ್ಮ! ಕಸ್ತೂರಿಮೃಗವು ನಿನ್ನ ದಡದತ್ತ ಬಂದು; ತಂಗಾಳಿಯಿಂದ ಯುಕ್ತವಾದ ಪರಿಮಳಭರಿತ ನಿನ್ನ ನೀರನ್ನು ವೀಕ್ಷಿಸಿ ತಾನೇ ಪರಿಮಳಶ್ರೇಷ್ಠಳೆಂಬ ಹಮ್ಮನ್ನು ತೊರೆಯಿತು. ಮಲ್ಲಿಗೆಯ ಗಂಧಕ್ಕಿಂಲೂ ನಿನ್ನ ನೀರಿನ ಗಂಧ ಅಧಿಕವೆಂದು ಅರಿತು

ಓಡಿಹೋಯಿತು. ನಿನ್ನ ಕಂಪೂ ಜಿಂಕೆಯ ಹಿಂದೇ ಓಡಿತು! ವಾಯುವಿನಿಂದ ಬಂದ ಆ ಸುವಾಸನೆಯನ್ನು ಆಘ್ರಾಣಿಸಿದ ಆ ಜಿಂಕೆ "ನನ್ನ ಕಂಪಿಗಿಂತ ಈ ಗಂಗೆಯ ಪರಿಮಳ ಅದ್ವಿತೀಯ. ಅಯ್ಯೋ! ದೈವವೆ! ಇದೇನು ನನ್ನ ಗತಿ" ಎನ್ನುತ್ತ ಪದೆ ಪದೆ ಪರಾಭವಗೊಂಡಿತು.

ಅನೀರೇ ವಾನೀರೇ ಕುಶಶಕುನಿಜನ್ಮಾದಿ ದಿಶ ಮೇ
ಸದಾ ಯತ್ತೇ ಯತ್ತೇ ಮಯಿ ಯದಿ ಮತಾ ತೇ ಚ ಮಮತಾ ।
ರಹೋ ಮೇ ಹೋಮೇನಾಪ್ಯುಚಿತರಚಿತೇನಾಪಿ ಚ ಸತಾ
ಕ್ವಚಿತ್ತೇ ಚಿತ್ತೇಽಹಂ ವರಮಪರಮಸ್ಮಾನ್ನ ಹಿ ವೃಣೇ ॥ 11 ॥

ಹೇ ಅಮ್ಮ! ನಾನು ಶಾಸ್ತ್ರದ ದಾರಿಯಲ್ಲೇ ನಡೆದಿದ್ದೇನೆ. ನಿನ್ನ ಹಿರಿಮೆಯ ಜ್ಞಾನವನ್ನೂ ಅರಿತಿದ್ದೇನೆ. ನೀನು ನನ್ನಲ್ಲಿ ಕೃಪೆಯಿಟ್ಟು ಅನುಗ್ರಹಿಸುವುದಾದರೆ; ನನಗೆ ಹೀಗೊಂದು ವರವನ್ನು ಅನುಗ್ರಹಿಸು. 'ನಾನು ಮುಂದಿನ ಜನ್ಮದಲ್ಲಿ ಹಕ್ಕಿಯಾಗಿ ನಿನ್ನ ದಡದ ಮೇಲಿರುವ ದರ್ಭೆಯ ಮೇಲೆ ಕುಳಿತು ಸುಮಧುರವಾಗಿ ಹಾಡಬೇಕು.' ಹಾಗೆ ವರವನ್ನು ನೀಡು. ಅಮ್ಮ! ಇದಕ್ಕಿಂತ ಶ್ರೇಷ್ಠವಾದ ವರವನ್ನು ನಾ ಬಯಸೆನು.

ನ ನಿರ್ವಾಣಂ ವಾಽಣಂತ್ವಿತರ ಇತಿ ನಿರ್ವಾಣಮಿವ ಮೇ
ಶುಭೋದೇ ಭೋ ದೇವಿ ತ್ರಿನಯನಜಟಾಜೂಟಘಟಿತೇ ।
ನದೇಹೇ ದೇಹೇ ಚ್ಛೇಜ್ಜನನಿ ಜನಯೇರ್ಮಜ್ಜನಮಿದಂ
ಸಹಸ್ರೈರ್ಹಸ್ರೈರ್ವಾ ಸಹ ನ ಕಿಮಪೀಚ್ಛಾಮಿ ವರದೇ ॥ 12 ॥

ಅಮ್ಮ! ಮೋಕ್ಷಕ್ಕಾಗಿ ಪ್ರಯತ್ನಿಸುವ ಜನರನ್ನು ನಾ ಹಿಂಬಾಲಿಸಲಾರೆ. ಶ್ರೀಮಹರುದ್ರದೇವರ ಮುಡಿಯನ್ನೇ ಏರಿದ ನಿನ್ನ ಈ ನೀರಿನಲ್ಲಿ ಮುಳುಗುವುದರಲ್ಲೇ ನನಗೆ ತೃಪ್ತಿಯಿದೆ. ಈ ನಿನ್ನ ಉತ್ತಮ ಜಲದಲ್ಲಿ ಸ್ನಾನ ಮಾಡುವಾಗ ನಿನ್ನ ಹಿರಿಮೆ ಮರೆತರೆ ಅದು ಆನೆಯ ಸ್ನಾನಕ್ಕೆ ಸಮಾನ. ಹೇ ವರದೆ! ನಿನ್ನ ಮಹಿಮೆಯನ್ನು ತಿಳಿಯುತ್ತ ಸ್ನಾನ ಮಾಡಿದ ಮಾತ್ರಕ್ಕೇನೆ ಮೋಕ್ಷವಾಗುವುದು ಇಂಥ ಭಾಗ್ಯವನ್ನು ನನಗೆ ಕರುಣಿಸು.

ನ ನಾದೇಯಂ ದೇಯಂ ತವ ಭವತಿ ದುಷ್ಕರ್ಮಭರತಃ
ಸುಸೌಭಾಗ್ಯೇ ಭಾಗ್ಯೇಽನಧಿಕೃತ ಇತಿ ಪ್ರೇಕ್ಷ್ಯ ವದ ಮಾಮ್ ।

ತತೋ ಮಾನ್ಯಂ ಮಾऽನ್ಯತ್ ಸಕಲಮಕಲಂಕಂ ಫಲಮಿಯಾಂ
ನ ವಾಚಾ ವಾऽऽಚಾರಾದಮೃತನಯನೇ ತೇऽಸ್ತ್ಯವಿದಿತಮ್ ॥ 13 ॥

ಹೇ ಸೌಭಾಗ್ಯವಂತಳೆ! "ನೀನು ದುಷ್ಕರ್ಮದಲ್ಲೇ ರತನಾದ್ದರಿಂದ ನನ್ನ ನೀರಿನಲ್ಲಿ ಸ್ನಾನಾದಿಗಳನ್ನು ಮಾಡಬೇಡ" ಎಂದು ನೀನು ನನ್ನನ್ನು ಕುರಿತು ಹೇಳುವುದಾದರೆ; ನನ್ನನ್ನೊಮ್ಮೆ ನೋಡು. ನಿನ್ನ ದರ್ಶನದಿಂದಲೇನೆ ನಾನೆಂಥ ಉತ್ತಮಸ್ಥಾನವನ್ನು ಅಲಂಕರಿಸಿದ್ದೇನೆ. ಅಕಲಂಕರಿಗೇ ಸಿಗುವ ಫಲವಿದು. ಹೇ ಅಮೃತನಯನಳೆ! ಮಾತು ಮತ್ತು ಆಚಾರಗಳಿಂದ ನಿನಗೆ ತಿಳಿಯದ್ದೇನೂ ಇಲ್ಲ. ನಿನ್ನ ವೀಕ್ಷಣೆಯಿಂದಲೇ ನಾವು ಪವಿತ್ರರಾಗುತ್ತೇವೆ. ಆ ಕಾರಣದಿಂದ ನನಗೆ ಬೇರೆನೂ ಬೇಡ.

ನ ಯೋಗ್ಯೋಜೋಯೋಗ್ಯೋ ಭವತಿ ಭವತೋऽಪಾಂಗ ಇತಿ ಚೇದ್
ಉಪಾಯೋ ನಾಪಾಯೋತ್ತರಣ ಇದಮರ್ಥಾನ್ನ ಹಿ ಪರಃ ।
ವಿನಾ ನಾಥೇ ನಾಥೇ ಜಲಧಿದಯಿತೇ ವಿಷ್ಣುವಿಲಸ
ನ್ನಖಾಜ್ಜಾತೇऽಜಾತೇ ಸ್ಮೃತಿತ ಇತಿ ಜೀವಾಮಿ ಜಗತಿ ॥ 14 ॥

ಹೇ ಗಂಗೆಯೆ! "ತೇಜಸ್ವಿಗಳಾದ ಯೋಗಿಗಳು ಮಾತ್ರ ನನ್ನನ್ನು ಹೊಂದಿ ನನ್ನಿಂದ ಅನುಗ್ರಹವನ್ನು ಪಡೆಯಬಹುದು ಆದರೆ ನೀನಲ್ಲ" ಎಂದು ನೀ ಹೇಳಬೇಡ. ಏಕೆಂದರೆ; ಈ ವಿಷಯದಲ್ಲಿ ನಾನು ಅನಾಥ. ಈ ಸಂಸಾರಸಾಗರವನ್ನು ದಾಟಲು ನಿನ್ನನ್ನು ಶರಣು ಹೊಂದುವುದೊಂದನ್ನು ಬಿಟ್ಟು ಇನ್ನೊಂದು ಉಪಾಯವು ನನಗೆ ಇರುವುದಿಲ್ಲ. ಹೇ ನಾಥಳೆ! ವಿಷ್ಣುವಿನ ಪಾದಾಂಗುಷ್ಠದಿಂದ ಹುಟ್ಟಿ, ಚತುರ್ಮುಖನ ಕಮಂಡಲುವಿನಲ್ಲಿ ವಾಸವಾಗಿರುವವಳು ನೀನು ಎಂದೆಲ್ಲ ಸ್ಮರಿಸಿಕೊಳ್ಳುತ್ತಲೇ ನಾನು ಜೀವಿಸುತ್ತೇನೆ.

ನಮಸ್ತೇ ಮಸ್ತೇನಾಕೃಷಿ ಶಿವಲಸನ್ಮಸ್ತಕಮಣೇ
ನಿಜಸ್ಥಾನಸ್ಥಾ ನಾಸಿ ಕರಕಿಸಲಂ ನಾರ್ಪಯಸಿ ಯತ್ ।
ನಯೋಪೇತಾऽಪೇತಾಪನಯಸುಗುಣಾ ನೋ ತವ ಗುಣಃ
ಸ್ವತೋऽದೋಷಾ ದೋಷಾಕರಸಹನಿವಾಸಸ್ಯ ಮಹಿಮಾ ॥ 15 ॥

ಶಿವನಮಸ್ತಕಮಣಿಯೆ! ನಿನಗೆ ನನ್ನ ಶಿರಸಾಷ್ಟಾಂಗ ನಮಸ್ಕಾರಗಳು. ಒಂದು ವೇಳೆ ನೀನು ನಿನ್ನ ಪಾಣಿಪಲ್ಲವವನ್ನು ನನ್ನ ಮಸ್ತಕದಲ್ಲಿಡದಿದ್ದರೆ, ನೀನು ನಿನ್ನ

ಮೂಲಸ್ಥಾನದಲ್ಲಿ (ವಿಷ್ಣುಪದ) ಇಲ್ಲವೆಂದೇ ಭಾವಿಸುತ್ತೇನೆ. ಏಕೆಂದರೆ; ಭಕ್ತರ ತಲೆಯ ಮೇಲೆ ಅನುಗ್ರಹ ಮಾಡದ ಗುಣ ನಿಂದಲ್ಲ. (ನಿನ್ನ ಮೂಲಸ್ಥಾನದ್ದೂ ಅಲ್ಲ) ದೋಷಾಕರನಾದ ಚಂದ್ರನ ಜೊತೆಗೆ ವಾಸಿಸಿದ ಮಹಿಮೆಯಿದು ಎಂದು ನಾನು ಭಾವಿಸುತ್ತೇನೆ.

ಸುಪಾದೇ ಪಾದೇ ತೇ ಪತಿತ ಇತಿ ನೋಹ್ಯಃ ಸಮತಯಾ
ಪಯೋಧೇ ಯೋಧೇನಾಪಿ ತು ಪಿತುರುಪಾಸ್ಯಃ ಕ ಇತಿ ತೇ ।
ವಿವಾದೇ ವಾದೇಽಲಂ ನ ಭವಸಿ ಪಿಶಾಚೇಶ್ವರ ಶಿರೋ
ವಿಲಾಸೋಽಲಾಸೋ ಯನ್ಮಯಿ ಮನಸ ಇತ್ಥಂ ಸಮುಚಿತಃ ॥ 16 ॥

ಸುಂದರಪಾದಳೆ! ನಿನ್ನ ಪಾದಾರವಿಂದಗಳಿಗೆ ನಾನು ಶರಣಾಗಿದ್ದೇನೆ. ಅಲ್ಲದೆ ಪೂಜಿಸುತ್ತೇನೆ ಆದ್ದರಿಂದ ನಾನು ನಿನ್ನ ಪ್ರತಿಪಕ್ಷಿಗಳಿಗೆ ಸಮಾನನೆಂದು ಊಹಿಸಬೇಡ. ಅಮ್ಮ! ನೀನು ನಿನ್ನ ತಂದೆಯ ಅದಾವ ಅವಯವವನ್ನು ಉಪಾಸಿಸುತ್ತಿ ಎಂದು ಕೇಳಿದರೆ ನೀನು ನಿರುತ್ತರಳಾಗುತ್ತಿ. ನಿನ್ನ ಮೂಲಸ್ಥಾನ ವಿಷ್ಣುವಿನ ಪಾದವೇ ಆಗಿದ್ದರಿಂದ ನೀನು ಅವನ ಪಾದಗಳನ್ನೇ ಉಪಾಸಿಸುತ್ತಿ. ಆದರೆ, ಭಕ್ತರು ಮಾತ್ರ ನಿನ್ನ ಪಾದಗಳನ್ನು ಸೇವಿಸುತ್ತಾರೆ. ಹಾಗಿದ್ದರೂ ನೀನು ಭಕ್ತರನ್ನು ಅನುಗ್ರಹಿಸುವುದಿಲ್ಲವೆಂದಾದರೆ; ಅದೂ ನಿನ್ನ ದೋಷವಲ್ಲ. ರಾಕ್ಷಸೇಶ್ವರನಾದ ಶಿವನ ಮುಡಿಯಲ್ಲಿ ನೀನು ನಿಂತಿದ್ದರಿಂದ ಆ ಪ್ರಭಾವವೆಂದು ನಾನು ತಿಳಿಯುತ್ತೇನೆ.

ವೃಥಾ ಪ್ರೇಷ್ಯಃ ಪ್ರೇಷ್ಯಸ್ತ್ವಹಮಿಹ ನ ಗಂಗೇ ತವ ಪುರಾ
ಪುರಾರಾತೇ ರಾತೇಸ್ತ್ವದಧಿಪತಿಸೇತೋ ರಘುಪತೇಃ ।
ಸತಿ ಸ್ಮಾರಂ ಸ್ಮಾರಂ ತದನುಗ ಇತೀಷ್ಟೇ ಕುರು ಕೃಪಾಂ
ಸರಾಮೋ ರಾಮೋಽಸ್ತೀತ್ಯಹ ನ ತವ ಭೀತಿರ್ಭವತಿ ಕಿಮ್ ॥ 17 ॥

ಹೇ ಗಂಗೆಯೆ! ಪುರಾಸುರನನ್ನು ಸಂಹರಿಸಿದ ಮಹರುದ್ರನ ಗೆಳೆಯನಾದ ನಿನ್ನ ಪತಿಯಾದ ಸಮುದ್ರನಿಗೆ ಸೇತುವೆ ಕಟ್ಟಿದ ಶ್ರೀರಾಮನ ದೂತನೆಂದು ನನ್ನನ್ನು ತಿಳಿ. ಈ ಘಟನೆಯನ್ನು ಮೇಲಿಂದ ಮೇಲೆ ಸ್ಮರಿಸಿ ನನ್ನಲ್ಲಿ ಅನುಗ್ರಹವನ್ನು ಮಾಡು. ಆಗ (ಹಿಂದೆ) ಶ್ರೀರಾಮನು ಸೀತಾವಿಯೋಗದ ಸಿಟ್ಟಿನಿಂದ ಸೇತುವೆಯನ್ನು ಕಟ್ಟಿದ್ದಾನೆ. ಈಗ ಸೀತಾಸಹಿತನಾಗಿ ಬಂದಿದ್ದಾನೆ ಆದ್ದರಿಂದ ನನಗೇನೂ ಭೀತಿಯಿಲ್ಲ ಎಂದು ನೀನು ಹೇಳುತ್ತಿದ್ದಿಯ!

ಪ್ರಪೀತಾ ಪೀತಾಹಂ ಮಹಿಮಿತಿ ಚ ರಾಜರ್ಷಿಪತಿನಾ
ನ ತತ್ತ್ವಂ ತತ್ತ್ವಂ ತೇ ನ ಭವತಿ ಭವಾಹಂಯುರಧಿಭು ।
ದಯಾದೃಷ್ಟೇ ದೃಷ್ಟೇರ್ವದ ನ ವಿಷಯೋಽಗಸ್ತ್ಯಮುನಿಪೋ
ನ ವಿಪ್ರೋ ವಿಪ್ರೋಽಹಂ ವಿಭವದಾ ಕಿಂ ಲಘುಗಿರಾ ॥ 18 ॥

ಹೆ ಗಂಗೆಯೆ! "ಶ್ರೇಷ್ಠ ರಾಜರ್ಷಿ ಜಹ್ನುವಿನಿಂದ ಕುಡಿಯಲ್ಪಟ್ಟಿದ್ದರೂ ನಾನು ಮರಳಿ ಭೂಮಿಗೆ ಬಂದಿದ್ದೇನೆ" ಎಂದು ನೀನು ತಿಳಿಯಬೇಡ. ದಯಾಪರಳಾದ ಗಂಗೆಯೆ! ಅಗಸ್ತ್ಯಮುನಿಯ ಕುರಿತಾಗಿ ನೀನೇನು ಹೇಳುವೆ? ಅವನು ಬ್ರಾಹ್ಮಣ ಎನ್ನುವೆಯಾ! ಮತ್ತೆ ನಾನೂ ಬ್ರಾಹ್ಮಣನಲ್ಲವೆ! ಆದ್ದರಿಂದ ನೀನು ನನ್ನಲ್ಲಿ ಗರ್ವವನ್ನು ತೋರಿಸದೆ ಅನುಗ್ರಹಿಸು.

ಗಭೀರೇ ಭೀರೇಷ್ಯಾ ಯಮಸಹಜಯಾ ಸ್ನೇಹಸಹಿತೇ
ತ್ಯಭಿಪ್ರೇತಪ್ರೇತಪ್ರವರನಗರೀಯಾಪನಮತಿಃ ।
ಇತಿ ತ್ವಂತಿ ತ್ವಂ ತದ್ವಿರಹಸಹಿತಾ ತತ್ಪಿತೃಕರಾ
ವಿಲೋಕೇ ಲೋಕೇ ಮಜ್ಜತಿ ಕೃತಕೃಪಾಸೀರಿತಿ ಧುತಾ ॥ 19 ॥

ಹೇ ಗಭೀರಳೆ! (ಅಪಾರಮಹಿಮಳೆ!) ನೀನು ಯಮನ ತಂಗಿಯಾದ ಯಮುನೆಯ ಗೆಳತಿ. ಆ ಅರ್ಥದಲ್ಲಿ ನೀನೂ ಯಮನ ಸಹಚಾರಿಣಿ. ನನ್ನ ಯಾವುದೋ ಒಂದು ಚಿಕ್ಕ ಅಪರಾಧಕ್ಕೆ ನೀನು ನನ್ನನ್ನು ಯಮಪುರಕ್ಕೆ ಕಳುಹಿಸಿದರೂ ನಾನು ಭೀತನಾಗಲಾರೆ. ಏಕೆಂದರೆ; ಯಮುನೆಯ ತಂದೆಯಾದ ಸೂರ್ಯನ ಕಿರಣಗಳ ದರ್ಶನಕ್ಕಿಂತಲೂ ಮೊದಲು ಸ್ನಾನ ಮಾಡಿದ ಭಕ್ತರನ್ನು ಯಮನು ಅನುಗ್ರಹಿಸುತ್ತಿರುವುದರಿಂದ ನಾನೂ ಹಾಗೇ ಮಾಡಿದ್ದರಿಂದ ನನಗೇನೂ ಭೀತಿಯಿಲ್ಲ.

ಯುತೇ ಸ್ವೈರಂ ಸ್ವೈರಂಜನಜನಕಕಾರ್ಯೈರ್ಜನನಿ ತೇ
ವಿಚಾರೇ ಚಾರೇ ಮಯ್ಯನಿತರಗತೌ ಕಃ ಪ್ರತಿವದಃ ।
ಸ್ವಕೌಕಃ ಕೌಕಸ್ವಿನ್ಯಹಮುಪಗತಃ ಸಜ್ಜನಜನಿಃ
ಕೃಪಾಯೋಗ್ಯೋಽಯೋಗ್ಯೋ ರಸಿಕಸರಸಾಸೀತಿ ಸುಗುಣೇ ॥ 20 ॥

ಹೇ ತಾಯಿ ! ನಿನ್ನ ಹೊರತು ನನ್ನನ್ನು ಈ ಪಾಪದಿಂದ ಯಾರೂ ಮುಕ್ತ ಮಾಡಲಾರರು. ಇಂಥ ಸೇವಕನಾದ ನಾನು ನಿನ್ನ ವಿಚಾರಗಳಿಗೆ ಏನೆಂದು ಉತ್ತರಿಸಲಿ! ಆದ್ದರಿಂದ ಹೇ ಕೌಕಸ್ವಿನಿಯೇ!(ಜಲಯುಕ್ತಳೆ!) ನಾನು ನಿನಗೆ ಶರಣಾಗಿ ಬಂದಿದ್ದೇನೆ.

ಬಂದ ನಾನು ಅಯೋಗ್ಯನಾಗಿದ್ದರೂ ನಾನು ಜನಿಸಿದ ಕುಲವನ್ನು ನೋಡಿಯಾದರೂ ನನ್ನನ್ನು ಅನುಗ್ರಹಿಸು.

ಜನಾ ವಾ ನಾವಾಽಲಂ ಮಿತಮಪಿ ಮಿತದ್ರುಂ ಚ ತರಿತುಂ
ಗುಣಾಪಾರೇಽಪಾರೇ ಚರಣಶತಪತ್ರಚ್ಛದಧೃತಿಃ ।
ಭವಾಬ್ಧೇರಬ್ಧೇಃ ರಮಣಿ ರಮಣೀಯೇ ಪರತಟಂ
ಯತೋ ಯಾತಾಽಽಯಾತಾ ತಮಪಿ ಚ ನ ಯಾಚೇ ತವ ಬಲಾತ್ ॥ 21 ॥

ಅಮ್ಮ! ಈ ಸಂಸಾರವೆಂಬ ಸಾಗರ ಮಿತವಾಗಿದ್ದರೂ ಇದನ್ನು ದಾಟಲು ನಾವು ಸಮರ್ಥರಾಗಿಲ್ಲ. ಹೇ ದೋಷಮುಕ್ತಳೆ! ನಿನ್ನ ಪಾದಾರವಿಂದಗಳನ್ನು ಆಶ್ರಯಿಸಿದ ಭಕ್ತರು ಈ ಭವಸಾಗರವನ್ನು ದಾಟಬಲ್ಲರು. ಹೇ ರಮಣಿ! ನಿನ್ನ ಅನುಗ್ರಹದ ದೆಸೆಯಿಂದ ನಿನ್ನ ಪಾದವನ್ನೇ ಆಶ್ರಯಿಸಿದ್ದರಿಂದ ಈ ಭವಸಾಗರವನ್ನು ದಾಟಲು ಸಾಧ್ಯವಾದಾಗ ಈ ವಿಷಯಕ್ಕಾಗಿ ಭಗವಂತನ ಪಾದವೂ ಅಪೇಕ್ಷಿತವಾಗಿಲ್ಲ. (ನಿನ್ನ ಅನುಗ್ರಹವಿರದೆ ನಾವು ಸ್ವತಂತ್ರರಾಗಿ ಅವನ ಪಾದವನ್ನು ಹಿಡಿಯಲಾರೆವು ಎಂದು ಭಾವ)

ಗಿರಿಃ ಕ್ಷುಬ್ಧೋಽಕ್ಷುಬ್ಧೋಽದಿತಿಜದಿತಿಜೈಃ ಸಾಕಮಿತಿ ಮೇ
ದಯಾದೋ ಯಾದೋಗ್ರ್ಯಾಕುಲಕಲಶವಾರ್ಧೌ ಮಥನಕೃತ್ ।
ವೃಥಾನ್ಯಾಯೇಽನ್ಯಾಯೇ ಸಹಜವಿಷಮಾಸೀದ್ ಯದಮೃತಂ
ತ್ವಭಿಪ್ರಾಯಃ ಪ್ರಾಯಸ್ತದಧಿರಸನಂ ನೋ ತವ ಜಲಮ್ ॥ 22 ॥

ಅಮ್ಮ! ಶ್ರೀಹರಿಯು ಮಂದರಪರ್ವತವನ್ನು ಕಡಗೋಲನ್ನಾಗಿ ಮಾಡಿಸಿ, ಸುರಾಸುರರಿಂದ ಸಮುದ್ರ ಮಥನ ಮಾಡಿಸಿ ಅಮೃತ ಬರುವಂತೆ ಅನುಗ್ರಹಿಸಿದನು. ಅದು ಮತ್ತೆ ದೈತ್ಯರ ಪಾಲಾದಾಗ ಭಗವಂತ ಮೋಹಿನಿ ರೂಪದಿಂದ ಬಂದು ಅದನ್ನು ದೇವತೆಗಳಿಗೇ ನೀಡಿದ. ಇದು ಮೇಲ್ನೋಟಕ್ಕೆ ಅನ್ಯಾಯವೆಂದೆನಿಸಿತು. ಆದರೆ, ಭಗವಂತ ಅಥವಾ ದೇವತೆಗಳು ಪ್ರಾಯಶಃ ನಿನ್ನ ನೀರಿನ ರುಚಿಯನ್ನು ನೋಡಿರಲಿಕ್ಕಿಲ್ಲ. ಏಕೆಂದರೆ ಆ ಭಗವಂತನಾಗಲಿ ಅಥವಾ ದೇವತೆಗಳಾಗಲಿ ಅವರು ಭೂವಾಸಿಗಳಲ್ಲವಲ್ಲ!

ದಧೀಚೋ ಧೀಚೌರ್ಯಾದಮರವರತೋಽಸ್ಥ್ನ್ಯಪ್ಯಸುಗತೇ
ಕೃತೋಽಯಂ ತೋಯಂ ತೇ ಪವಿರವಿಪಪಕ್ಷೈಕದಲನಃ ।

ಅರೋಷೇ ರೋಷೇಣಾಚಲಕುಲಮಘಾದ್ರಿಂಶ್ಚ ದಲಯನ್
ಮಹೋದೇऽಹೋ ದೇವಿ ದ್ವಿಜಸಮವನಂ ರಾತಿ ಸುಗತಿಮ್ ॥ 23 ॥

ಅಮ್ಮ! ದಧೀಚಿ ಋಷಿಗಳು ದೇವತೆಗಳ ಪ್ರಾರ್ಥನೆಯನ್ನು ಮನ್ನಿಸಿ ತಮ್ಮ ಅಸ್ಥಿಯನ್ನು ಕೊಡಲೊಪ್ಪಿದರೂ ಅವರ ಪ್ರಾಣ ಉತ್ಕ್ರಮಣವಾದ ಮೇಲೆಯೇ ಅದು ವಜ್ರಾಯುಧವಾಯಿತು. ಮುಂದೆ ಪರ್ವತಗಳ ರೆಕ್ಕೆಗಳನ್ನು ಮಾತ್ರ ಕತ್ತರಿಸಿತು. ಆದರೆ ಅಮ್ಮ! ನಿನ್ನ ನೀರು ಆ ವಜ್ರಾಯುಧಕ್ಕಿಂತಲೂ ಮಿಗಿಲಾಗಿದೆ. ಏಕೆಂದರೆ; ನಿನ್ನಲ್ಲಿ ಸ್ನಾನ ಮಾಡುವುದರಿಂದ ಕೇವಲ ನಿನ್ನ ನೀರಿನ ಸ್ಪರ್ಶದಿಂದ ದೇಹದ ಎಲ್ಲ ಅವಯವಗಳಲ್ಲಿ ಅಡಗಿದ ಪಾಪಾಚಲಗಳು ಕತ್ತರಿಸುತ್ತವೆ. ಅಲ್ಲದೆ ದ್ವಿಜಾದಿಗಳಿಗೆ ಸದ್ಗತಿಯನ್ನೂ ನೀಡುತ್ತದೆ.

ಪರಾಗೋ ರಾಗೋತ್ಥಾ ಭವ ನ ಗಣನೀಯಂ ಯದಸಿ ಮೇ
ಸುವಿಪ್ರಾಪ್ಯಾ ಪ್ರಾಪ್ಯಾ ಭವಸಿ ಜನನೀ ನೀತಿತ ಇತಿ ।
ಶುಭೋತ್ಕಂಠೇ ಕಂಠೇ ಪತಿತ ಇತಿ ಹೋಜ್ಝಾಮಿ ಸ ಕಥಂ
ಪ್ರಜಾ ತೇ ಜಾತೇರ್ಷ್ಯಾ ಪಿತರಮತುದತ್ ಸಂಸ್ಮರ ಕಥಾಮ್॥ 24 ॥

ಹೇ ಅಮ್ಮ! ಸ್ನೇಹಯುಕ್ತವಾದ ನನ್ನ ಅಪರಾಧಗಳು ಅಸಂಖ್ಯ. ಅವುಗಳನ್ನು ಗಣನೆಗೆ ತೆಗೆದುಕೊಳ್ಳದೆ ಸಸ್ನೇಹಳಾಗು. ಹೇ ಶುಭೋತ್ಕಂಠೆ! ನೀನು ನನ್ನ ತಾಯಿಯಾದ್ದರಿಂದ ಅದ್ಹೇಗೆ ನನ್ನನ್ನು ತ್ಯಜಿಸುತ್ತಿ? ನನ್ನನ್ನು ರಕ್ಷಿಸುವ ಹೊಣೆ ನಿನಗಿದೆ. ಅಮ್ಮ! ನಿನ್ನ ಮಗನಾದ ಭೀಷ್ಮನು ಶ್ರೀಕೃಷ್ಣ ಪರಮಾತ್ಮನ ಮೇಲೆಯೇ ಬಾಣಪ್ರಯೋಗವನ್ನು ಮಾಡಿ ದೊಡ್ಡ ತಪ್ಪು ಮಾಡಿದ. ನೀನು ನನ್ನನ್ನು ಅನುಗ್ರಹಿಸದೇ ಉಪೇಕ್ಷಿಸಿದರೆ ನಾನೂ ಅದೇ ತೆರನಾದ ತಪ್ಪನ್ನು ಮಾಡಬಹುದು.

ಉದಾರೇ ಕೇದಾರೇ ಜಲದನಿಕರೋ ರಾತಿ ಚ ಜಲಂ
ನ ಸಸ್ಯೇ ಸ ಸ್ಯೇನಾದಿವಿಪ ಉಪಪಾತಿ ಭಜತಿ ಕಿಮ್ ।
ಕೃಪಾಪಾಂಗೋऽಪಾಂಗೋ ಯದಿ ಭವತಿ ತೇऽನ್ಯೋ ಮಯಿ ಪತನ್ ।
ತಥಾ ಬಾಲೇ ಬಾಲೇಂದ್ವನುಗತಸುಸಸ್ವಿನ್ಯಸಿ ನ ಕಿಮ್ ॥ 25 ॥

ಹೇ ಗಂಗಾದೇವಿಯೆ! ಹೇಗೆ ಮೋಡಗಳು ಹೊಲಗದ್ದೆಗಳಿಗೆ ಮಳೆಯನ್ನು ನೀಡದಿರುವಾಗ ಹಕ್ಕಿಗಳು ಆಹಾರವನ್ನು ಸೇವಿಸುವುದಿಲ್ಲವೊ ಹಾಗೆಯೇ ನೀನು ನನ್ನ ಮೇಲೆ ಕರುಣೆಯನ್ನು ತೋರಿಸದೇ ಇದ್ದರೆ ನಾನು ಹೇಗೆ ಭಜಿಸಲಿ? ಅಮ್ಮ!

ನಾನು ನಿನ್ನ ಮುಂದೆ ಮಗುವಾಗಿದ್ದೇನೆ. ಹಾಗೆಂದು ನಿನ್ನ ಕರುಣೆಯನ್ನು ಪಡೆಯಲು ನಾನು ಅಯೋಗ್ಯನೆಂದು ನೀನು ಊಹಿಸಬೇಡ. ಏಕೆಂದರೆ, ನೀನು ಮಹರುದ್ರದೇವರ ಮುಡಿಯಲ್ಲಿದ್ದ ಶಿಶುಚಂದ್ರನ ಸಮೀಪದಲ್ಲಿಯೇ ಇರುವೆಯಲ್ಲವೆ!

ಅಯೇ ಗಂಗೋತ್ತುಂಗೇ ಜಲಧಿಲಲನೇ ವಿಷ್ಣುನಖಜೇ
ನಭೋಗೇ ಭೋಗೇತೇ ಸ್ವರಪಗ ಇಲಾಲಂಕೃತಿಕೃತೇ ।
ವಿದೇ ದೇವಿ ಸ್ಯಾ ಮೇ ಮುದ ಇತಿ ವದನ್ ಮಾತರನಿಶಂ
ಸ್ಮರನ್ ಗಾಯನ್ ನೃತ್ಯನ್ನವಿಗಲದಿಯಾಂ ಮಂಗಲಮಹಮ್॥ 26 ॥

ಎಲೈ ಉತ್ತುಂಗತರಂಗಿಣಿಯೆ! ವರುಣನ ಹೃದಯೇಶ್ವರಿಯೇ, ವಿಷ್ಣುನಖಜಾತಳೆ! ಆಕಾಶಗಂಗೆಯೆ! ಭಾಗೀರಥಿಯೆ! ನೀನು ಭೂಮಿಯಲ್ಲಿರುವ ಸ್ವರ್ಗ. ಭೂಮಿಗೆ ನೀನೇ ಆಭರಣ. ಭಗವಂತನ ಜ್ಞಾನಕಾಗಿ ನಿನ್ನಿಂದ ಬ್ರಾಹ್ಮಣತ್ವದ ಜ್ಞಾನವನ್ನು ಪಡೆದು ಶ್ರೀಹರಿವಾಯು ಮಹಿಮೆಯನ್ನು ಗಾಯನ ಮಾಡಿ, ಸ್ಮರಿಸಿ, ನರ್ತನೆ ಮಾಡಿ ಶಾಶ್ವತವಾದ ಮೋಕ್ಷವನ್ನು ಹೊಂದುತ್ತೇನೆ.

ಮುಖಚ್ಛಾಯಾಽಚ್ಛಾಯಾ ನ ಪುನರುಪಗೋ ಜಹ್ನುರಿತಿ ಕಿಂ
ತವಾರ್ತಾ ವಾರ್ತಾಯಾಃ ಕಲಶಜ ಉಪಾಯಾನಿತಿ ಪತೇ ।
ನ ದಕ್ಷೋದಕ್ಷೋದೇ ಬಹುಮುಖಿ ವಿನೋದೇಽತಿಚತುರಾ
ತರಂಗೈರಂಗೈರಸ್ವಜತ ಯುವಯೋರಸ್ತು ಸ ಮುದೇ ॥ 27 ॥

ವಿನೋದಕ್ಕಾಗಿ ವರುಣನು ತನ್ನ ಮಡದಿಗೆ ಹೇಳುತ್ತಾನೆ.

"ಹೇ ಗಂಗೆ! ಇಂದು ನಿನ್ನ ಮುಖಚ್ಛಾಯೆ ಅದೇಕೆ ಕಾಂತಿಯುತವಾಗಿಲ್ಲ! ಜಹ್ನುಗಳ ಆಗಮನದ ಭಯವೆ!" ಎಂದನು. ಪ್ರತಿಯಾಗಿ ಮಾತೆ ಗಂಗೆ "ಹೇ ಸ್ವಾಮಿ! ಕುಂಭಸಂಭವರಾದ ಅಗಸ್ತ್ಯಮುನಿಗಳು ನಿಮ್ಮ ದಡದತ್ತ ಬರುವರೆಂಬ ವಾರ್ತೆಯನ್ನು ಕೇಳಿದ್ದರಿಂದ ನನ್ನ ಮುಖಕಾಂತಿ ಕುಂದಿದೆ" ಎಂದಳು. ಪ್ರತಿಯಾಗಿ ನಗುತ್ತ ವರುಣ ಉತ್ತರಿಸಿದನು "ಹೇ ಬಹುಮುಖಿ! (ಅನೇಕ ದಾರಿಗಳಲ್ಲಿ ಹರಿಯುವವಳೆ!) ನೀನು ಬಹುಮುಖಿಯಾದ್ದರಿಂದ ನನ್ನ ನೀರನ್ನು ನೀನು ಒಣಗಿಸಲು ಸಮರ್ಥಳಲ್ಲ. ಆದರೂ ನೀನು ವಾದದಲ್ಲಿ ಅತಿಚತುರಳು" ಎನ್ನುತ್ತ ತನ್ನ ಅಲೆಗಳೆಂಬ ಅಂಗಗಳಿಂದ ತಬ್ಬಿಕೊಂಡನು.

ಈ ದಂಪತಿಗಳ ಈ ವಿನೋದವು ನಮಗೆ ಸಂತೋಷವನ್ನು ನೀಡಲಿ.

ನ ವಾನುಪ್ರಾಸೋ ಯತ್ ಸುಪದಪದವೀ ನಾಪಿ ಚ ರಸೋ
ನ ವಾಲಂಕಾರೋಽಸ್ಯಾಂ ಫಣಿತಿರಪಿ ವಾ ಫಾಣಿತಸಮಾ ।
ತಥಾಪೀಯಂ ಯಚ್ಛ್ರೀಹರಿಚರಣಜಾ ಸ್ತೋತ್ರಲಹರೀ
ಛಲಾದ್ಧರ್ಯಾಹ್ವಾಟ್ಯಾ ಯತಿವಿರಚಿತೇತ್ಯಸ್ತು ರುಚಿತಾ ॥ 28 ॥

ಈ ಲಹರಿಯಲ್ಲಿ ಅನುಪ್ರಾಸಗಳಿಲ್ಲ. ಸುಂದರಪದಗಳಿಲ್ಲ. ಶೃಂಗಾರಾದಿ ರಸಗಳಿಲ್ಲ. ಉಪಮಾದಿ ಅಲಂಕಾರಗಳೂ ಇಲ್ಲ. ಕಲ್ಲುಸಕ್ಕರೆಯಂತೆ ಮಧುರವೂ ಆಗಿಲ್ಲ. ಹೀಗಿದ್ದರೂ ಕೂಡಾ ಪರಮಾತ್ಮನ ಪಾದದಿಂದ ಜನಿಸಿದ ಮಾತೆ ಗಂಗೆಯ ಸ್ತೋತ್ರವಾದ್ದರಿಂದ, ಯತಿಗಳಿಂದ ವಿರಚಿತವಾಗಿದ್ದರಿಂದ ಇದು ಸಂಗ್ರಹಕ್ಕೆ ಯೋಗ್ಯವಾಗಿದೆ ಎಂದು ಮಹನೀಯರು ತಮ್ಮ ವಿನಯಭಾವವನ್ನು ಪದರ್ಶಿಸಿ ಈ ಕೃತಿಯನ್ನು ಭಗವಂತನಿಗೆ ಅರ್ಪಿಸುತ್ತಾರೆ.

ಆದರೆ, ಟೀಕಾಕಾರರು (ಈ ಗ್ರಂಥದ) ಈ ಶ್ಲೋಕಕ್ಕೆ ಮೇಲೆ ಹೇಳಿದ ಅನುಪ್ರಾಸಾದಿಗಳು ಯಾವೂ ಇಲ್ಲವೆಂದೇನಿಲ್ಲ. ಎಲ್ಲವೂ ಇವೆ. ಇದ್ದ ಆ ಎಲ್ಲವೂ ಹಿಂದೆಂದೂ ಕಂಡಿರದ ಹೊಸ ಹೊಸ ಬಗೆಯದ್ದಾಗಿವೆ. ಸಾಕೆಂಬ ಭಾವನೆ ಮೂಡಿಸುವಂಥದಲ್ಲ. ಎಂದು ಕವಿಗಳ ಪಾಂಡಿತ್ಯವನ್ನು ವಿವರಿಸಿ ಭಗವಂತನಿಗೆ ಸಮರ್ಪಿಸುತ್ತಾರೆ.

ಶ್ರೀಸತ್ಯಧರ್ಮತೀರ್ಥರ ಗಂಗಾಲಹರಿಯ ವೈಶಿಷ್ಟ್ಯದತ್ತ ಒನ್ನೋಟ

ಶ್ರೀಸತ್ಯಧರ್ಮತೀರ್ಥಶ್ರೀಪಾಂದಗಳವರ ಶ್ರೀಗಂಗಾಲಹರೀಯನ್ನೋದಿದ ನಾವು; ಅದರ ವೈಶಿಷ್ಟ್ಯದತ್ತ ಗಮನಹರಿಸೋಣ.

ಸಂಸ್ಕೃತದಲ್ಲಿ ಲಹರೀ ಎಂದರೆ ಕನ್ನಡದಲ್ಲಿ **'ದೊಡ್ಡ ಅಲೆ'** ಅಥವಾ **'ಮಹಾತರಂಗ'.**

ಶ್ರೀಗಂಗೆಯ ಮಹಾತರಂಗವನ್ನು ಬಣ್ಣಿಸಲು ಹೊರಟ ಲಹರಿಯೇ ಗಂಗಾಲಹರೀ.

ತತ್ತ್ವ-ಸತ್ತ್ವಗಳಿಂದ ಉತ್ತಮವಾದ ಲಹರೀ ಈ ಗಂಗಾಲಹರೀ.

ಗಂಗೆಯನ್ನು ಸಾಕ್ಷಾತ್ಕರಿಸಿಕೊಂಡ ಗಂಗಾಪ್ರಿಯರ ಲಹರೀ ಈ ಗಂಗಾಲಹರೀ.

ಎಲ್ಲ ದೃಷ್ಟಿಕೋನಗಳಿಂದಲೂ ಇದು ಅನುಪಮ ಲಹರೀ ಈ ಗಂಗಾಲಹರೀ. ಒಂದರ್ಥದಲ್ಲಿ ಗಂಗಾಪುತ್ರನೇ ರಚಿಸಿದ ಗಂಗಾಸ್ತೋತ್ರ ಲಹರೀ.

ಶ್ರೀಗಂಗಾಧರನು ಶ್ರೀಸತ್ಯಧರ್ಮಗುರುವರ್ಯರಿಗೆ ಒಲಿದಿದ್ದು ಇತಿಹಾಸ. ಕೆಲವು ಸಾತ್ವಿಕ ಭಕ್ತರು ಈ ಮಹನೀಯರನ್ನು ರುದ್ರಾಂಶಸಂಭೂತರೆಂದೇ ನಂಬುತ್ತಾರೆ. ಈ ಅರ್ಥದಿಂದ ನೋಡಿದರೆ– ಗಂಗಾಧರನೇ ತನ್ನ ಜಟಾಜೂಟದಲ್ಲಿ ನಿಂತ ಗಂಗೆಯ ಲಹರೀಯನ್ನು ಬಣ್ಣಿಸಿದಂತೆ! ಅಂದರೆ; ಗಂಗಾಧರನೇ ರಚಿಸಿದ ಗಂಗಾಲಹರೀ!

ಸ್ತವನದ ದೃಷ್ಟಿ ಮತ್ತು ಗುರುಚಂದ್ರಕಲೋದಯಕಾರರೇ ಹೇಳುವಂತೆ ಇದು ನಿಶ್ಚಿತ ಗಂಗಾಸ್ತೋತ್ರ. ಆದರೆ,

ಮತ್ತೊಂದು ದೃಷ್ಟಿಯಿಂದ ಪರಾಮರ್ಶಿಸಿದಾಗ ಇದು **ಶಾಸ್ತ್ರಕಾವ್ಯ.**

ಶ್ರೀಕ್ಷೇಮೇಂದ್ರ (12ನೇ ಶತಮಾನ) **"ಸುವೃತ್ತತಿಲಕ"**ವೆಂಬ ತನ್ನ ಗ್ರಂಥದಲ್ಲಿ ಕಾವ್ಯಗಳನ್ನು 'ಶಾಸ್ತ್ರ', 'ಕಾವ್ಯ', 'ಶಾಸ್ತ್ರಕಾವ್ಯ' ಮತ್ತು 'ಕಾವ್ಯಶಾಸ್ತ್ರ' ಎಂದು ನಾಲ್ಕು ಬಗೆಗಳನ್ನು ಹೇಳುತ್ತಾನೆ. ಅವುಗಳ ಲಕ್ಷಣಗಳನ್ನೂ ತಿಳಿಸುತ್ತಾನೆ. ಅವನ ದೃಷ್ಟಿಯಲ್ಲಿ ಶಾಸ್ತ್ರಕಾವ್ಯವೆಂದರೆ; **"ಶಾಸ್ತ್ರಕಾವ್ಯಂ ಚತುರ್ವರ್ಗಪ್ರಾಯಂ ಸರ್ವೋಪದೇಶ ಕೃತ್।"**

ಅಂದರೆ, **"ಸರ್ವೋಪದೇಶಕೃತ್ ಕಲ್ಯಾಣಪ್ರದನಾನಾವಿಧೋಪದೇಶಯುಕ್ತಂ, ಚತುರ್ವರ್ಗಪ್ರಾಯಂ ಧರ್ಮಾರ್ಥಾದಿಚತುರ್ವರ್ಗಸಾಧಕಂ ಶಾಸ್ತ್ರಕಾವ್ಯಂ"** ಎಂದು **"ಪ್ರಭಾ"** ಎಂಬ ಟೀಕೆಯಲ್ಲಿ ಟೀಕಾಕಾರರು (ಸುವೃತ್ತತಿಲಕಾಟೀಕಾ) ಈ ಲಕ್ಷಣವನ್ನು ವಿಶದೀಕರಿಸುತ್ತಾರೆ. ಈ ಲಕ್ಷಣದಿಂದ ವೀಕ್ಷಿಸಲಾಗಿ ಈ ಲಹರೀ ಮಂಗಲವನ್ನು ದೊರಕಿಸಿಕೊಡುವ, ನಾನಾಬಗೆಯ ಉಪದೇಶಗಳಿಂದ ಕೂಡಿದ, ಧರ್ಮಾರ್ಥಾದಿ ಚತುರ್ವರ್ಗಪ್ರದವೂ ಆದ ಕಾವ್ಯವೇ. ಆದ್ದರಿಂದ ಇದು **'ಶಾಸ್ತ್ರಕಾವ್ಯ'** ಎಂದೂ ಹೇಳಬಹುದು!

1. ಶಿಖರಿಣೀವೃತ್ತದ ಔಚಿತ್ಯ!

ಶಿಖರಿಣೀ ಇದೊಂದು ವೃತ್ತ. ಶ್ರೀಸತ್ಯಧರ್ಮತೀರ್ಥರ ಗಂಗಾಲಹರಿಯು ಈ ಶಿಖರಿಣಿವೃತ್ತದಲ್ಲಿದೆ. ಎರಡನೆಯ ಶ್ಲೋಕವೊಂದನ್ನು ಬಿಟ್ಟು.

ಈ ವೃತ್ತದ ಲಕ್ಷಣವೆಂದರೆ; ಈ ವೃತ್ತದಿಂದ ಕೂಡಿದ ಶ್ಲೋಕದಲ್ಲಿ ಒಟ್ಟು 68 ಅಕ್ಷರಗಳಿರಬೇಕು. ಪ್ರತಿಪಾದದಲ್ಲಿ 17 ಅಕ್ಷರಗಳು ಅನಿವಾರ್ಯ. ಆ ಹದಿನೇಳು ಅಕ್ಷರಗಳು **ರಸ್ಯೈ ರುದ್ರೈಶ್ಛಿನ್ನಾ ಯಮನಸಭಲಾ ಗಃ ಶಿಖರಿಣೀ।** ಈ ಲಕ್ಷಣಕ್ಕನುಗುಣವಾಗಿ ಕ್ರಮವಾಗಿ ಯಗಣ, ಮಗಣ, ನಗಣ, ಸಗಣ, ಭಗಣ ಮತ್ತು ಒಂದು ಲಘು ಮತ್ತೊಂದು ಗುರು ಈ ಕ್ರಮದಲ್ಲೇ ಇರಬೇಕು. ಆರನೇ ಅಕ್ಷರದ ನಂತರ ಯತಿ (ಪಾದದ ವಿಶ್ರಾಮಸ್ಥಾನ). ಇದು ಶಿಖರಿಣೀ ವೃತ್ತದ ಲಕ್ಷಣ. ಲಕ್ಷಣೋಕ್ತಿಯ ಪ್ರಾಸ.

U _ _| _ _ _| U U U|U U _ |_ U U |U _|

ರಸ್ಯೈರು | ದ್ರೈಶ್ಛಿನ್ನಾ | ಯಮನ| ಸಭಲಾ | ಗಃ ಶಿಖ | ರಿಣೀ|

ಯಗಣ| ಮಗಣ| ನಗಣ| ಸಗಣ| ಭಗಣ| ಲಘು ಗುರು|

ಪರಮಪೂಜ್ಯ ಶ್ರೀಸತ್ಯಧರ್ಮತೀರ್ಥಶ್ರೀಪಾದರ ಗಂಗಾಲಹರೀ

U _ _ | _ _ _ | U U U | U U _ |_ U U | U _|

ಜಲೇಪೀ | ತೇಪೀತೇ| ಮನಸಿ| ಚ ಶುಚಿ |ತ್ವಂ ಜನ | ಕಜಾ|

ಯಗಣ| ಮಗಣ| ನಗಣ| ಸಗಣ| ಭಗಣ| ಲಘು ಗುರು|

ಜ್ಞಾನಸಾಗರರಾದ ಶ್ರೀಸತ್ಯಧರ್ಮತೀರ್ಥರು ತಮ್ಮ ಗಂಗಾಲಹರೀಯನ್ನು

ಅದೇಕೆ ಈ ಶಿಖರಿಣೀ ವೃತ್ತದಲ್ಲೇ ರಚಿಸಿದರೆಂದು ಆಲೋಚಿಸಿದರೆ; ಈ ವಿಷಯಕ ನನ್ನ ಆಲೋಚನೆ ಹೀಗಿವೆ–

1. ಕೋಶಗಳಲ್ಲಿ ಶಿಖರಿಣಿ ಎಂದರೆ; **"ಉತ್ತಮಸ್ತ್ರೀ"**. ಗಂಗಾಮಾತೆಯ ಉತ್ತಮತೆಯನ್ನು ಸಾರಲೆಂದೇ ರಚಿಸಿದ ಈ ಕಾವ್ಯದಲ್ಲಿ ಗಂಗೆಯ ಉತ್ತಮತೆ ಕೇವಲ ಶಬ್ದಾರ್ಥಗಳಿಂದಷ್ಟೇ ಅಲ್ಲ ತಾವು ಬಳಸುವ ವೃತ್ತದ ನಾಮದಿಂದಲೂ ಅವಳು ಉತ್ತಮ ದೇವಸ್ತ್ರಿ ಎಂಬುದನ್ನು ಸಾರಬೇಕೆಂಬ ದೃಷ್ಟಿಯಿಂದ ಶಿಖರಿಣಿವೃತ್ತವನ್ನು ಬಳಸಿರಬಹುದು.

2. ಸುವೃತ್ತತಿಲಕದಲ್ಲಿ ಶಾಸ್ತ್ರಕಾವ್ಯದ ಲಕ್ಷಣವನ್ನು ತಿಳಿಸುವಾಗ ಕ್ಷೇಮೇಂದ್ರನು **"ಶಾಸ್ತ್ರಕವ್ಯೇಽತಿದೀರ್ಘಾಣಾಂ ವೃತ್ತಾನಾಂ ನ ಪ್ರಯೋಜನಮ್ ।"** ಶಾಸ್ತ್ರಕಾವ್ಯಗಳಲ್ಲಿ ಅತಿದೀರ್ಘವಾದ, ಬೃಹದ್ವರ್ಣಗಳಿಂದ ಕೂಡಿದ ವೃತ್ತಗಳನ್ನು (ಸ್ರಗ್ಧರಾದಿ) ಬಳುಸುವುದು ಪ್ರಯೋಜನವಲ್ಲವೆಂದು ಅಭಿಪ್ರಾಯಪಡುತ್ತಾನೆ. ಪ್ರಾಯಶಃ ಪ್ರಾಚೀನವಾದ, ವೇದಾಂಗ ವೈದಿಕಛಂದಶಾಸ್ತ್ರದ ನಿಯಮವೂ ಇದಾಗಿರಬಹುದು! ಆದ್ದರಿಂದಲೂ ಇದು ಕೇವಲ ಸ್ತೋತ್ರವಲ್ಲದೆ; ಶಾಸ್ತ್ರಕಾವ್ಯವೂ ಆಗಿದೆ ಎಂದು ತಿಳಿಸಲೂ ಕವಿವರ್ಯರು ಅಷ್ಟೊಂದು ಬ್ರಹದ್ವರ್ಣಗಳಲ್ಲದ **'ಶಿಖರಿಣಿ'** ವೃತ್ತವನ್ನೇ ಆಯ್ದುಕೊಂಡಿರಬಹುದು!

ಜಗನ್ನಾಥಪಂಡಿತನ ಗಂಗಾಲಹರಿಯೂ ಶಿಖರಿಣೀವೃತ್ತದಲ್ಲೇ ಇದ್ದದ್ದು ಇಲ್ಲಿ ಸ್ಮರಣೀಯ.

3. ಮತ್ತೊಂದು ದೃಷ್ಟಿಯಿಂದ ನೋಡಲಾಗಿ ಕ್ಷೇಮೇಂದ್ರನು ಶಿಖರಿಣಿ ವೃತ್ತದ ಬಳಕೆಗೊಂದು ನಿಯಮವನ್ನು ಹೇಳುತ್ತಾನೆ. **"ಉಪಪನ್ನಪರಿಚ್ಛೇದಕಾಲೇ ಶಿಖರಿಣೀ ಮತಾ ।"** ಇದರರ್ಥವನ್ನು **ಪ್ರಭಾ** (ಸುವೃತ್ತತಿಲಕದ ಟೀಕಾ)ಕಾರರು **"ಉಪಪನ್ನ ಪರಿಚ್ಛೇದಕಾಲೇ ಸಿದ್ಧಸೀಮಾನಿರ್ಧಾರಣಸಮಯೇ ಶಿಖರಿಣೀ ಮತೇಷ್ಟಾ...."** ಎಂದು ಅರ್ಥವನ್ನು ವಿಶದೀಕರಿಸುತ್ತಾರೆ. ಈ ದೃಷ್ಟಿಯಿಂದ ನೋಡಲಾಗಿ ರಾಮಾಯಣ, ಮಹಾಭಾರತ ಮತ್ತು ಭಾಗವತವೇ ಮೊದಲಾದ ಅನೇಕ ಪುರಾಣಗಳಲ್ಲಿ ಸಿದ್ಧವಾದ ಗಂಗೆಯ ಸೀಮೆಯನ್ನು (ತಾರತಮ್ಯದಲ್ಲಿ ಅವಳ ಸ್ಥಾನ, ಭಗವಂತನನುಗ್ರಹದಿಂದ ಯಾವ ಸೀಮೆಯಲ್ಲಿ ಅವಳ ವ್ಯಾಪ್ತಿ ಎನ್ನುವ ವಿಚಾರವನ್ನು) ಇಲ್ಲಿ ವರ್ಣಿಸುವ ಉದ್ದೇಶವು ಕವಿಗಳಿಗಿರುವುದರಿಂದಲೂ ಶಿಖರಿಣಿವೃತ್ತವನ್ನು ಬಳಸಿರಬಹುದು!

4. ಇನ್ನೊಂದು ಪಥದಿಂದ ವೀಕ್ಷಿಸಲಾಗಿ ಗಂಗೆಯು ಪರಮಾತ್ಮನ ಪಾದದಿಂದ ಬಂದವಳು. ನಂತರ ಹಿಮವತ್ಪರ್ವತದ ಶಿಖರದಿಂದ ಇಳಿದವಳು. ಹೀಗೆ ಬರುವಾಗ ಇವಳು ಮಯೂರೀಯಂತೆ ನೃತ್ಯವನ್ನು ಮಾಡುತ್ತ ಬಂದಳೆಂದು ಇವರು ವರ್ಣಿಸಬೇಕಿದೆ. ಆ ಭಾವ ಓದುಗರ ಮನಸ್ಸಿನಲ್ಲಿ ಮೂಡಬೇಕಿದೆ. ಅದಕ್ಕಾಗಿ

"ಮಯೂರಿ" ನೃತ್ಯಕ್ಕೆ ಉಚಿತವಾದ ಈ ಶಿಖರಿಣಿವೃತ್ತವನ್ನು ಮಹಾನುಭಾವರು ಇಲ್ಲಿ ಬಳಸಿರಬಹುದು.

ಭವಭೂತಿಯು ತನ್ನ ಕಾವ್ಯಗಳಲ್ಲಿ ಮಾಡಿದ ಶಿಖರಣೀ ವೃತ್ತದ ಬಳಕೆಯನ್ನು ಕ್ಷೇಮೇಂದ್ರನು ವರ್ಣಿಸುವಾಗ **"ಮಯೂರೀವ ನೃತ್ಯತಿ"** ಎಂದೇ ವಿವರಿಸಿದ್ದು ಇಲ್ಲಿ ಉಲ್ಲೇಖಾರ್ಹ!

ಇವು ನನ್ನ ವಿವೇಚನೆ. ಇನ್ನು ಕವಿಗಳ ಅಂತರ್ದೃಷ್ಟಿ ಕವಿಗಳೇ ಬಲ್ಲರು.

2. ನವಪ್ರಾಸಗಳ ಸಂಕಲನ

ಶ್ರೀಸತ್ಯಧರ್ಮತೀರ್ಥರು ತಮ್ಮ ಈ ಗಂಗಾಲಹರಿಯ ಪ್ರತಿ ಲಹರಿಗಳಲ್ಲೂ ಒಂದೊಂದು ವಿಶಿಷ್ಟ ಬಗೆಯ ಪ್ರಾಸಗಳನ್ನು ಹೆಣೆಯುತ್ತಾರೆ. **ತೀರೇऽತೀರೇ, ನೀರೇऽನೀರೇ, ನಭೋಗೇ ಭೋಗೇ, ಸುಪಾದೇ ಪಾದೇ, ಪರಾಗೋ ರಾಗೋತ್ಥಾ, ಸುವಿಪ್ರಾಪ್ಯಾ ಪ್ರಾಪ್ಯಾ** ಮುಂತಾದವು.

ಇಂತಹ ನವನವೀನ ಪ್ರಾಸಗಳು ಓದುಗನ ಹೃದಯದಲ್ಲಿ ಆನಂದ-ಭಕ್ತಿಗಳನ್ನು ಹುಟ್ಟಿಸುತ್ತವೆ. ಅಖಂಡ ಓದಿಸುತ್ತಲೇ ಹೋಗುತ್ತವೆ. ಕೆಲವು ಓದುಗರಿಗೆ ಅರ್ಥವಾಗದಿದ್ದರೂ; ಮನದಾಳದಲ್ಲಿ ಭಕ್ತಿಯ ಭಾವನೆಯನ್ನು ಮಾತ್ರ ಮೂಡಿಸುತ್ತವೆ. ಅಂತಿಮ ಘಟ್ಟಕ್ಕೆ ಬಂದಾಗ ಗಂಗಾಭಕ್ತಿ ಗರಿಷ್ಠವಾಗುತ್ತದೆ. 26ನೇ ಶ್ಲೋಕದಲ್ಲಿ **ಗಂಗೋತ್ತುಂಗೇ, ಜಲಧಿಜಲನೆ, ವಿಷ್ಣುನಖಜೆ, ನಭೋಗೆ, ಭೋಗೇತೆ, ಸ್ವರಪಗೆ** ಮತ್ತು **ಇಲಾಲಂಕೃತಿಕೃತೇ** ಎಂಬ ವಿಶೇಷಣಗಳು ನಮ್ಮಲ್ಲಿ ಸುಪ್ತವಾಗಿದ್ದ ಗಂಗಾಭಕ್ತಿಯ ತರಂಗಗಳನ್ನು ಬಡಿದು ಮೇಲೆಕ್ಕೆಬ್ಬಿಸುತ್ತವೆ.

3. ವಿಶಿಷ್ಟ ವಿಶೇಷಣಗಳು

ಶ್ರೀಸತ್ಯಧರ್ಮತೀರ್ಥರು ಈ ಲಹರೀಯಲ್ಲಿ ಗಂಗೆಯನ್ನು ಸಂಬೋಧಿಸುವಾಗ ಬಹಳ ವಿಶಿಷ್ಟವಾದ ವಿಶೇಷಣಗಳಿಂದ ಅವಳನ್ನು ಓಲೈಸುತ್ತಾರೆ. ಓದುಗನಿಗೆ ಗಂಗೆಯ ಆ ವಿಶೇಷಣದಿಂದ ಅವಳದೊಂದು ಮಹಿಮೆಯೂ ಅನುಸಂಧಾನಕ್ಕೆ ಬರಬೇಕು ಈ ನಿಟ್ಟಿನಲ್ಲಿ ಅವರು ವಿಶೇಷಣಗಳನ್ನು ಬಳಸಿದ್ದು ವಿಶೇಷ. ಈ ಶಾಸ್ತ್ರಕಾವ್ಯದಲ್ಲಿ ಅವರು ಗಂಗೆಯನ್ನು ಸಂಬೋಧಿಸಿದ ವಿಶೇಷಣಗಳು ಹೀಗಿವೆ-

ವಿಷ್ಣುವಿಲಸನ್ನಖಾಜ್ಜಾತೆ, ವಿಷ್ಣುನಖಜೆ, ಅಜಾತೆ, ಶಿವಲಸನ್ಮಸ್ತಕಮಣೆ, ಪ್ರಚೇತಶ್ಚೇತಸ್ಕೆ, ಅಬ್ಧಿರಮಣಿ, ಗಂಗೆ, ಸುದತಿ, ಉದಾರೆ, ಗುಣೋಪೇತೆ, ಅಂಬ, ನಭೋಗೆ, ದೇವಿ, ನದೇಹೆ, ವರದೆ, ಸುಸೌಭಾಗ್ಯೆ, ಅಮೃತನಯನೆ, ನಾಥೆ, ಪಯೋಧೆ,

ಸುಪಾದೆ, ದಯಾದ್ರುಷ್ಟೆ, ಗಭೀರೆ, ಜನನಿ, ಸುಗುಣೆ, ಕೌಕಸ್ವಿನಿ, ಅಪಾರೆ, ಗುಣಾಪಾರೆ, ಅರೋಷೆ, ಮಹೋಢೆ, ಶುಭೋತ್ಕಂಠೆ, ಬಹುಮುಖಿ, ಜಲಧಿಲಲನೆ, ಗಂಗೋತ್ತುಂಗೆ ಇಲಾಲಂಕೃತಿಕೃತೆ,

ಆಶ್ಚರ್ಯವೆಂದರೆ; ಈ ವಿಶೇಷಣಗಳು ಶ್ರೀಗಂಗಾಸಹಸ್ರನಾಮದಲ್ಲಾಗಲಿ ಅಥವಾ ಇನ್ನಾವುದೇ ಶ್ರೀಗಂಗಾಸ್ತೋತ್ರಗಳಲ್ಲಾಗಲಿ ಕಾಣಸಿಗದ ಆದರೆ ಪುರಾಣಾದಿಗಳಲ್ಲಿರುವ ಅವಳ ಕಥೆಗೆ ಸಂಬಂಧಿಸಿದ ವಿಶಿಷ್ಟ ವಿಶೇಷಣಗಳು.

4. ಇತಿಹಾಸ–ಪುರಾಣಗಳ ಕಥಾಸಂಗಮ

ಪ್ರಪಂಚದ ಪ್ರಾಚೀನ ಇತಿಹಾಸಗಳು ಎರಡು. ಒಂದು ರಾಮಾಯಣ ಮತ್ತೊಂದು ಮಹಾಭಾರತ. ಮೊದಲಿನದನ್ನು ಶ್ರೀವಾಲ್ಮೀಕಿಗಳು ವಿರಚಿಸಿದರೆ; ಎರಡನೆಯದನ್ನು ಭಗವಾನ್ ಶ್ರೀವೇದವ್ಯಾಸರು ರಚಿಸಿದ್ದಾರೆ. ಈ ಮಹಾಭಾರತದ ವಿಚಾರಗಳನ್ನೇ ವಿಸ್ತಾರವಾಗಿ ಜೀವಿಗಳ ಸ್ವಭಾವಕ್ಕನುಸಾರವಾಗಿ, ಅವರವರ ಸಾಧನೆ ಅವರವರಿಗಾಗಲೆಂದು 18 ಪುರಾಣಗಳನ್ನು ಭಗವಾನ್ ಶ್ರೀವೇದವ್ಯಾಸರೇ ರಚಿಸಿದ್ದಾರೆ. ಇವೆಲ್ಲವೂಗಳ ಆಳವಾದ ಜ್ಞಾನ ಶ್ರೀಸತ್ಯಧರ್ಮತೀರ್ಥರಿಗಿದ್ದದ್ದು ಅವರ ಚರಿತ್ರೆ ಮತ್ತು ಅವರ ಗ್ರಂಥಗಳಿಂದ ತಿಳಿದು ಬರುತ್ತದೆ. ಪ್ರಸಕ್ತ ಈ ಗಂಗಾಲಹರಿಯಲ್ಲಿ ಮಹನೀಯರು ರಾಮಾಯಣ, ಮಹಾಭಾರತ, ಭಾಗವತ, ವಾಯುಪುರಾಣ, ಬ್ರಹ್ಮಾಂಡಪುರಾಣ, ಪದ್ಮಪುರಾಣ ಮತ್ತು ವಿಷ್ಣುಪುರಾಣ ಹಾಗೂ ಬ್ರಹ್ಮವೈವರ್ತಾದಿ ಪುರಾಣಗಳಲ್ಲಿ ಬಂದ ಕೆಲವು ಕಥೆಗಳನ್ನು ಶ್ರೀಗಂಗೆಯೊಂದಿಗೆ ಸಂಬಂಧಿಸುತ್ತಾರೆ. ತಮ್ಮ ಅಪ್ರತಿಮಪಾಂಡಿತ್ಯದ ತುಣುಕನ್ನು ಪ್ರದರ್ಶಿಸುತ್ತಾರೆ. ಅವುಗಳಲ್ಲಿ ಕೆಲವು ಹೀಗಿವೆ.

1. ಇಂದ್ರನು ಪಾಕಾಸುರನನ್ನು ಸಂಹಾರ ಮಾಡಿದ ಕಥೆಯನ್ನು **ಪಾಕೇಹಾಹೃತೇಃ** (ಪಾಕೇಹಾಹೃತೇಃ ಪಾಕಶಾಸನಸ್ಯ..., ಟೀಕಾ) ಎಂಬ ಪದದಿಂದ ಪುರಾಣೋಕ್ತ ಇಂದ್ರನ ಆ ವೈಭವವನ್ನು ನೆನಪಿಸುತ್ತಾರೆ. (3ನೇ ಶ್ಲೋಕ)

2. ಈ ಲಹರೀ ಮಹಾಭಾರತದ ಭೀಷ್ಮಾಚಾರ್ಯರ ಚರಿತ್ರೆಯನ್ನು ಪ್ರಾಯಶಃ ಪೂರ್ತಿ ತಿಳಿಸಿಕೊಟ್ಟಂತಾಗಿದೆ. ಪ್ರಾರಂಭದಲ್ಲಿ (ಶ್ಲೋಕ 5ರಲ್ಲಿ) **ಗಾಂಗೇಯಃ ತನುಭೂಭಾಗ್ಯಸದಸಿ ನ ಗೇಯಃ** ನಿನ್ನ ಮಗನಾದ ಭೀಷ್ಮನು ಪುತ್ರವಂತರ ಸಭೆಯಲ್ಲಿ ಶ್ಲಾಘ್ಯನಾಗಲಿಲ್ಲ ಎಂದು ಹೇಳುವ ನೆಪದಲ್ಲಿ ಮಹಾಭಾರತದಲ್ಲಿ ಬಂದ ಭೀಷ್ಮನ ಆದಿ ಮತ್ತು ಮಧ್ಯವಯಸ್ಸಿನ ಮಹಿಮೆಗಳೆರಡನ್ನು ಇಲ್ಲಿ ಉಲ್ಲೇಖಿಸುತ್ತಾರೆ.

೧. ಗಂಗೆಯ ಪುತ್ರನಾಗಿ ಭೀಷ್ಮ ಅವತರಿಸಿದ್ದು ಒಂದು. ಇದನ್ನು **ಗಾಂಗೇಯ** ಎಂಬ ಶಬ್ದದಿಂದ ಸೂಚಿಸುತ್ತಾರೆ.

೨. ಪುತ್ರವಂತರ ಸಭೆಯಲ್ಲಿ ಶ್ಲಾಘ್ಯನಾಗಲಿಲ್ಲ (**ತನುಭೂಭಾಗ್ಯಸದಸಿ ನ ಗೇಯಃ**) ಎಂದು ಹೇಳುವುದರಿಂದ ಅದಕ್ಕೆ ಹಿನ್ನೆಲೆಯಾದ; ತಂದೆಗಾಗಿ ಭೀಷ್ಮನು ಮಾಡಿದ ತ್ಯಾಗ, ಅವನ ದೀರ್ಘ ಬ್ರಹ್ಮಚರ್ಯದ ಹಿರಿಮೆಯನ್ನು ವ್ಯಾಜಸ್ತುತಿಯ ಮುಖಾಂತರ ಕೊಡುತ್ತಾರೆ. ಇನ್ನೂ ಇದರೊಳಗೆ ಸೂಕ್ಷ್ಮವಾಗಿ ಪ್ರವೇಶಿಸಿದರೆ; ಭೀಷ್ಮನ ಅವತಾರದ ಮತ್ತು ಅವನು ಊರ್ಧ್ವರೇತಸ್ಕನಾಗಲು ಅವನ ಹಿಂದಿನ ಅದಾವ ಕರ್ಮಗಳು ಕಾರಣವಾಗಿದ್ದವೂ ಎನ್ನುವುದನ್ನೂ ನಾವು ಅರಿಯಬಹುದಾಗಿದೆ. ಗಂಗೆಯ ಪುತ್ರನಾದ ಭೀಷ್ಮನ ಮಾಹಿತಿಯನ್ನು ಇನ್ನೂ ಮುಂದುವರೆಸಿ ಭೀಷ್ಮನು ಶ್ರೀಕೃಷ್ಣ ಪರಮಾತ್ಮನಿಗೆ ಅಸ್ತ್ರ ಎಸೆದ ಪ್ರಸಂಗವನ್ನು 24ನೇ ಶ್ಲೋಕದಲ್ಲಿ ನೆನಪಿಸುತ್ತಾರೆ.

ಹೀಗೆ ಈ ಗಂಗಾಲಹರಿಯಲ್ಲಿ ಶ್ರೀಭೀಷ್ಮಾಚಾರ್ಯರ ಜೀವನಗಾಥೆ ಪ್ರಾಯಶಃ ಪೂರ್ತಿ ಬಂದಂತಾಗಿದೆ. ಅವರ ಆದಿಕಥೆ–ಅವತಾರ, ಮಧ್ಯದ ಪ್ರಧಾನ ಕಥೆ – ಊರ್ಧ್ವರೇತಸ್ಕರಾದ್ದದ್ದು ಮತ್ತು ಅಂತ್ಯದ ಕಥೆ – ಶ್ರೀಕೃಷ್ಣನಿಗೆ ಅಸ್ತ್ರಪ್ರಹಾರಪ್ರಸಂಗವನ್ನು ವರ್ಣಿಸಿ ಅವರ ಚರಿತ್ರೆಯನ್ನು ಪ್ರಾಯಶಃ ಪೂರ್ತಿ ಹೇಳಿದಂತಾಯಿತು.

3. ಶಿವಪುತ್ರನಾದ, ಲಂಬೋದರನ ಅಣ್ಣನಾದ ಷಣ್ಮುಖನ ತಾಯಿಯಾದವಳು ಗಂಗೆ ಎನ್ನುವುದನ್ನು ಮತ್ತು ಅವನಿಗೆ ಆರು ಜನ ತಾಯಂದಿರೆಂದು ಹಾಗೂ ಅವನು ಬ್ರಹ್ಮಚರ್ಯದಲ್ಲಿ ಅದ್ವಿತೀಯನಾಗಿದ್ದನೆಂದೂ ಇತಿಹಾಸ–ಪುರಾಣೋಕ್ತ ಅವನ ಈ ಮೂರು ಹಿರಿಮೆಗಳನ್ನು ಶ್ಲೋಕ ಆರರಲ್ಲಿ ಸುಂದರವಾದ ವಿಶೇಷಣ ಪದಗಳಿಂದ (**ಸ್ಕಂಧಾಭಿತುಚಿ, ಷಾಣ್ಮಾಸುರ, ಕುಮಾರೆ ಅಲಕ್ಷ್ಯಲಲನೆ**) ವರ್ಣಿಸುತ್ತಾರೆ.

4. ಗಂಗೆಯನ್ನು ಸ್ತುತಿಸಲು ಹೊರಟ ಗಂಗಾಳ ಕಥೆಯನ್ನು ಅವಳು ಜನಿಸಿದ್ದು, ನಂತರ ಬ್ರಹ್ಮ ತನ್ನ ಕಮಂಡಲಿನಲ್ಲಿ ಶೇಖರಿಸಿದ್ದು, ರುದ್ರನ ಜಟಾಜೂಟದಲ್ಲಿ ಇವಳು ವಿರಾಜಮಾನಳಾದದ್ದು, ವರುಣನ ಮಡದಿಯಾದದ್ದು, ತ್ರಿಪಥಗಳಾದದ್ದು ಹೀಗೆ ಅವಳ ಕಥೆಯನ್ನು ಆ ಕಥೆಯನ್ನು ನೆನಪಿಸಿಕೊಡುವ ವಿಶೇಷಣಗಳಿಂದ (**ವಿಷ್ಣುವಿಲಸನ್ನಾಖಾಜ್ಞಾತೆ, ವಿಷ್ಣುನಖಜೆ, ಅಜಾತೆ, ಶಿವಲಸನ್ಮಸ್ತಕಮಣೆ, ಪ್ರಚೇತಶ್ಚೇತಸ್ಕೆ, ಅಬ್ಧಿರಮಣೆ, ತ್ರಿಪಥಗಾ, ಬಹುಮುಖಿ**) ತಿಳಿಸಿಕೊಡುತ್ತಾರೆ. **ಜಹ್ನುರಿತಿ ಕಿಂ?** (ಶ್ಲೋಕ 27) ಎಂಬ ಪ್ರಶ್ನೆಯ ಮುಖಾಂತರ ಜಾಹ್ನವೀಯಾದದ್ದನ್ನೂ ಉಲ್ಲೇಖಿಸುತ್ತಾರೆ.

5. ಕವಿಗಳು 17ನೇ ಶ್ಲೋಕದಲ್ಲಿ ರಾಮಾಯಣ, ಮಹಾಭಾರತ ಮತ್ತು ಪುರಾಣಗಳ ಕಥೆಗಳನ್ನು ಮೂರೇ ವಿಶೇಷಣಗಳಿಂದ ವಿವರಿಸುತ್ತಾರೆ. ಶ್ರೀಮಹರುದ್ರದೇವರು ಪುರಾಸುರನನ್ನು ಸಂಹಾರ ಮಾಡಿದ ಕಥೆಯನ್ನು, ಶ್ರೀಶಿವನು ಸಮುದ್ರರಾಜ ಶ್ರೀವರುಣದೇವನ ಜೊತೆ ಸೇರಿ ಮಿತ್ರತ್ವ ಬೆಳೆಸಿದ ಪ್ರಸಂಗವನ್ನು (ಯಜ್ಞ ಮಾಡಿದ ಪ್ರಸಂಗವನ್ನು) ಹಾಗೂ ಶ್ರೀರಾಮಚಂದ್ರದೇವರು ಸಮುದ್ರಕ್ಕೆ ಸೇತುವೆ ಕಟ್ಟಿದ ವಿಚಾರವನ್ನು (**ಪುರಾರಾತೇಃ ರಾತೇಃ ತ್ವದಧಿಪತಿಸೇತೋಃ**) ಈ

ಮೂರೇ ವಿಶೇಷಣಗಳಿಂದ ನೆನಪಿಸುತ್ತಾರೆ. ಹೀಗೆ ಒಂದೇ ಶ್ಲೋಕದಲ್ಲಿ ರಾಮಾಯಣ, ಮಹಾಭಾರತ ಮತ್ತು ಪುರಾಣೋಕ್ತ ಕಥೆಗಳನ್ನು ಮೂರೇ ವಿಶೇಷಣಗಳಲ್ಲಿ ನೆನಪಿಸುವಂತೆ ಶ್ಲೋಕವನ್ನು ರಚನೆ ಮಾಡಿದ್ದು ನಿಜಕ್ಕೂ ಶ್ಲಾಘನೀಯ, ಸಾಷ್ಟಾಂಗ ವಂದನೀಯ ಕೂಡ.

6. ಭಾಗವತ-ಭಾರತಗಳಲ್ಲಿ ಬಂದ ದಧೀಚಿ ಋಷಿಗಳು ತಮ್ಮ ಅಸ್ತಿಯನ್ನು ಶ್ರೀಮಹೇಂದ್ರನಿಗೆ ಕೊಟ್ಟ ಪ್ರಸಂಗವನ್ನು ಮತ್ತು ವಜ್ರಾಯುಧದ ಸಾಮರ್ಥ್ಯವನ್ನು ಬಣ್ಣಿಸುತ್ತ ವಜ್ರಾಯುಧಕ್ಕಿಂತಲೂ ಗಂಗಾನೀರು ಪರಮವೆಂಬುದನ್ನು ಸಮರ್ಥಿಸುವ ನೆಪದಲ್ಲಿ ಆ ಕಥೆಯನ್ನು (ಶ್ಲೋಕ 23) ವಿವರಿಸುತಾರೆ.

7. ಶ್ಲೋಕ 22ರಲ್ಲಿ ಭಾಗವತದ ಸುಮದ್ರಮಥನದ ಕಥೆಯನ್ನು ಅಲ್ಲಾದ ಭಗವಂತನ ಅವತಾರಗಳನ್ನು ಹೇಳಿ; ಅಮೃತಕ್ಕಿಂತ ಹಿರಿದಾದದ್ದು ಈ ಗಂಗಾಜಲವೆಂದು ಸಮರ್ಥಿಸುತ್ತಾರೆ. ಈ ನೆಪದಲ್ಲಿ ಭಗವಂತನ ಅವತಾರಗಳನ್ನು ನೆನಪಿಸುತ್ತಾರೆ.

ಹೀಗೆ ಈ ಲಹರೀ ಇತಿಹಾಸ-ಪುರಾಣಗಳ ಕಥಾಸಂಗಮವಾಗಿದೆ.

5. ಶ್ರೀವಾಯುವೈಭವ

ಶ್ರೀವಾಯುದೇವರು ಜೀವೋತ್ತಮರು. ಅನಂತ ವೇದಗಳಿಂದ ಪ್ರತಿಪಾದ್ಯರು **(ರಮಾವ್ಯತಿರಿಕ್ತ, ಪೂರ್ವಪ್ರಸಿದ್ಧವ್ಯತಿರಿಕ್ತ ಅನಂತವೇದ ಪ್ರತಿಪಾದ್ಯತಮ ಪ್ರಾ. ಗದ್ಯ.)** ಅನಂತ ಜೀವನಿಯಾಮಕರು. ಸಕಲಸಚ್ಛಾಸ್ತ್ರ ಕರ್ತೃಗಳು. ಸಕಲದುರ್ಮತಭಂಜಕರು. ಅನಾದಿಕಾಲದಿಂದಲೂ ಇದ್ದ ಶ್ರೀಮದ್ವೈಷ್ಣವ ಸಿದ್ಧಾಂತದ ಪ್ರತಿಷ್ಠಾಪಕರು. ಇವರು ಭಗವಂತನ ಸೇವೆಗಾಗಿ ತಾಳುವ ರೂಪಗಳು ಅನಂತ. ಮಾಡುವ ಕಾರ್ಯಗಳೂ ಅನಂತ. ಹೀಗಿದ್ದೂ ದಾಖಲಾದ, ಮಹರ್ಷಿಗಳಿಗೆ ಯಾವತ್ತೂ ಕಾಣುತ್ತಲೇ ಇರುವ ರೂಪಗಳು; ಮೂರುಕೋಟಿ ಮಾತ್ರ!

ಶ್ರೀವಾಯುದೇವರಿಂದಲೇ ಮೋಕ್ಷ ಇದು ವೇದವಾಣಿ. ನಮ್ಮನ್ನು ದೇವನೆಡೆಗೆ ಕರೆದುಕೊಂಡು ಹೋಗುವವರು ಶ್ರೀವಾಯುದೇವರೆ. ಈ ವಿಷಯವನ್ನೇ ಶ್ರೀಸತ್ಯಧರ್ಮತೀರ್ಥ ಶ್ರೀಪಾದಂಗಳವರು ತಮ್ಮಯ ಗಂಗಾಲಹರೀಯ ಎರಡನೇ ಶ್ಲೋಕದಲ್ಲಿ ಸುಂದರವಾಗಿ ವಿವರಿಸಿದ್ದನ್ನು ಹಿಂದೆ ನೋಡಿದ್ದೇವೆ. ಶ್ರೀಸತ್ಯಧರ್ಮತೀರ್ಥರ ಅಭಿಪ್ರಾಯಕ್ಕೆ ಗಂಗಾಲಹರೀಟೀಕಾಕಾರರು **"ಸ ಏನಾನ್ ಬ್ರಹ್ಮ ಗಮಯತಿ", ವಿದ್ಯುತ್ಪತಿರ್ವಾಯುರೇವ ನಯೇತ್ ಬ್ರಹ್ಮ ನ ಚಾಪರಃ", "ವೈದ್ಯುತೇನೈವ ತಚ್ಛ್ರುತೇಃ", "ವಿದ್ಯುತ್ಪತಿನಾ ವಾಯುನಾ ಏವ"** ಎಂದು ಶ್ರುತಿ-ಸ್ಮೃತಿ-ಸೂತ್ರಗಳನ್ನು ಉದಾಹರಿಸಿ ಶ್ರೀಸತ್ಯಧರ್ಮತೀರ್ಥರ ವಿಚಾರವನ್ನು ಸಮರ್ಥಿಸುತ್ತಾರೆ.

ಶ್ರೀಸತ್ಯಧರ್ಮತೀರ್ಥರ ಈ ಮಾತು (ಶ್ರೀಗಂಗಾದೇವಿಯ ಒಳಗಿದ್ದ ಶ್ರೀವಾಯುದೇವರ ಮಹತ್ವ) ಶ್ರೀವೇದವ್ಯಾಸರ ಮಾತನ್ನೇ ಅನುವಾದಿಸಿದಂತಿದೆ. ಶ್ರೀವ್ಯಾಸರು ತಮ್ಮಯ ಪುರಾಣದಲ್ಲಿ ಗಂಗೆಯ ಮಹತ್ವವನ್ನು ಬಣ್ಣಿಸುವಾಗ **"ತ್ವತ್ಸ್ಪರ್ಶವಾಯುನಾ ಪೂತಾ ಯಾಸ್ಯಂತಿ ಮಮ ಮಂದಿರಮ್ ॥", ..."ಗಂಗಾಯಾಃ ಸ್ಪರ್ಶವಾತೇನ ನಶ್ಯತೀತಿ ಶ್ರುತೌ ಶ್ರುತಮ್ ॥"** ಎಂದೇ ಹೇಳಿದ್ದಾರೆ.

ಈ ಶ್ಲೋಕಗಳು ಶ್ರೀಗಂಗಾಮಾತೆಯನ್ನು ಸ್ಪರ್ಶಿಸಿದ ಗಾಳಿಯ ಮಹತ್ವವನ್ನೂ ವರ್ಣಿಸುತ್ತಿವೆ. ಅದು ಸಾಮಾನ್ಯ ಅರ್ಥ.

ಅಲ್ಲಗಳೆಯಲಾಗದ ಈ ಸಾಮಾನ್ಯ ಅರ್ಥಕ್ಕಿಂತ ಶ್ರೀವ್ಯಾಸರ ಸೂಚನೆಯ ವಿಶೇಷಾರ್ಥವನ್ನು ಇಲ್ಲಿ ತಿಳಿಯುವುದೇ ಜಾಣತನ. **"ತ್ವತ್ಸ್ಪರ್ಶವಾಯುನಾ"** ಎಂದರೆ ನಿನ್ನನ್ನು ಅಂತರ್ಯಾಮಿತ್ವೇನ ಸ್ಪರ್ಶಿಸಿದ ಶ್ರೀವಾಯುವಿನಿಂದ ಎಂಬ ವಿಶೇಷಾರ್ಥವನ್ನು ಮಾಡುವುದು ಹೆಚ್ಚು ಉಚಿತ. ಸ್ಪರ್ಶ ಎಂಬ ಶಬ್ದಕ್ಕೆ ಗೂಢಚರ ಎಂಬರ್ಥವೂ ಕೋಶಗಳಲ್ಲಿ ಪ್ರಸಿದ್ಧವಾಗಿದೆ. ಅಂತರ್ಯಾಮಿಯು ಗೂಢನಾಗಿಯೇ ಇರುತ್ತಾನೆ ಹೊರತು ದೃಷ್ಟನಾಗಿ ಕಾಣುವುದಿಲ್ಲ. ಹೀಗಾಗಿ ನಿನ್ನ ಅಂತರ್ಯಾಮಿಯಾದ ಶ್ರೀವಾಯುವಿನಿಂದ ಸಗರಪುತ್ರರು ನನ್ನ ಮಂದಿರಕ್ಕೆ ಬರುತ್ತಾರೆಂದೇ ಭಗವಂತ ಗಂಗೆಗೆ ಹೇಳಿದ. ಅಲ್ಲದೇ ಈ ವಿಚಾರ ವೇದದಲ್ಲಿದೆ ಎನ್ನುವುದನ್ನೂ ಸೂಚಿಸಿದ. **(ಶ್ರುತೌ ಶ್ರುತಂ)** ಇದೇ ಸೂಚನೆ ಈ ಗಂಗಾಲಹರಿಯಲ್ಲಿದ್ದದ್ದು ವಿಶೇಷ.

ಮಹಾನುಭಾವರು ಈ ಶ್ಲೋಕವನ್ನು **'ಸ್ರಗ್ಧರಾ'**ವೃತ್ತದಲ್ಲಿಟ್ಟು ವೃತ್ತದಿಂದಲೂ ಶ್ರೀವಾಯುವೈಭವವನ್ನು ವಿವರಿಸಿದರು. ಹೇಗೆಂದರೆ;

ಕ್ಷೇಮೇಂದ್ರನು ತನ್ನ **ಸುವೃತ್ತತಿಲಕದಲ್ಲಿ ಸಾವೇಗಪವನಾದೀನಾಂ ವರ್ಣನೇ ಸ್ರಗ್ಧರಾ ಮತಾ** (3. 22) **ಸಾವೇಗಪವನಾದೀನಾಂ ಸೋದ್ಧಾಮಗತಿಕವಾತಾದೀನಾಂ, ವರ್ಣನೇ ಚಿತ್ರಣೇ, ಸ್ರಗ್ಧರೈತದಾಖ್ಯಂ ಛಂದಃ, ಮತಾ ಸಮುಚಿತಾ** (ಪ್ರಭಾ– ಟೀಕಾಕಾರ) ಪ್ರಬಲವಾದ ವಾಯುವಿನ ವರ್ಣನ ಸಂದರ್ಭದಲ್ಲಿ ಸ್ರಗ್ಧರಾವೃತ್ತದ ಬಳಕೆಯು ಉಚಿತವೆಂದಿದ್ದಾನೆ.

ಈ ಶ್ಲೋಕದಲ್ಲಿ ಕವಿರಾಜರು ಮಾಡಿದ ಕಾರ್ಯವು ಇದೇ ಆದ್ದರಿಂದ ಬೇರೆ ವೃತ್ತಗಳನ್ನು ಆರಿಸಿಕೊಳ್ಳದೇ ಛಂದಶಾಸ್ತ್ರ ಬಯಸುವ ಈ ವೃತ್ತದಿಂದಲೇ ಶ್ರೀವಾಯುವರ್ಣನವನ್ನು ಮಾಡಿದ್ದು ಬಹಳ ವಿಶೇಷವೆನಿಸುತ್ತದೆ.

ಇನ್ನೊಂದು ರೀತಿಯಲ್ಲಿ ತಿಳಿಯುವುದಾದರೆ; ಸಂಸ್ಕೃತದಲ್ಲಿ ಸ್ರಗ್ಧರವೆಂದರೆ; 'ಮಾಲೆಯನ್ನು ಧರಿಸಿದವನು' ಎಂದರ್ಥ. ಶ್ರೀವಾಯುದೇವರ ಶ್ರೀಹನುಮಾವತಾರದ ವೈಭವವನ್ನು ಹೇಳುವ ಹೆಸರಿದು. ಜೀವೋತ್ತಮರೆಂದು ಸಿದ್ಧವಾದ ಪ್ರಸಂಗವಿದು.

ಶ್ರೀರಾಮಸೀತೆಯರಿಗೆ ಗರಿಷ್ಠಪ್ರೀತಿ ಶ್ರೀವಾಯುದೇವರಲ್ಲೇ. ಹೀಗಾಗಿ ತಮ್ಮ ಆ ಉತ್ಕೃಷ್ಟಪ್ರೀತಿಯನ್ನು ಒಂದು ಮಾಲೆಯ ಮುಖಾಂತರ ಶ್ರೀಹನುಮಂತನಿಗೆ ಸಮರ್ಪಿಸಿ, ಅದರಿಂದ ಸಾಧನೆಯಲ್ಲಿ ಇವರೇ ವರಿಷ್ಠರು ಹೀಗಾಗಿ ನಮ್ಮ ಪೂರ್ಣಾಶೀರ್ವಾದ ಇವರಿಗೇ ಮೀಸಲು ಎನ್ನುವುದನ್ನು ಪ್ರಕಟಿಸಿದರು. ಈ ಘಟನೆ ಶ್ರೀವಾಲ್ಮೀಕಿ ರಾಮಾಯಣ, ಶ್ರೀಸುಮಧ್ವವಿಜಯಾದಿಗಳಲ್ಲಿ ಸುಪ್ರಸಿದ್ಧಿಯಾಗಿದೆ.

ಶ್ರೀರಾಮಸೀತೆಯರ ಈ ಕರುಣೆಯ ಮಾಲೆಯನ್ನು ಧರಿಸಿ ತಾವೇ ಉತ್ತಮರೆಂದು ತೋರಿಸಿದ ಶ್ರೀಹನುಮಂತದೇವರು ಸ್ರಗ್ಧರರು. ಇವರ ಈ ಘಟನೆಯನ್ನು ನೆನಪಿಸಿಕೊಡಲೆಂದೆನೋ ಎಂಬಂತೆ ಈ ಹೆಸರನ್ನೇ ಇಟ್ಟುಕೊಂಡ ವೃತ್ತ; ಸ್ರಗ್ಧರಾವೃತ್ತ. ಈ ಸ್ರಗ್ಧರಾವೃತ್ತದಿಂದಲೇ ಶ್ರೀವಾಯುದೇವರ ವೈಭವವನ್ನು ಹೇಳಿ ಎರಡರಿಂದಲೂ (ಶ್ಲೋಕಾರ್ಥ ಮತ್ತು ವೃತ್ತದ ನಾಮದಿಂದಲೂ) ಶ್ರೀವಾಯುದೇವರ ವೈಭವವನ್ನು ವರ್ಣಿಸಿದರು ಈ ಮಹನೀಯರು. ಶ್ರೀಸತ್ಯಧರ್ಮಗುರುರಾಜರು ತಮ್ಮ ಈ ಶಾಸ್ತ್ರ ಕಾವ್ಯದಲ್ಲಿ ಈ ತೆರನಾಗಿ ಜೀವೋತ್ತಮರಾದ ಶ್ರೀವಾಯುದೇವರ ವೈಭವವನ್ನು ಮನೋಜ್ಞವಾಗಿ ನಿರೂಪಿಸಿದರು.

6. ಗಂಗಾಲಹರಿಯಲ್ಲಿ ನೀತಿಬೋಧನೆ

ಗಂಗಾದೇವಿಯ ಲಹರೀಯನ್ನು ಚಿತ್ರಿಸ ಹೊರಟ ಶ್ರೀಗುರುರಾಜರು ಅನೇಕ ನೀತಿಗಳನ್ನು ಸಾಧಕರಿಗೆ ತಿಳಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ;

೧. **ಬ್ರಾಹ್ಮಣಾಭಿಮಾನ** : ಕವಿಗಳಿಗೆ ತಾನು ಬ್ರಾಹ್ಮಣನೆಂಬ ಅಭಿಮಾನ ಅಪಾರ. ಬ್ರಾಹ್ಮಣ ತನ್ನ ಬ್ರಾಹ್ಮಣ್ಯದಿಂದ ಏನನ್ನು ಹೊಂದಲಾರ! ಎಲ್ಲವನ್ನೂ ಪಡೆಯುವ ಶಕ್ತಿ ಆ ಬ್ರಾಹ್ಮಣ್ಯದಲ್ಲಿದೆ. ಅಗಸ್ತ್ಯರ ಮಹಿಮೆಯನ್ನು 18ನೇ ಶ್ಲೋಕದಲ್ಲಿ ನೆನಪಿಸುತ್ತ ಕವಿಗಳು; **ನ ವಿಪ್ರೋ ವಿಪ್ರೋಽಹಂ** ಎಂದೆನ್ನುತ್ತ ತಮ್ಮ ಅಭಿಮಾನವನ್ನು ವ್ಯಕ್ತಪಡಿಸುತ್ತಾರೆ ಮತ್ತು ಬ್ರಾಹ್ಮಣ್ಯದ ಶಕ್ತಿಯನ್ನೂ ಪ್ರಶಂಸಿಸುತ್ತಾರೆ. ಒಂದರ್ಥದಲ್ಲಿ ನಮಗೂ ಈ ಅಭಿಮಾನ ಯಾವತ್ತೂ ಇರಬೇಕೆಂಬ ನೀತಿಯನ್ನು ತಿಳಿಸುತ್ತಾರೆ. ನಾವೂ ನಿಜವಾಗಿ ಬ್ರಾಹ್ಮಣ್ಯವನ್ನು ಉಳಿಸಿಕೊಂಡಿದ್ದೇ ಆದರೆ; ನಾವೂ ಏನೆಲ್ಲ ಸಾಧನೆಯನ್ನು ಮಾಡಬಹುದು. ಹಾಗೇ ಸಾಧನೆಯನ್ನು ಮಾಡಿ ದೇಶ, ಸಮಾಜದೊಂದಿಗೆ ಆತ್ಮವನ್ನೂ ಪ್ರಗತಿಪಥದತ್ತ ನಡೆಸಬಹುದು ಎಂದು ನಮಗೆ ತಿಳಿಹೇಳುತ್ತಾರೆ.

ವಿಷಾದದ ಸಂಗತಿಯೆಂದರೆ; ಪ್ರಾಯಶಃ ಇಂದಿನ ವಿಪ್ರರಾದ ನಮಗೆ ನಮ್ಮಯ ಹುಟ್ಟಿನ ಬಗ್ಗೆ ಅಭಿಮಾನವಿಲ್ಲ. ನಮ್ಮಲ್ಲಿ ಸುಪ್ತವಾಗಿದ್ದ ಶಕ್ತಿಯ ಅರಿವನ್ನು ಮರೆಯುತ್ತಿದ್ದೇವೆ.

ನಮ್ಮ ವಿಹಿತ ಧರ್ಮದಲ್ಲಿ ನಮಗೆ ಆಸಕ್ತಿಯಿಲ್ಲ. ನಮ್ಮ ಸಂಸ್ಕಾರಗಳು ನಮಗೆ ಗೊತ್ತಿಲ್ಲ. ಅವುಗಳನ್ನು ತಿಳಿಯಬೇಕೆಂಬ ಆಸೆಯೂ ಇಲ್ಲ. ಶುದ್ಧಾಹಾರ ಸೇವನೆ, ಏಕಾದಶಿ ಉಪವಾಸ, ತಪ್ಪದೆ ಗಾಯತ್ರಿ ಜಪ, ಸಾಧ್ಯವಿದ್ದಷ್ಟು ಪಾಠಪ್ರವಚನ, ದಾನ–ಧರ್ಮಗಳು ಇಂದು ನಮಗೆ ಬೇಕಿಲ್ಲ. ಭುಂಜಿಸಲು ಕೇವಲ ಆಹಾರವಾದರೆ ಸಾಕು. ಭೋಗಿಸಲು ವಸ್ತುವಾದರೆ ಸಾಕು. ಅಂತರ್ಜಾತೀಯ, ಅಂತರ್ಧರ್ಮಿಯ ವಿಚಾರಗಳ ಅರಿವು ಬೇಕೇ ಆಗಿಲ್ಲ. ಇಂಥವರೊಂದಿಗೆ ನಾನಾವಿಧ ಸಂಬಂಧಗಳಲ್ಲೇ ಆಸಕ್ತಿ ತೋರಿಸಿ ಕಲಿತನವನ್ನು ಬೆಳೆಸುತ್ತಿದ್ದೇವೆ!

2. ಅನುಸಂಧಾನ : ಸ್ವವಿಹಿತ ಕರ್ಮಗಳನ್ನು ಮಾಡುವುದೆಷ್ಟು ಅವಶ್ಯವೋ; ಅವುಗಳಲ್ಲಿ ಅನುಸಂಧಾನವನ್ನು ಹೊಂದುವದೂ ಅಷ್ಟೇ ಅನಿವಾರ್ಯ. ಶ್ಲೋಕ 12ರಲ್ಲಿ ಗಂಗೆಯ ಮಹತ್ವವನ್ನು ತಿಳಿಯದೇ ಅವಳಲ್ಲಿ ಸ್ನಾನವನ್ನು ಮಾಡುವುದು ಅದು **ಆನೆಯ ಸ್ನಾನದಂತೆ** ಎಂದು ಹೇಳುತ್ತ ನಮಗೆ ಸ್ನಾನಾನುಸಂಧಾನವನ್ನು ತಿಳಿಸುತ್ತಾರೆ. ಜೊತೆಗೆ ಎಲ್ಲ ಕರ್ಮಗಳೂ ಅನುಸಂಧಾನಯುಕ್ತ ಕರ್ಮಗಳಾಗಲೆಂದು ಸೂಚಿಸುತ್ತಾರೆ.

3. ಪ್ರಾತಸ್ನಾನ : ಯಾವುದೋ ಸಮಯದಲ್ಲಿ ಸ್ನಾನ ಮಾಡಿದರಾಯಿತು. ಸ್ನಾನಕ್ಕೇನು ಸಮಯ? ಎಂದು ಪ್ರಶ್ನೆ ಕೇಳುವವರಿದ್ದಾರೆ! ಕೆಲವರಂತೂ ತಮ್ಮಯ ಅವಸರದ ಬೆಳಗಿನ ಸಮಯದಲ್ಲಿ ಸ್ನಾನವನ್ನೂ ಮಾಡದೇ ಗಂಡ, ಮಕ್ಕಳಿಗೆ ಅಡುಗೆಯನ್ನು ಮಾಡಿ ಊಟಕ್ಕೆ ಹಾಕಿ, ಡಬ್ಬಿ ಕಟ್ಟಿ ಅವರನ್ನು ಶಾಲೆ–ಆಫಿಸುಗಳಿಗೆ ಕಳಿಸಿ, ನಂತರ ಸ್ನಾನ ಮಾಡುವವರೂ ಇದ್ದಾರೆ! ಇವರಿಗೆ ನೀತಿಬೋಧೆಯನ್ನು ಶ್ರೀಸತ್ಯಧರ್ಮಗುರುರಾಜರು ತಮ್ಮ ಲಹರೀಯ 19ನೇ ಶ್ಲೋಕದಲ್ಲಿ ಸ್ನಾನವೂ ಒಂದು ಸಾಧನೆಯ ಕರ್ಮ. ಸ್ನಾನವನ್ನು; ಸ್ನಾನ ಮಾಡುವ ಸಮಯದಲ್ಲೇ ಮಾಡಬೇಕು. ಆ ಸಮಯ ಯಾವುದು ಎಂದರೆ; **ತತ್ಪಿತೃಕರಾವಿಲೋಕೇ ಲೋಕೇ ಮಜ್ಜತಿ..** । (ಗಂಗಾಲಹರೀ) **ಸೋರ್ಯೋದಯಾತ್ ಪ್ರಾಗೇವ ತ್ವಯಿ ಮಜ್ಜನೇನ ಸುಕೃತವಿಶೇಷ ಇತಿ ಭಾವಃ**। (ಗಂಗಾಲಹರೀ ಟೀಕಾ) ಸೂರ್ಯೋದಯಕ್ಕಿಂತ ಮೊದಲು ಎನ್ನುತ್ತಾರೆ.

ಎಷ್ಟೇ ಅವಸರವಿದ್ದರೂ ಇನ್ನೂ ಹತ್ತು ನಿಮಿಷ ಮೊದಲೆದ್ದು ಸ್ನಾನ ಮಾಡಿಯೇ ನಮ್ಮಯ ಕರ್ಮಗಳನ್ನು ಪ್ರಾರಂಭಿಸಿದರೆ ವಿಶೇಷಸಿದ್ಧಿಯೆನ್ನುತ್ತಾರೆ. ಈ ಸಂದರ್ಭದಲ್ಲೂ ಅನುಸಂಧಾನ ಮಾತ್ರ ಅನಿವಾರ್ಯವೆಂಬುದನ್ನು ಮರೆಯುವಂತಿಲ್ಲ.

4. ಶ್ರೀಸುಧಾಭಾಯಾ : ಪ್ರಪಂಚದ ಮೇರುಕೃತಿ ಶ್ರೀಮನ್ನ್ಯಾಯಸುಧಾ. ಇದರ ರಚನಾಕಾರರು ಸರ್ವಜ್ಞಕಲ್ಪ ಶ್ರೀಜಯತೀರ್ಥವರ್ಯರು. ಧರೆಯಲ್ಲಿ ಶ್ರೀಮನ್ಮಧ್ವಸಿದ್ಧಾಂತದ ವಿಜಯ ಸ್ತಂಭವನ್ನು ಸ್ಥಾಪಿಸಿದವರು. ಸರ್ವಮೂಲಗ್ರಂಥಗಳಿಗೆ ಟೀಕೆಗಳನ್ನು ರಚಿಸಿ ಶ್ರೀಮಟ್ಟೀಕಾಕಾರರೆಂದೇ ಎಲ್ಲರಿಂದ ಪರಿಚಿತರು. ಇವರಿಂದ

ತಾರ್ಕಿಕಾದಿ ದರ್ಶನಗಳು ತನ್ನ ಅಸ್ತಿತ್ವವನ್ನೇ ಕಳೆದುಕೊಂವು. ಈ ಮಹನೀಯರು ನೋಡದ ಸ್ವಕೀಯ-ಪರಕೀಯ ಗ್ರಂಥಗಳಿಲ್ಲ. ಇವರು ಎತ್ತಾಗಿ ಸಾಕ್ಷಾತ್ ಶ್ರೀಮದಾಚಾರ್ಯರ ಶಿಷ್ಯರು. ಯತಿಯಾಗಿ ಶ್ರೀಮದಾಚಾರ್ಯರ ಪ್ರಶಿಷ್ಯರು. ದೇವಲೋಕದ ದೇವೇಂದ್ರ ಬೇರೆ! ಇಂಥ ವಿಶಿಷ್ಟ ಮಹನೀಯರು ರಚಿಸಿದ ವಿಶಿಷ್ಟ ಗ್ರಂಥ ಶ್ರೀಮನ್ನ್ಯಾಯಸುಧಾ. ಶ್ರೀಪಾದರಾಜಾದಿ ಹಿರಿಯ ಹಿರಿಯ ಮಾನ್ಯರಿಂದ ಪ್ರಶಂಸಿತ ಗ್ರಂಥ ಶ್ರೀಮನ್ನ್ಯಾಯಸುಧಾ. ಮುಂದಿನ ಮಾಧ್ವಮಹನೀಯರೆಲ್ಲರೂ ಇವರ ಗ್ರಂಥಗಳ ಛಾಯೆಯಲ್ಲೇ ಬಾಳಿದವರು. ಇವರ ಗ್ರಂಥಗಳಿಗೆ ವ್ಯಾಖ್ಯಾನ ಬರೆಯುವುದರಲ್ಲೇ ಬದುಕಿನ ಧನ್ಯತೆಯನ್ನು ಕಂಡವರು. ಅದು ಘಟ್ಟದ ಮೇಲಿನವರಾಗಲಿ, ಘಟ್ಟದ ಕೆಳಗಿನವರಾಗಲಿ. ಎಲ್ಲರೂ ಶ್ರೀಮನ್ನ್ಯಾಯಸುಧಾದ ಛತ್ರಛಾಯೆಲ್ಲಿದ್ದವರೆ.

ಆಚಾರ್ಯ ಬನ್ನಂಜೆ ಗೋವಿಂದರು; ಅಭಿನವ ಆನಂದತೀರ್ಥರೆಂದೇ ಪ್ರಸಿದ್ಧರಾದ ಶ್ರೀ1008ಶ್ರೀಮತ್ಸಧ್ಯಾನತೀರ್ಥಶ್ರೀಪಾದರ ಶಿಷ್ಯರಾದ, ತಮ್ಮ ವಿದ್ಯಾಗುರುಗಳಾದ ಪರಮಪೂಜ್ಯ **ಶ್ರೀ1008ಶ್ರೀವಿದ್ಯಾಮಾನ್ಯತೀರ್ಥರ** ಪೀಠಾರೋಹಣದ ಅಮೃತ ಮಹೋತ್ಸವದ ಅಭಿವಂದನ ಗ್ರಂಥ **"ತಾಪಸ"** (16.4.2000) ದಲ್ಲಿ ತಮ್ಮ ಲೇಖನದಲ್ಲಿ (ಪುಟ 6-20) ಫಲಿಮಾರು ಮಠದ ಯಾವ ಯಾವ ಯತಿಗಳು ಶ್ರೀಮನ್ನ್ಯಾಯಸುಧಾ ಗ್ರಂಥವನ್ನು ಎಷ್ಟೆಷ್ಟು ಬಾರಿ ಪಾಠಹೇಳಿ ಮಂಗಳ ಮಾಡಿದ್ದಾರೆಂದು ದಾಖಲಿಸುತ್ತಾರೆ.

1. **ಶ್ರೀವಿದ್ಯಾಮೂರ್ತಿತೀರ್ಥರು.** ಸದರಿ ಲೇಖಕರ ಪ್ರಕಾರ ಇವರು **ಶ್ರೀಮಜ್ಜಯತೀರ್ಥರ ಸಮಕಾಲೀನರು.** ಇವರು "ಶ್ರೀಟೀಕಾಕಾರರನ್ನು ಭೇಟಿಯಾಗಿರಲೇಬೇಕು ಮತ್ತು ಮತ ಪ್ರಸಾರಕಾರ್ಯದಲ್ಲಿ ಇಬ್ಬರೂ ಜೊತೆಯಾಗಿ ಸಹಕರಿಸಿರುವ ಸಂಭವವುಂಟು. **ಇದರ ಸಂಕೇತವಾಗಿ ಎನ್ನುವಂತೆ ಮಳಖೇಡದಲ್ಲಿ ಇಬ್ಬರೂ ಜೊತೆಯಾಗಿಯೇ ವೃಂದಾವನದಲ್ಲಿ ಸನ್ನಿಹಿತರಾಗಿದ್ದಾರೆ"**. ಇವು ಈ ಲೇಖಕರ ವಾಕ್ಯಗಳು. ಘಟ್ಟದ ಕೆಳಗಿನ ಸ್ವಾಮಿಗಳೊಬ್ಬರು ಘಟ್ಟದ ಮೇಲಿನ ಸ್ವಾಮಿಗಳಿಗೆ ಅದಾವ ಕಾರಣಕ್ಕೆ ಹತ್ತಿರರಾದರು? ಅದಾವ ಕಾರಣಕ್ಕೇ ಒಂದೆಡೆ ವೃಂದಾವನ ಪ್ರವೇಶಮಾಡಿದರು? ಅದೂ ಶ್ರೀಜಯತೀರ್ಥರ ಮೂಲವೃಂದಾವನದ ಸ್ಥಳದಲ್ಲಿ! ಇದರಲ್ಲಿ ಶ್ರೀಜಯತೀರ್ಥರ ವ್ಯಕ್ತಿತ್ವ ಎಂಥದ್ದು! ಇದು ಸಾಮಾನ್ಯ ವಾಚಕರಿಗೂ ಸುಲಭಾರ್ಥ.

2. **ಶ್ರೀರಾಘವೇಂದ್ರತೀರ್ಥರು** – ಎಂಟು ಬಾರಿ
3. **ಶ್ರೀರಘುನಂದನತೀರ್ಥರು** – ಒಂಭತ್ತು ಬಾರಿ
4. **ಶ್ರೀರಘುಪತಿತೀರ್ಥರು** – ಆರು ಬಾರಿ
5. **ಶ್ರೀರಾಮಭದ್ರತೀರ್ಥರು** – ಹದಿನಾರು ಬಾರಿ

6. ಶ್ರೀರಘುಪ್ರವೀರತೀರ್ಥರು – ಹತ್ತಾರು ಬಾರಿ

7. **ಶ್ರೀವಿದ್ಯಾಮಾನ್ಯತೀರ್ಥರು.** ಇವರಂತೂ ಶ್ರೀಸತ್ಯಧ್ಯಾನತೀರ್ಥರಲ್ಲೇ ಶ್ರೀಸುಧಾ ಗ್ರಂಥವನ್ನು ಪಾಠ ಹೇಳಿಸಿಕೊಂಡವರೆಂದು ತಾವೇ ತಮ್ಮ **"ಮಾಯಾವಾದ ನಿರಾಸಾಖ್ಯಗ್ರಂಥಾನೇಕಾರ್ಥಮಾಲಿಕಾ"** ಎಂಬ ಗ್ರಂಥದಲ್ಲಿ **"ಪ್ರಾತಃಸಂಸ್ಮರಣೀಯೋ ಹಿ ಸತ್ಯಧ್ಯಾನಮುನೀಶ್ವರಃ । ಸುಧಾವ್ಯಾಸತ್ರಯಜ್ಞಾನೇ ಗುರುರ್ಮಮ ಮಹತ್ತಮಃ॥"** ಎಂದು ಹೇಳಿದ್ದಾರೆ. ಇವರೊಂದು ಸುಧಾಖಣಿ. ದ್ವೈತಮಣಿ. ಶ್ರೀವಿಶ್ವೇಶತೀರ್ಥರಂಥ ನೂರಾರು ವಿದ್ವನ್ಮಣಿಗಳನ್ನು ಜಗತ್ತಿಗೆ ನೀಡಿದ ದೇವಮಣಿ. ಇವರೂ **ಹದಿನೈದು** ಬಾರಿ ಶ್ರೀಮನ್ನ್ಯಾಯಸುಧಾಗ್ರಂಥದ ಮಂಗಲವನ್ನು ಮಾಡಿದ್ದಾರೆ. (ಆಧಾರ; **ಅಮೃತ, ಡಾ. ಕೊರ್ಲಹಳ್ಳಿ ವೆಂಕಟೇಶಾಚಾರ್ಯ**, 2001, ಪುಟ 205)

ನನಗೂ ಅಕ್ಷರಾಭ್ಯಾಸವನ್ನು ಮಾಡಿಸಿದವರು ಇವರೇ. ಅದಕ್ಕಾಗಿ ಇವರ ಪದತಲದಲ್ಲಿ ನನ್ನ ಮಸ್ತಕವನ್ನು ಮಣಿಸಿ, ಸಾಷ್ಟಾಂಗ ನಮಸ್ಕರಿಸುತ್ತೇನೆ.

ಇದು ಘಟ್ಟದ ಕೆಳಗಿನ **ಒಂದು ಮಠದಲ್ಲಿ** ಮೆರೆದ ಶ್ರೀಮಟ್ಟೀಕಾಕೃತ್ಪಾದರ ಶ್ರೀಮನ್ನ್ಯಾಯಸುಧಾವೈಭವ. ಇನ್ನು ಉಳಿದ ಏಳು ಮಠಗಳನ್ನು ಮತ್ತು ಶ್ರೀಉತ್ತರಾದಿ, ಶ್ರೀಶ್ರೀಪಾದರಾಜ, ಶ್ರೀಮಾಧವತೀರ್ಥ, ಶ್ರೀಕೂಡ್ಲಿಆರ್ಯ ಅಕ್ಷೋಭ್ಯತೀರ್ಥ, ಶ್ರೀವ್ಯಾಸರಾಜ, ಶ್ರೀರಾಘವೇಂದ್ರಮಠವೇ ಮೊದಲಾದ ಮಠಗಳ ಮಹನೀಯರನ್ನು ದಾಖಲಿಸಿದರೆ ಪುಟಗಳು ಸಾವಿರಾದಾವು!

ಪ್ರಸ್ತುತ ಕವಿಗಳು; ಶ್ರೀಮಟ್ಟೀಕಾಕಾರರ ಪರಂಪರೆಯನ್ನೇ ಬೆಳಗಿದವರು. ತಮ್ಮ ಆರಾಧ್ಯದೈವ ಶ್ರೀಮಟ್ಟೀಕಾಕಾರರ ನೆರಳಲ್ಲೇ ನಾನಿದ್ದೇನೆ ಎಂದು ತೋರಿಸಲೋಸುಗ ಮತ್ತು ವಿನಯಗುಣವನ್ನೂ ಪ್ರದರ್ಶಿಸುವ ಸಲುವಾಗಿ ಶ್ರೀಮಟ್ಟೀಕಾಕಾರರ ಶ್ರೀಮನ್ನ್ಯಾಸಯುಧಾದ ಮಾತನ್ನೇ ಅನುಸರಿಸಿ ನ **ವಾನುಪ್ರಾಸೋ ಯತ್ ಸುಪದಪದವೀ ನಾಪಿ ಚ ರಸೋ** ನ **ವಾಲಂಕಾರೋಽಸ್ಯಾಂ ಫಣಿತಿರಪಿ ಫಾಣಿತಸಮಾ** । ಎನ್ನುತ್ತಾರೆ.

ಶ್ರೀಸತ್ಯಧರ್ಮತೀರ್ಥ ಶ್ರೀಪಾದರು "ನಾನು ಶ್ರೀಮನ್ನ್ಯಾಯಸುಧಾವನ್ನೇ ನಂಬಿದ್ದೇನೆ. ನೀವು ಅದನ್ನೇ ನಂಬಿ. ಅವರು ಮಹಾಜ್ಞಾನಿಗಳಾಗಿ ವಿನಯವಂತರು. ನೀವು ತಕ್ಕಮಟ್ಟಿಗೆ ಜ್ಞಾನಿಗಳೇ ಆದರೆ, ನಿಮ್ಮಲ್ಲಿ ನನ್ನಂಥ ವಿನಯಗುಣವಿರಲಿ. ಉದ್ಧಟರಾಗದೇ ಬದುಕಿ" ಎಂದೆನ್ನುವುದನ್ನೇ ಶ್ರೀಸುಧಾನುಕರಣೀಯ ಶ್ಲೋಕರಚನೆಯ ಮತ್ತು ಎಲ್ಲ ಇದ್ದು ಏನೂ ಇಲ್ಲದಂತೆ ಅರ್ಥಬರುವ ಮಾತುಗಳ ಮುಖಾಂತರ ಕಲಿಸಿದ್ದಾರೆ.

ವಿದ್ಯೆಯಿಂದಲೋ, ಶ್ರೀಮಂತಿಕೆಯಿಂದಲೊ, ಯೌವನದದಿಂದಲೊ, ಮುಪ್ಪಿನಿಂದಲೋ, ಅಧಿಕಾರದಿಂದಲೋ ದುರಹಂಕಾರದಿಂದ ವರ್ತಿಸುವುದು ಸರಿಯಲ್ಲ. ಶ್ರೀಮಟ್ಟೀಕಾಕಾರರಿಂದ ದೂರವಿರುವುದು ಒಳಿತಲ್ಲ. ಯಾವ ಹಿರಿಯರ ಮನಸ್ಸಿಗೂ ನೋವಾಗದಂತೆ ನಮ್ಮ ನಡವಳಿಕೆ ಇರಬೇಕು.

ಹೀಗೆಯೇ ಈ ಶ್ರೀಗಂಗಾಲಹರೀಯಲ್ಲಿ–

ಕುಲವನ್ನು ಪ್ರಶಂಸಿಸಿ ಕುಲಾಭಿಮಾನ ವಿರಲೆಂಬ ನೀತಿಯನ್ನು,

ಶ್ರೀಷಣ್ಮುಖನನ್ನು ಸ್ಮರಿಸುವ ಸಂದರ್ಭದಲ್ಲಿ, ಅವನ ಬ್ರಹ್ಮಚರ್ಯವನ್ನು, ಅದರ ಮಹತ್ವವನ್ನು,

ಶ್ರೀಭೀಷ್ಮಾಚಾರ್ಯರನ್ನು ವ್ಯಾಜಸ್ತುತಿಯಿಂದ ಹೊಗಳುವಾಗ ಗ್ರಹಸ್ಥಧರ್ಮದ ವಿಶೇಷವಾಗಿ ಮಕ್ಕಳಾಗುವ ಅನಿವಾರ್ಯತೆಯನ್ನು, ಮಕ್ಕಳಾಗದಂತೆ ನೋಡಿಕೊಳ್ಳಬೇಡಿ ಎಂದೆಲ್ಲ ನಮಗೆ ನೀತಿಯನ್ನು ಕಲಿಸುತ್ತಾರೆ.

7. ಗಂಗೋತ್ತುಂಗ ಫಲ

ಶ್ರೀಗಂಗಾದೇವಿಯಿಂದ ಮಾನವನು ಉತ್ತುಂಗ ಫಲಗಳನ್ನು ಪಡೆಯುವ. ಕಲಿಯುಗದಲ್ಲಂತೂ ವಿಶೇಷ ಎಂದು ಶ್ರೀವ್ಯಾಸರು ತಮ್ಮಯ ಪುರಾಣಗಳಲ್ಲಿ, ಮಹಾಭಾರತದಲ್ಲಿ ತಿಳಿಸುತ್ತಾರೆ. ಶ್ರೀವ್ಯಾಸೋಕ್ತ ಆ ಲಾಭಗಳನ್ನು ತಮ್ಮಯ ಗಂಗಾಲಹರೀಯಲ್ಲಿ ಶ್ರೀಸತ್ಯಧರ್ಮತೀರ್ಥರು ಚೆನ್ನಾಗಿ ಪ್ರತಿಪಾದಿಸುತ್ತಾರೆ. ಕೆಲವೆಡೆ ವೈಧರ್ಮ್ಯದೃಷ್ಟಾಂತಾದಿಗಳನ್ನು ಬಳಸಿ ಸ್ತೋತ್ರಗೈದಿದ್ದಾರೆ. ಶ್ಲೋಕಾನುಸಾರ ಆ ಲಾಭಗಳು ಹೀಗಿವೆ–

ಮನಶ್ಶುದ್ಧಿ–ಮನದಲ್ಲಿ ದೇವನ ಸ್ಥಾಪನೆ, ಮಹಾಪಾತಕ ಪರ್ವತನಾಶ, ಮೋಕ್ಷಪ್ರಾಪ್ತಿ, ಸಂಸಾರ ಸಾಗರೋಲ್ಲಂಘನ, ಸಂತಾನಪ್ರಾಪ್ತಿ, ಇಂದ್ರಿಯನಿಗ್ರಹ, ಜ್ಯೋತಿಷ್ಟೋಮಾದಿ ಹೋಮಗಳ ಪುಣ್ಯಪ್ರಾಪ್ತಿ, ಜ್ಞಾನಬಾಧಕ ಪಾಪನಾಶ, ದುರಿತವಿನಾಶ ಮತ್ತು ವಿಷ್ಣ್ವರ್ಪಿತ ಪದಾರ್ಥಸೇವನಾಭಾಗ್ಯ, ಅಧಮಪರಾಭವದೂರ, ದ್ವಿಜತ್ವಪ್ರಾಪ್ತಿ ಮತ್ತು ವೇದಗಾಯನ ಲಾಭ, ಅನುಸಂಧಾನ ಪ್ರಾಪ್ತಿ, ಉತ್ತಮಸ್ಥಾನ, ಸಂಸಾರೋತ್ತರಣೋಪಾಯ, ಸದ್ಗುಣಪ್ರಪ್ತಿ, ಶಿವನಿಂದ ಉಪಾಸನಾವಿಧಾನಜ್ಞಾನಲಾಭ, (ಮೂಲ)ಸೀತಾರಾಮರನ್ನು ಜೊತೆಯಾಗಿಯೇ ಚಿಂತಿಸುವ ಯೋಗ, (ಶ್ರೀರಾಮನಿಂದ ನಿತ್ಯಾವಿಯೋಗಿನಿ ಶ್ರೀಸೀತೆಯನ್ನು ಬೇರ್ಪಡಿಸಿ ಚಿಂತಿಸಿದರೆ; ಸುರಾಣಕರಿಗಾದ ತಮಸ್ಸು ಆದೀತು!) ಬ್ರಾಹ್ಮಣ್ಯಲಾಭ, ಸಕಾಲಕರ್ಮಕರಣಜ್ಞಾನಸಾಮರ್ಥ್ಯಲಾಭ, ಸತ್ಕುಲಪ್ರಸೂನ ಯೋಗ, ಪರಮಾತ್ಮಪಾದಸ್ಪರ್ಶಪ್ರಾಪ್ತಿ, ಸರ್ವಾಯವ ಪಾಪನಾಶ,

ಅಪರಾಧ ಮತ್ತು ಅಪರಾಧಬುದ್ಧಿವಿನಾಶ, ಶ್ರೀಹರಿವಾಯುಮಹಿಮಾಜ್ಞಾನಪ್ರಾಪ್ತಿ ಮತ್ತು ಶ್ರೀಹರಿದಾಸ್ಯಪ್ರಾಪ್ತಿ, ದಾಂಪತ್ಯಸುಖಯೋಗ ಹಾಗೂ ಅದ್ವಿತೀಯ ಕವಿತ್ವಪ್ರಾಪ್ತಿ

ಇವು ಇಪ್ಪತ್ತೆಂಟು ಶ್ಲೋಕಗಳಲ್ಲಿ ಉಕ್ತವಾದ ಇಪ್ಪತ್ತೆಂಟಕ್ಕಿಂತ ಹೆಚ್ಚಾದ ಗಂಗೋತ್ತುಂಗ ಲಾಭಗಳು.

ಹೀಗೆ ಉತ್ತಮ ನೀತಿಬೋಧನೆಯೊಂದಿಗೆ ತುಂಬಿದ ಉತ್ತುಂಗ ಫಲತರಂಗ ಲಹರಿ ಈ ಗಂಗಾಲಹರೀ

ಇದು ನನ್ನ ಸಣ್ಣದೃಷ್ಟಿಯಲ್ಲಿ – ಅಲ್ಪಮತಿಯಲ್ಲಿ – ಮಿತಭಾಷೆಯಲ್ಲಿ ಗೋಚರಿಸಿದ ಶ್ರೀಗಂಗಾಲಹರೀ.

ವಿಮರ್ಶೆ ಹೆಚ್ಚಾದಂತೆ ಒಳ ಹೂರಣದ ಹರಿವಿನ ಅರಿವೂ ಹೆಚ್ಚುವುದರಲ್ಲಿ ಸಂದೇಹವಿಲ್ಲ! ಅದೆಲ್ಲ ಮುಂದಿನ ಮುದ್ರಣದಲ್ಲಿ ಮಹನೀಯರ ಆಶೀರ್ವಾದದಿಂದ ಕಾಣೋಣ ಎನ್ನುತ್ತ

ಇಂಥ ಕೃತಿ ನೀಡಿದ ಮಹನೀಯರಿಗೆ ಭಕ್ತಿಪೂರ್ವಕ ವಂದನೆಗಳನ್ನು ಸಲ್ಲಿಸುತ್ತ ಸ್ತೋತ್ರಗಳತ್ತ ಗಮನ ಹರಿಸೋಣ.

॥ ಇತಿ ಶ್ರೀಸತ್ಯಧರ್ಮತೀರ್ಥ ವಿರಚಿತಾ ಶ್ರೀಗಂಗಾಲಹರೀ ಸಮಾಪ್ತಾ ॥

॥ ಶ್ರೀಕೃಷ್ಣಾರ್ಪಣಮಸ್ತು ಶ್ರೀಮಧ್ವೇಶಾರ್ಪಣಮಸ್ತು ॥

ಶ್ರೀಗಂಗಾಸ್ತೋತ್ರಸಂಗ್ರಹ

ಮತ್ತು

ನಾಮಾವಳಿಗಳು

1. ಶ್ರೀವಿಷ್ಣೂಕ್ತ ಶ್ರೀಗಂಗಾಸ್ತೋತ್ರಂ

ಹರಿಃ ಓಂ ಶ್ರೀಬ್ರಹ್ಮೋವಾಚ–

ಶ್ರೋತುಮಿಚ್ಛಾಮಿ ದೇವೇಶ ಲಕ್ಷ್ಮೀಕಾಂತ ನಮಃ ಪ್ರಭೋ ।
ವಿಷ್ಣೋ ವಿಷ್ಣುಪದೀಸ್ತೋತ್ರಂ ಪಾಪಘ್ನಂ ಪುಣ್ಯಕಾರಕಮ್ ॥ 1 ॥

ಶ್ರೀನಾರಾಯಣ ಉವಾಚ –

ಶಿವಸಂಗೀತಸಂಮುಗ್ಧ ಶ್ರೀಕೃಷ್ಣಾಂಗದ್ರವೋದ್ಭವಾಮ್ ।
ರಾಧಾಂಗದ್ರವಸಂಭೂತಾಂ ತಾಂ ಗಂಗಾಂ ಪ್ರಣಮಾಮ್ಯಹಮ್ ॥ 2 ॥

ಯಾ ಜನ್ಮಸೃಷ್ಟೇರಾದೌ ಚ ಗೋಲೋಕೇ ರಾಸಮಂಡಲೇ ।
ಸನ್ನಿಧಾನೇ ಶಂಕರಸ್ಯ ತಾಂ ಗಂಗಾಂ ಪ್ರಣಮಾಮ್ಯಹಮ್ ॥ 3 ॥

ಗೋಪೈರ್ಗೋಪಿಭಿರಾಕೀರ್ಣೇ ಶುಭೇ ರಾಧಾಮಹೋತ್ಸವೇ ।
ಕಾರ್ತಿಕೀಪೂರ್ಣಿಮಾಜಾತಾಂ ತಾಂ ಗಂಗಾಂ ಪ್ರಣಮಾಮ್ಯಹಮ್ ॥ 4 ॥

ಕೋಟಿಯೋಜನವಿಸ್ತೀರ್ಣಾ ದೈರ್ಘ್ಯೇ ಲಕ್ಷಗುಣಾ ತತಃ ।
ಸಮಾವೃತಾ ಯಾ ಗೋಲೋಕಂ ತಾಂ ಗಂಗಾಂ ಪ್ರಣಮಾಮ್ಯಹಮ್॥ 5 ॥

ಷಷ್ಟಿಲಕ್ಷೈರ್ಯೋಜನೈರ್ಯಾ ತತೋ ದೈರ್ಘ್ಯೆ ಚತುರ್ಗುಣಾಃ ।
ಸಮಾವೃತಾ ಯಾ ವೈಕುಂಠಂ ತಾಂ ಗಂಗಾಂ ಪ್ರಣಮಾಮ್ಯಹಮ್ ॥ 6 ॥

ತ್ರಿಂಶಲ್ಲಕ್ಷೈರ್ಯೋಜನೈರ್ಯಾ ತತೋ ದೈರ್ಘ್ಯೆ ಚತುರ್ಗುಣಾಃ ।
ಸಮಾವೃತಾ ಬ್ರಹ್ಮಲೋಕಂ ತಾಂ ಗಂಗಾಂ ಪ್ರಣಮಾಮ್ಯಹಮ್ ॥ 7 ॥

ತ್ರಿಂಶಲ್ಲಕ್ಷೈರ್ಯೋಜನೈರ್ವಾ ದೈರ್ಘ್ಯೆ ಪಂಚಗುಣಾ ತತಃ ।
ಆವೃತಾ ಶಿವಲೋಕಂ ಯಾ ತಾಂ ಗಂಗಾಂ ಪ್ರಣಮಾಮ್ಯಹಮ್ ॥ 8 ॥

ಷಡ್ ಯೋಜನಸುವಿಸ್ತೀರ್ಣಾ ದೈರ್ಘ್ಯೆ ದಶಗುಣಾ ತತಃ ।
ಮಂದಾಕಿನೀ ಯೇಂದ್ರಲೋಕೇ ತಾಂ ಗಂಗಾಂ ಪ್ರಣಮಾಮ್ಯಹಮ್ ॥ 9 ॥

ಲಕ್ಷಯೋಜನವಿಸ್ತೀರ್ಣಾ ದೈರ್ಘ್ಯೆ ಸಪ್ತಗುಣಾ ತತಃ ।
ಆವೃತಾ ಧ್ರುವಲೋಕಂ ಯಾ ತಾಂ ಗಂಗಾಂ ಪ್ರಣಮಾಮ್ಯಹಮ್ ॥ 10 ॥

ಲಕ್ಷಯೋಜನವಿಸ್ತೀರ್ಣಾ ದೈರ್ಘ್ಯೆ ಷಡ್ಗುಣಿತಾ ತತಃ ।
ಆವೃತಾ ಚಂದ್ರಲೋಕಂ ಯಾ ತಾಂ ಗಂಗಾಂ ಪ್ರಣಮಾಮ್ಯಹಮ್ ॥ 11 ॥

ಯೋಜನೈ ಷಷ್ಟಿಸಾಹಸ್ರೈ ದೈರ್ಘ್ಯೆ ದಶಗುಣಾ ತತಃ ।
ಆವೃತಾ ಸೂರ್ಯಲೋಕಂ ಯಾ ತಾಂ ಗಂಗಾಂ ಪ್ರಣಮಾಮ್ಯಹಮ್ ॥ 12 ॥

ಲಕ್ಷಯೋಜನವಿಸ್ತೀರ್ಣಾ ದೈರ್ಘ್ಯೆ ಷಡ್ಗುಣಿತಾ ತತಃ ।
ಆವೃತಾ ಸತ್ಯಲೋಕಂ ಯಾ ತಾಂ ಗಂಗಾಂ ಪ್ರಣಮಾಮ್ಯಹಮ್ ॥ 13 ॥

ದಶಲಕ್ಷೈರ್ಯೋಜನೈರ್ವಾ ದೈರ್ಘ್ಯೆ ಪಂಚಗುಣಾ ತತಃ ।
ಆವೃತಾ ತಪೋಲೋಕಂ ಯಾ ತಾಂ ಗಂಗಾಂ ಪ್ರಣಮಾಮ್ಯಹಮ್ ॥ 14 ॥

ಸಹಸ್ರಯೋಜನಾ ಯಾ ಚ ದೈರ್ಘ್ಯೆ ಸಪ್ತಗುಣಾ ತತಃ ।
ಆವೃತಾ ಜನಲೋಕಂ ಯಾ ತಾಂ ಗಂಗಾಂ ಪ್ರಣಮಾಮ್ಯಹಮ್ ॥ 15 ॥

ಸಹಸ್ರಯೋಜನಾಯಾಮೇ ದೈರ್ಘ್ಯೆ ಸಪ್ತಗುಣಾ ತತಃ ।
ಆವೃತಾ ಯಾ ಚ ಕೈಲಾಸಂ ತಾಂ ಗಂಗಾಂ ಪ್ರಣಮಾಮ್ಯಹಮ್ ॥ 16 ॥

ಪಾತಾಲೇ ಯಾ ಭೋಗವತೀ ವಿಸ್ತೀರ್ಣಾ ದಶಯೋಜನಾ ।
ತತೋ ದಶಗುಣಾ ದೈರ್ಘ್ಯೆ ತಾಂ ಗಂಗಾಂ ಪ್ರಣಮಾಮ್ಯಹಮ್ ॥ 17 ॥

ಕ್ರೋಶೈಕಮಾತ್ರವಿಸ್ತೀರ್ಣಾ ತತಃ ಕ್ಷೀಣಾ ನ ಕುತ್ರಚಿತ್ ।
ಕ್ಷಿತೌ ಚಾಲಕನಂದಾ ಯಾ ತಾಂ ಗಂಗಾಂ ಪ್ರಣಮಾಮ್ಯಹಮ್ ॥ 18 ॥

ಸತ್ಯೇ ಯಾ ಕ್ಷೀರವರ್ಣಾ ಚ ತ್ರೇತಾಯಾಮಿಂದುಸನ್ನಿಭಾ ।
ದ್ವಾಪರೇ ಚಂದನಾಭಾ ಚ ತಾಂ ಗಂಗಾಂ ಪ್ರಣಮಾಮ್ಯಹಮ್ ॥ 19 ॥

ಜಲಪ್ರಭಾ ಕಲೌ ಯಾ ಚ ನಾನ್ಯತ್ರ ಪೃಥವೀತಲೇ ।
ಸ್ವರ್ಗೇ ಚ ನಿತ್ಯಂ ಕ್ಷೀರಾಭಾ ತಾಂ ಗಂಗಾಂ ಪ್ರಣಮಾಮ್ಯಹಮ್ ॥ 20 ॥

ಯಸ್ಯಾಃ ಪ್ರಭಾವ ಅತುಲಃ ಪುರಾಣೇ ಚ ಶ್ರುತೌ ಶ್ರುತಃ ।
ಯ ಪುಣ್ಯದಾ ಪಾಪಹರ್ತ್ರೀ ತಾಂ ಗಂಗಾಂ ಪ್ರಣಮಾಮ್ಯಹಮ್ ॥ 21 ॥

ಯತ್ತೋಯಕಣಿಕಾಸ್ಪರ್ಶಃ ಪಾಪಿನಾಂ ಚ ಪಿತಾಮಹ ।
ಬ್ರಹ್ಮಹತ್ಯಾದಿಕಂ ಪಾಪಂ ಕೋಟಿಜನ್ಮಾರ್ಜಿತಂ ದಹೇತ್ ॥ 22 ॥

ಇತ್ಯೇವಂ ಕಥಿತಂ ಬ್ರಹ್ಮನ್ ಗಂಗಾಪದ್ಯೈಕವಿಂಶತಿಮ್ ।
ಸ್ತೋತ್ರರೂಪಂ ಚ ಪರಮಂ ಪಾಪಘ್ನಂ ಪುಣ್ಯಬೀಜಕಮ್ ॥ 23 ॥
ನಿತ್ಯಂ ಯೋ ಹಿ ಪಠೇದ್ಭಕ್ತ್ಯಾ ಸಂಪೂಜ್ಯ ಚ ಸುರೇಶ್ವರೀಮ್ ।
ಅಶ್ವಮೇಧಫಲಂ ನಿತ್ಯಂ ಲಭತೇ ನಾತ್ರ ಸಂಶಯಃ ॥ 24 ॥

ಅಪುತ್ರೋ ಲಭತೇ ಪುತ್ರಂ ಭಾರ್ಯಾಹೀನೋ ಲಭೇತ್ಪ್ರಿಯಾಮ್ ।
ರೋಗಾನ್ಮುಚ್ಯತೇ ರೋಗೀ ಚ ಬದ್ಧೋ ಮುಚ್ಯೇತ್ ಬಂಧನಾತ್ ॥ 25 ॥

ಅಸ್ಪಷ್ಟಕೀರ್ತಿಃ ಸುಯಶಾ ಮೂರ್ಖೋ ಭವತಿ ಪಂಡಿತಃ ।
ಯಃ ಪಠೇತ್ಪ್ರಾತರುತ್ಥಾಯ ಗಂಗಾಸ್ತೋತ್ರಮಿದಂ ಶುಭಂ ॥ 26 ॥

ಶುಭಂ ಭವೇತ್ತು ದುಃಸ್ವಪ್ನಂ ಗಂಗಾಸ್ನಾನಫಲಂ ಭವೇತ್ ॥ 27 ॥

॥ ಇತಿ ಶ್ರೀಬ್ರಹ್ಮವೈವರ್ತಪುರಾಣೇ ಪ್ರಕೃತಿಖಂಡೇ ದಶಮೋಧ್ಯಾಯೇ ಶ್ರೀವಿಷ್ಣೂಕ್ತ ಗಂಗಾಸ್ತೋತ್ರಂ ಶ್ರೀಕೃಷ್ಣಾರ್ಪಣಮಸ್ತು ಶ್ರೀಮಧ್ವೇಶಾರ್ಪಣಮಸ್ತು ॥

2. ಶ್ರೀಈಶ್ವರೋಕ್ತ ಶ್ರೀಗಂಗಾಸ್ತೋತ್ರಂ

ಹರಿಃ ಓಂ ಶ್ರೀಈಶ್ವರ ಉವಾಚ–

ನಮಃ ಶಿವಾಯೈ ಗಂಗಾಯೈ ಶಿವದಾಯೈ ನಮೋ ನಮಃ ।
ನಮಸ್ತೇ ವಿಷ್ಣುರೂಪಿಣ್ಯೈ ಬ್ರಹ್ಮಮೂರ್ತ್ಯೈ ನಮೋಸ್ತುತೇ ॥ 1 ॥

ನಮಸ್ತೇ ರುದ್ರರೂಪಿಣ್ಯೈ ಶಾಂಕರ್ಯೈತೇ ನಮೋ ನಮಃ ।
ಸರ್ವದೇವಸ್ವರೂಪಿಣ್ಯೈ ನಮೋ ಭೇಷಜಮೂರ್ತಯೇ ॥ 2 ॥

ಸರ್ವಸ್ಯಸರ್ವವ್ಯಾಧೀನಾಂ ಭಿಷಕ್ಶ್ರೇಷ್ಠ್ಯೈ ನಮೋಸ್ತುತೇ ।
ಸ್ಥಾಣುಜಂಗಮಸಂಭೂತಾ ವಿಷಹಂತ್ರ್ಯೈ ನಮೋಸ್ತುತೇ ॥ 3 ॥

ಸಂಸಾರವಿಷನಾಶಿನ್ಯೈ ಜೀವನಾಯ್ಯೈ ನಮೋಸ್ತುತೇ ।
ತಾಪತ್ರಿತಯಸಂಹತ್ರ್ಯೈ ಪ್ರಾಣೇಶ್ಯೈತೇ ನಮೋ ನಮಃ ॥ 4 ॥

ಶಾಂತಿಸಂತಾನಕಾರಿಣ್ಯೈ ನಮಸ್ತೇ ಶುದ್ಧಮೂರ್ತಯೇ ।
ಸರ್ವಸಂಶುದ್ಧಿಕಾರಿಣ್ಯೈ ನಮಃ ಪಾಪಾರಿಮೂರ್ತಯೇ ॥ 5 ॥

ಭುಕ್ತಿಮುಕ್ತಿಪ್ರದಾಯಿನ್ಯೈ ಭದ್ರದಾಯ್ಯೈ ನಮೋ ನಮಃ ।
ಭೋಗೋಪಭೋಗದಾಯಿನ್ಯೈ ಭೋಗವತ್ಯೈ ನಮೋಸ್ತುತೇ ॥ 6 ॥

ಮಂದಾಕಿನ್ಯೈ ನಮಸ್ತೇಸ್ತು ಸ್ವರ್ಗದಾಯ್ಯೈ ನಮೋ ನಮಃ ।
ನಮಸ್ತ್ರೈಲೋಕ್ಯಭೂಪಾಯ್ಯೈ ತ್ರಿಪಥಾಯ್ಯೈ ನಮೋ ನಮಃ ॥ 7 ॥

ನಮಸ್ತ್ರಿಶುಕ್ಲಸಂಸ್ಥಾಯ್ಯೈ ಕ್ಷಮಾವತ್ಯೈ ನಮೋ ನಮಃ ।
ತ್ರಿಹುತಾಶನಸಂಸ್ಥಾಯ್ಯೈ ತೇಜೋವತ್ಯೈ ನಮೋ ನಮಃ ॥ 8 ॥

ನಂದಾಯ್ಯೈ ಲಿಂಗಧಾರಿಣ್ಯೈ ಸುಧಾಧರಾತ್ಮನೇ ನಮಃ ।
ನಮಸ್ತೇ ವಿಶ್ವಮುಖ್ಯಾಯ್ಯೈ ರೇವತ್ಯೈ ತೇ ನಮೋ ನಮಃ ॥ 9 ॥

ಬೃಹತ್ಯೈತೇ ನಮಸ್ತೇಸ್ತು ಲೋಕಧಾತ್ರ್ಯೈ ನಮೋಸ್ತುತೇ ।
ನಮಸ್ತೇ ವಿಶ್ವಮಿತ್ರಾಯ್ಯೈ ನಂದಿನ್ಯೈ ತೇ ನಮೋ ನಮಃ ॥ 10 ॥

ಪೃಥ್ವ್ಯೈ ಶಿವಾಮೃತಾಯ್ಯೈ ಚ ಸುವೃಷಾಯ್ಯೈ ನಮೋ ನಮಃ ।
ಪರಾಪರಶತಾಢ್ಯಾಯ್ಯೈ ತಾರಾಯ್ಯೈ ತೇ ನಮೋ ನಮಃ ॥ 11 ॥

ಪಾಶಜಾಲನಿಕೃಂತಿನ್ಯೈ ಅಭಿನ್ನಾಯ್ಯೈ ನಮೋಸ್ತುತೇ ।
ಶಾಂತಾಯ್ಯೈ ಚ ವರಿಷ್ಠಾಯ್ಯೈ ವರದಾಯ್ಯೈ ನಮೋ ನಮಃ ॥ 12 ॥

ಉಗ್ರಾಯ್ಯೈ ಸುಖಜಗ್ಧ್ಯೈ ಚ ಸಂಜೀವಿನ್ಯೈ ನಮೋಸ್ತುತೇ ।
ಬ್ರಹ್ಮಿಷ್ಠಾಯ್ಯೈ ಬ್ರಹ್ಮದಾಯ್ಯೈ ದುರಿತಘ್ನ್ಯೈ ನಮೋ ನಮಃ ॥ 13 ॥

ಪ್ರಣತಾರ್ತಿಪ್ರಭಂಜಿನ್ಯೈ ಜಗನ್ಮಾತ್ರೇ ನಮೋಸ್ತುತೇ ।
ಸರ್ವಾಪತ್ಪ್ರತಿಪಕ್ಷಾಯ್ಯೈ ಮಂಗಲಾಯ್ಯೈ ನಮೋ ನಮಃ ॥ 14 ॥

ಶರಣಾಗತದೀನಾರ್ತ ಪರಿತ್ರಾಣಪರಾಯಣೇ ।
ಸರ್ವಸ್ಯಾರ್ತಿಹರೇ ದೇವಿ ನಾರಾಯಣಿ ನಮೋಸ್ತುತೇ ॥ 15 ॥

ನಿರ್ಲೇಪಾಯ್ಯೈ ದುರ್ಗಹಂತ್ರ್ಯೈ ದಕ್ಷಾಯ್ಯೈತೇ ನಮೋ ನಮಃ ।
ಪರಾಪರಪರಾಯ್ಯೈ ಚ ಗಂಗೇ ನಿರ್ವಾಣದಾಯಿನಿ ॥ 16 ॥

ಗಂಗೇಮಮಾಗ್ರತೋ ಭೂಯಾಗಂಗೇಮೇತಿಷ್ಠಪೃಷ್ಠತಃ ।
ಗಂಗೇಮೇಪಾರ್ಶ್ವಯೋರೇಧಿಗಂಗೇತ್ವಯ್ಯಸ್ತುಮೇಸ್ಥಿತಿಃ ॥ 17 ॥

ಆದೌ ತ್ವಮಂತೇಮಧ್ಯೇ ಚ ಸರ್ವಂ ತ್ವಂ ಗಾಂಗತೇ ಶಿವೇ ।
ತ್ವಮೇವಮೂಲಪ್ರಕೃತಿಸ್ತ್ವಂ ಪುಮಾನ್ ಪರ ಏವ ಹಿ ॥ 18 ॥

ಗಂಗೇ ತ್ವಂ ಪರಮಾತ್ಮಾ ಚ ಶಿವಸ್ತುಭ್ಯಂ ನಮಃ ಶಿವೇ ।
ಯ ಇದಂ ಪಠತೇ ಸ್ತೋತ್ರಂ ಶ್ರುಣುಯಾಚ್ಛ್ರದ್ಧಯಾಪಿಯಃ ।
ದಶಧಾ ಮುಚ್ಯತೇ ಪಾಪೈಃ ಕಾಯವಾಕ್ಚಿತ್ತಸಂಭವೈಃ ॥ 19 ॥

ರೋಗಸ್ಥೋ ರೋಗತೋಮುಚ್ಯೇದ್ವಿಪದ್ಭ್ಯಶ್ಚವಿಪದ್ಯುತಃ ।
ಮುಚ್ಯತೇ ಬಂಧನಾದ್ಬದ್ಧೋ ಭೀತೋಭೀತೇಃ ಪ್ರಮುಚ್ಯತೇ ॥ 20 ॥

ಸರ್ವಾನ್ಕಾಮಾನವಾಪ್ನೋತಿ ಪ್ರೇತ್ಯಚತ್ರಿದಿವಂ ವ್ರಜೇತ್ ।
ದಿವ್ಯಂ ವಿಮಾನಮಾರುಹ್ಯ ದಿವ್ಯಸ್ತ್ರಪರಿಜೀವಿತಃ ॥ 21 ॥

ಗೃಹೇಪಿ ಲಿಖಿತಂ ಯಸ್ಯ ಸದಾತಿಷ್ಠತಿಧಾರಿತಮ್ ।
ನಾಗ್ನಿಚೋರಭಯಂ ತಸ್ಯ ನ ಸರ್ಪಾದಿ ಭಯಂ ಕ್ವಚಿತ್ ॥ 22 ॥

ಜ್ಯೇಷ್ಠಮಾಸೇ ಸಿತೇ ಪಕ್ಷೇ ದಶಮೀಹಸ್ತಸಂಯುತಾ ।
ತಸ್ಯಾಂ ದಶಮ್ಯಾಂ ಏತಚ್ಚ ಸ್ತೋತ್ರಂ ಗಂಗಾಜಲೇ ಸ್ಥಿತಃ ॥ 23 ॥

ಯಃ ಪಠೇದ್ಧಶಕೃತ್ವಸ್ತುದರಿದ್ರೋ ವಾಪಿ ಚಾಕ್ಷಮಃ ।
ಸೋಪಿ ತತ್ಫಲಮಾಪ್ನೋತಿ ಗಂಗಾಸಂಪೂಜ್ಯಯತ್ನತಃ ॥ 24 ॥

॥ ಇತಿ ಶ್ರೀಸ್ಕಂದಪುರಾಣೇ ಕಾಶೀಖಂಡೇ ಪೂರ್ವಾರ್ಧೇ ಶ್ರೀಈಶ್ವರೋಕ್ತ ಗಂಗಾಮಾಹಾತ್ಮ್ಯವರ್ಣನಪೂರ್ವಕ ದಶಹರಾಸ್ತೋತ್ರಕಥನಂ ಸಂಪೂರ್ಣಂ ಶ್ರೀಕೃಷ್ಣಾರ್ಪಣಮಸ್ತು ಶ್ರೀಮಧ್ವೇಶಾರ್ಪಣಮಸ್ತು ॥

3. ಶ್ರೀಈಶ್ವರೋಕ್ತ ಶ್ರೀಗಂಗಾಷ್ಟೋತ್ತರಶತನಾಮಸ್ತೋತ್ರಂ

ಶ್ರೀನಾರದ ಉವಾಚ–
ಗಂಗಾ ನಾಮ ಪರಂ ಉಣ್ಯಂ ಕಥಿತಂ ಪರಮೇಶ್ವರ ।
ನಾಮಾನಿ ಕತಿ ಶಸ್ತಾನಿ ಗಂಗಾಯಾಃ ಪ್ರಣಿಶಂಸ ಮೇ ॥ 1 ॥

ಶ್ರೀಮಹದೇವ ಉವಾಚ -

ನಾಮ್ನಾಂ ಸಹಸ್ರಮಧ್ಯೇ ತು ನಾಮಾಷ್ಟಶತಮುತ್ತಮಮ್ ।
ಜಾಹ್ನವ್ಯಾ ಮುನಿಶಾರ್ದೂಲ ತಾನಿ ಮೇ ಶೃಣು ತತ್ತ್ವತಃ ॥ 2 ॥

ಹರಿಃ ಓಂ ಗಂಗಾ ತ್ರಿಪಥಗಾ ದೇವಿ ಶಂಭುಮೌಲಿವಿಹಾರಿಣೀ ।
ಜಾಹ್ನವೀ ಪಾಪಹಂತ್ರೀ ಚ ಮಹಾಪಾತಕನಾಶಿನೀ ॥ 3 ॥

ಪತಿತೋದ್ಧಾರಿಣೀ ಸ್ರೋತಸ್ವತೀ ಪರಮವೇಗಿನೀ ।
ವಿಷ್ಣುಪಾದಾಬ್ಜಸಂಭೂತಾ ವಿಷ್ಣುದೇಹಕೃತಾಲಯಾ ॥ 4 ॥

ಸ್ವರ್ಗಾಬ್ಧಿನಿಲಯಾ ಸಾಧ್ವೀ ಸ್ವರ್ಣದೀ ಸುರನಿಮ್ನಗಾ ।
ಮಂದಾಕಿಣೀ ಮಹಾವೇಗಾ ಸ್ವರ್ಣಶೃಂಗಪ್ರಭೇದಿನೀ ॥ 5 ॥

ದೇವಪೂಜ್ಯತಮಾ ದಿವ್ಯಾ ದಿವ್ಯಸ್ಥಾನನಿವಾಸಿನೀ ।
ಸುಚಾರುನೀರರುಚಿರಾ ಮಹಾಪರ್ವತಭೇದಿನೀ ॥ 6 ॥

ಭಾಗೀರಥಿ ಭಗವತೀ ಮಹಾಮೋಕ್ಷಪ್ರದಾಯಿನೀ ।
ಸಿಂಧುಸಂಗಗತಾ ಶುದ್ಧಾ ರಸಾತಲನಿವಾಸಿನೀ ॥ 7 ॥

ಮಹಭೋಗಾ ಭೋಗವತೀ ಸುಭಗಾನಂದದಾಯಿನೀ ।
ಮಹಾಪಾಪಹರಾ ಪುಣ್ಯಾ ಪರಮಾಹ್ಲಾದದಾಯಿನೀ ॥ 8 ॥

ಪಾರ್ವತೀ ಶಿವಪತ್ನೀ ಚ ಶಿವಶೀರ್ಷಗತಾಲಯಾ ।
ಶಂಭೋರ್ಜಟಾಮಧ್ಯಗತಾ ನಿರ್ಮಲಾ ನಿರ್ಮಲಾನನಾ ॥ 9 ॥

ಮಹಾಕಲುಷಹಂತ್ರೀ ಚ ಜಹ್ನುಪುತ್ರೀ ಜಗತ್ಪ್ರಿಯಾ ।
ತ್ರೈಲೋಕ್ಯಪಾವನೀ ಪೂರ್ಣಾ ಪೂರ್ಣಬ್ರಹ್ಮಸ್ವರೂಪಿಣೀ ॥ 10 ॥

ಜಗತ್ಪೂಜ್ಯತಮಾ ಚಾರುರೂಪಿನೀ ಜಗದಂಬಿಕಾ ।
ಲೋಕಾನುಗ್ರಹಕರ್ತ್ರೀ ಚ ಸರ್ವಲೋಕದಯಾಪರಾ ॥ 11 ॥

ಯಾಮ್ಯಭೀತಿಹರಾ ತಾರಾ ಪಾರಾ ಸಂಸಾರತಾರಿಣೀ ।
ಬ್ರಹ್ಮಾಂಡಭೇದಿನೀ ಬ್ರಹ್ಮಕಮಂಡಲುಕೃತಾಲಯಾ ॥ 12 ॥

ಸೌಭಾಗ್ಯದಾಯಿನೀ ಪುಂಸಾಂ ನಿರ್ವಾಣಪದದಾಯಿನೀ ।
ಅಚಿಂತ್ಯಚರಿತಾ ಚಾರುರುಚಿರಾತಿಮನೋಹರಾ ॥ 13 ॥

ಮರ್ತ್ಯಸ್ಥಾ ಮೃತ್ಯುಭಯಹಾ ಸ್ವರ್ಗಮೋಕ್ಷಪ್ರದಾಯಿನೀ ।
ಪಾಪಾಪಹಾರಿಣೀ ದೂರಚಾರಿಣೀ ವೀಚಿಧಾರಿಣೀ ॥ 14 ॥

ಕಾರುಣ್ಯಪೂರ್ಣಾ ಕರುಣಾಮಯೀ ದುರಿತನಾಶಿನೀ ।
ಗಿರಿರಾಜಸುತಾ ಗೌರೀಭಗಿನೀ ಗಿರೀಶಪ್ರಿಯಾ ॥ 15 ॥

ಮೇಕನಾಗರ್ಭಸಂಭೂತಾ ಮೈನಾಕಭಗಿನಿಪ್ರಿಯಾ ।
ಆದ್ಯಾ ತ್ರಿಲೋಕಜನನೀ ತ್ರೈಲೋಕ್ಯಪರಿಮಾಲಿನೀ ॥ 16 ॥

ತೀರ್ಥಶ್ರೇಷ್ಠತಮಾ ಶ್ರೇಷ್ಠಾ ಸರ್ವತೀರ್ಥಮಯೀ ಶುಭಾ ।
ಚತುರ್ವೇದಮಯೀ ಸರ್ವಾ ಪಿತೃಸಂತೃಪ್ತಿದಾಯಿನೀ ॥ 17 ॥

ಶಿವದಾ ಶಿವಸಾಯುಜ್ಯದಾಯಿನೀ ಶಿವವಲ್ಲಭಾ ।
ತೇಜಸ್ವಿನೀ ತ್ರಿನಯನಾ ತ್ರಿಲೋಚನಮನೋರಮಾ ॥ 18 ॥

ಸಪ್ತಧಾರಾ ಶತಮುಖೀ ಸಗರಾನ್ವತಾರಿಣೀ ।
ಮುನಿಸೇವ್ಯಾ ಮುನಿಸುತಾ ಜಹ್ನುಜಾನುಪ್ರಭೇಧಿನೀ ॥ 19 ॥

ಮಕರಸ್ಥಾ ಸರ್ವಗತಾ ಸರ್ವಾಶುಭನಿವಾರಿಣೀ ।
ಸುದೃಶ್ಯಾ ಚಾಕ್ಷುಷೀತೃಪ್ತಿದಾಯಿನೀ ಮಕರಾಲಯಾ ॥ 20 ॥

ಸದಾನಂದಮಯೀ ನಿತ್ಯಾನಂದದಾ ನಗಪೂಜಿತಾ ।
ಸರ್ವದೇವಾಧಿದೇವೈಶ್ಚ ಪರಿಪೂಜ್ಯಪದಾಂಬುಜಾ ॥ 21 ॥

ಏತಾನಿ ಮುನಿಶಾರ್ದೂಲ ನಾಮಾನಿ ಕಥಿತಾನಿ ತೇ ।
ಶಸ್ತಾನಿ ಜಾಹ್ನವೀದೇವ್ಯಾಃ ಸರ್ವಪಾಪಹರಾಣಿ ಚ ॥ 22 ॥

ಯ ಇದಂ ಪಠತೇ ಭಕ್ತ್ಯಾ ಪ್ರಾತರುತ್ಥಾಯ ನಾರದ ।
ಗಂಗಾಯಾಃ ಪರಮಂ ಪುಣ್ಯಂ ನಾಮಾಷ್ಟಶತಮೇವ ಹಿ ॥ 23 ॥

ತಸ್ಯ ಪಾಪಾನಿ ನಶ್ಯಂತಿ ಬ್ರಹ್ಮಹತ್ಯಾದಿಕಾನ್ಯಪಿ ।
ಆರೋಗ್ಯಮತುಲಂ ಸೌಖ್ಯಂ ಲಭತೇ ನಾತ್ರ ಸಂಶಯಃ ॥ 24 ॥

॥ ಇತಿ ಶ್ರೀದೇವೀಭಾಗವತಪುರಾಣೇ ಪಂಚಸಪ್ತತಿತಮೋಧ್ಯಾಯೇ .
ಮಹಾದೇವೋಕ್ತ ಗಂಗಾಷ್ಟೋತ್ತರಶತನಾಮಸ್ತೋತ್ರಂ ಸಂಪೂರ್ಣಂ
ಶ್ರೀಕೃಷ್ಣಾರ್ಪಣಮಸ್ತು ಶ್ರೀಮಧ್ವೇಶಾರ್ಪಣಮಸ್ತು ॥

ಈ ಗಂಗಾಷ್ಟೋತ್ತರಶತನಾಮಸ್ತೋತ್ರದಲ್ಲಿ ಬಂದ ಅಷ್ಟೋತ್ತರಶತನಾಮಾವಲಿಗಳು

ಗಂಗಾಯೈ ನಮಃ ।
ತ್ರಿಪಥಗಾದೇವ್ಯೈ ನಮಃ ।
ಶಂಭುಮೌಲಿವಾಹಾರಿಣ್ಯೈ ನಮಃ ।
ಜಾಹ್ನವ್ಯೈ ನಮಃ ।
ಪಾಪಹಂತ್ರ್ಯೈ ನಮಃ ।
ಮಹಾಪಾತಕನಾಶಿನ್ಯೈ ನಮಃ ।
ಪತಿತೋದ್ಧಾರಿಣ್ಯೈ ನಮಃ ।
ಸ್ತ್ರೋತಸ್ವತ್ಯೈ ನಮಃ ।
ಪರಮವೇಗಿನ್ಯೈ ನಮಃ ।
ವಿಷ್ಣುಪಾದಾಬ್ಜಸಂಭೂತಾಯೈ ನಮಃ ।
ದಿವ್ಯಸ್ಥಾನನಿವಾಸಿನ್ಯೈ ನಮಃ ।
ಸುಚಾರುನೀರರುಚಿರಾಯೈ ನಮಃ ।
ಮಹಾಪರ್ವತಭೇದಿನ್ಯೈ ನಮಃ ।
ಭಾಗೀರಥ್ಯೈ ನಮಃ ।
ಭೋಗವತ್ಯೈ ನಮಃ ।
ಮಹಾಮೋಕ್ಷಪ್ರದಾಯಿನ್ಯೈ ನಮಃ ।
ಸಿಂಧುಸಂಗಗತಾಯೈ ನಮಃ ।
ಶುದ್ಧಾಯೈ ನಮಃ ।
ರಸಾತಲನಿವಾಸಿನ್ಯೈ ನಮಃ ।
ಮಹಾಭೋಗಾಯೈ ನಮಃ ।
ಭೋಗವತ್ಯೈ ನಮಃ ।
ಸುಭಗಾನಂದದಾಯಿನ್ಯೈ ನಮಃ ।
ಮಹಾಪಾಪಹರಾಯೈ ನಮಃ ।
ಪುಣ್ಯಾಯೈ ನಮಃ ।
ಪರಮಾಹ್ಲಾದದಾಯಿನ್ಯೈ ನಮಃ ।
ಪಾರ್ವತ್ಯೈ ನಮಃ ।
ಶಿವಪತ್ನ್ಯೈ ನಮಃ ।
ಶಿಶೀರ್ಷಗತಾಲಯಾಯೈ ನಮಃ ।
ಶಂಭೋರ್ಜಟಾಮಧ್ಯಗತಾಯೈ ನಮಃ ।
ವಿಷ್ಣುದೇಹಕೃತಾಲಯಾಯೈ ನಮಃ ।
ಸ್ವರ್ಗಾಬ್ಧಿನಿಲಯಾಯೈ ನಮಃ ।
ಸಾಧ್ವ್ಯೈ ನಮಃ ।
ಸ್ವರ್ಣದ್ಯೈ ನಮಃ ।
ಸುರನಿಮ್ನಗಾಯೈ ನಮಃ ।
ಮಂದಾಕಿನ್ಯೈ ನಮಃ ।
ಮಹಾವೇಗಾಯೈ ನಮಃ ।
ಸ್ವರ್ಣಶೃಂಗಪ್ರಭೇದಿನ್ಯೈ ನಮಃ ।
ದೇವಪೂಜ್ಯತಮಾಯೈ ನಮಃ ।
ದಿವ್ಯಾಯೈ ನಮಃ ।
ತಾರಾಯೈ ನಮಃ ।
ಪಾರಾಯೈ ನಮಃ ।
ಸಂಸಾರತಾರಿಣ್ಯೈ ನಮಃ ।
ಬ್ರಹ್ಮಾಂಡಭೇದಿನ್ಯೈ ನಮಃ ।
ಬ್ರಹ್ಮಕಮಂಡಲುಕೃತಾಲಯಾಯೈ ನಮಃ
ಸೌಭಾಗ್ಯದಾಯಿನ್ಯೈ ನಮಃ ।
ನಿರ್ವಾಣಪದದಾಯಿನ್ಯೈ ನಮಃ ।
ಅಚಿಂತ್ಯಚರಿತಾಯೈ ನಮಃ ।
ಚಾರುರುಚಿರಾತಿಮನೋಹರಾಯೈ ನಮಃ
ಮರ್ತ್ಯಸ್ಥಾಯೈ ನಮಃ ।
ಮೃತ್ಯುಭಯಹಾಯೈ ನಮಃ ।
ಸ್ವರ್ಗಮೋಕ್ಷಪ್ರದಾಯಿನ್ಯೈ ನಮಃ ।
ಪಾಪಾಪಹಾರಿಣ್ಯೈ ನಮಃ ।
ದೂರಚಾರಿಣ್ಯೈ ನಮಃ ।
ವೀಚಿಧಾರಿಣ್ಯೈ ನಮಃ ।
ಕಾರುಣ್ಯಪೂರ್ಣಾಯೈ ನಮಃ ।
ಕರುಣಾಮಯ್ಯೈ ನಮಃ ।
ದುರಿತನಾಶಿನ್ಯೈ ನಮಃ ।
ಗಿರಿರಾಜಸುತಾಯೈ ನಮಃ ।

ನಿರ್ಮಲಾಯೈ ನಮಃ ।
ನಿರ್ಮಲಾನನಾಯೈ ನಮಃ ।
ಮಹಾಕಲುಷಹಂತ್ರ್ಯೈ ನಮಃ ।
ಜಹ್ನುಪುತ್ರ್ಯೈ ನಮಃ ।
ಜಗತ್ಪ್ರಿಯಾಯೈ ನಮಃ ।
ತ್ರೈಲೋಕ್ಯಪಾವನ್ಯೈ ನಮಃ ।
ಪೂರ್ಣಾಯೈ ನಮಃ ।
ಪೂರ್ಣಬ್ರಹ್ಮಸ್ವರೂಪಿಣ್ಯೈ ನಮಃ ।
ಜಗತ್ಪೂಜ್ಯತಮಾಯೈ ನಮಃ ।
ಚಾರುರೂಪಿಣ್ಯೈ ನಮಃ ।
ಜಗದಂಬಿಕಾಯೈ ನಮಃ ।
ಲೋಕಾನುಗ್ರಹಕರ್ತ್ರೀ ನಮಃ ।
ಸರ್ವಲೋಕದಯಾಪರಾಯೈ ನಮಃ ।
ಯಾಮ್ಯಭೀತಿಹರಾಯೈ ನಮಃ ।
ಶಿವದಾಯೈ ನಮಃ ।
ಶಿವಸಾಯುಜ್ಯದಾಯಿನ್ಯೈ ನಮಃ ।
ಶಿವವಲ್ಲಭಾಯೈ ನಮಃ ।
ತೇಜಸ್ವಿನ್ಯೈ ನಮಃ ।
ತ್ರಿನಯನಾಯೈ ನಮಃ ।
ತ್ರಿಲೋಚನಮನೋರಮಾಯೈ ನಮಃ ।
ಸಪ್ತಧಾರಾಯೈ ನಮಃ ।
ಶತಮುಖ್ಯೈ ನಮಃ ।
ಸಗರಾನ್ವಯತಾರಿಣ್ಯೈ ನಮಃ ।
ಮುನಿಸೇವ್ಯಾಯೈ ನಮಃ ।

ಗೌರಿಭಗಿನ್ಯೈ ನಮಃ ।
ಗಿರೀಶಪ್ರಿಯಾಯೈ ನಮಃ ।
ಮೇನಕಾಗರ್ಭಸಂಭೂತಾಯೈ
ಮೈನಾಕಭಗಿನೀಪ್ರಿಯಾಯೈ
ಆದ್ಯಾಯೈ ನಮಃ ।
ತ್ರಿಲೋಕಜನನ್ಯೈ ನಮಃ ।
ತ್ರೈಲೋಕ್ಯಪರಿಪಾಲಿನ್ಯೈ ನಮಃ
ತೀರ್ಥಶ್ರೇಷ್ಠತಮಾಯೈ ನಮಃ ।
ಶ್ರೇಷ್ಠಾಯೈ ನಮಃ ।
ಸರ್ವತೀರ್ಥಮಯ್ಯೈ ನಮಃ ।
ಶುಭಾಯೈ ನಮಃ ।
ಚತುವೇಧಮಯ್ಯೈ ನಮಃ ।
ಸರ್ವಾಯೈ ನಮಃ ।
ಪಿತೃಸಂತೃಪ್ತಿದಾಯಿನ್ಯೈ ನಮಃ ।
ಮುನಿಸುತಾಯೈ ನಮಃ ।
ಜಹ್ನುಜಾನುಪ್ರಭೇದಿನ್ಯೈ ನಮಃ ।
ಮಕರಸ್ಥಾಯೈ ನಮಃ ।
ಸರ್ವಗತಾಯೈ ನಮಃ ।
ಸರ್ವಾಶುಭನಿವಾರಿಣ್ಯೈ ನಮಃ ।
ಸುದೃಶ್ಯಾಯೈ ನಮಃ ।
ಚಾಕ್ಷುಷೀತೃಪ್ತಿದಾಯಿನ್ಯೈ ನಮಃ ।
ಮಕರಾಲಯಾಯೈ ನಮಃ ।
ಸದಾನಂದಮಯ್ಯೈ ನಮಃ ।
ನಿತ್ಯಾನಂದದಾಯೈ ನಮಃ ।

ನಗಪೂಜಿತಾಯೈ ನಮಃ ।
ಸರ್ವದೇವಾಧಿದೇವ್ಯೈಃ ಪರಿಪಾದಾಂಬುಜಾಯೈ ನಮಃ ।

॥ ಇತಿ ಶ್ರೀದೇವಿಭಾಗವತೋಕ್ತ ಶ್ರೀಗಂಗಾಷ್ಟೋತ್ತರಶತನಾಮಾವಲಿಃ ಸಂಪೂರ್ಣಾ
ಶ್ರೀಕೃಷ್ಣಾರ್ಪಣಮಸ್ತು ಶ್ರೀಮಧ್ವೇಶಾರ್ಪಣಮಸ್ತು ॥

4. ಶ್ರೀಸ್ಕಂದಕೃತ ಶ್ರೀಗಂಗಾಸಹಸ್ರನಾಮಸ್ತೋತ್ರಂ

ಹರಿಃ ಓಂ ಶ್ರೀಸ್ಕಂದ ಉವಾಚ–

ಓಂಕಾರರೂಪಿಣ್ಯಜರಾತುಲಾನಂತಾಮೃತಸ್ರವಾ ।
ಅತ್ಯದಾರಾಭಯಾಶೋಕಾಲಕನಂದಾಮೃತಾಮಲಾ ॥ 1 ॥

ಅನಥವತ್ಸಲಾಮೋಘಾಪಾಂಯೋನಿರಮೃತಪ್ರದಾ ।
ಅವ್ಯಕ್ತಲಕ್ಷಣಾಕ್ಷೋಭ್ಯಾನವಚ್ಛಿನ್ನಾಪರಾಜಿತಾ ॥ 2 ॥

ಅನಾಥನಾತಾಭೀಷ್ಟಾರ್ಥಸಿದ್ಧಿದಾನಂಗವರ್ಧಿನೀ ।
ಅಣಿಮಾದಿಗುಣಾಧಾರಾಗ್ರಗಣ್ಯಾಲೀಕಹಾರಿಣೀ ॥ 3 ॥

ಅಚಿಂತ್ಯಶಕ್ತಿರನಘಾದ್ಭುತರೂಪಾಘಹಾರಿಣೀ ।
ಅದ್ರಿರಾಜಸುತಾಷ್ಟಾಂಗಯೋಗಸಿದ್ಧಿಪ್ರದಾಚ್ಯುತಾ ॥ 4 ॥

ಅಕ್ಷುಣ್ಣಶಕ್ತಿರಸುದಾನಂತತೀರ್ಥಾಮೃತೋದಕಾ ।
ಅನಂತಮಹಿಮಾಪಾರಾನಂತಸೌಖ್ಯಪ್ರದಾನ್ನದಾ ॥ 5 ॥

ಅಶೇಷದೇವತಾಮೂರ್ತಿರಘೋರಾಮೃತರೂಪೀಣಿ ।
ಅವಿದ್ಯಾಜಾಲಶಮನೀ ಹ್ಯಪ್ರತರ್ಕ್ಯಗತಿಪ್ರದಾ ॥ 6 ॥

ಅಶೇಷವಿಘ್ನಸಂಹರ್ತ್ರೀ ತ್ವಶೇಷಗುಣಗುಂಫಿತಾ ।
ಅಜ್ಞಾನತಿಮಿರಜ್ಯೋತಿರನುಗ್ರಹಪರಾಯಣಾ ॥ 7 ॥

ಅಭಿರಾಮಾನವದ್ಯಾಙ್ಗ್ಯನಂತಸಾರಾಕಲಂಕಿನೀ ।
ಆರೋಗ್ಯದಾನಂದವಲ್ಲೀ ತ್ವಾಪನ್ನಾರ್ತಿವಿನಾಶಿನೀ ॥ 8 ॥

ಆಶ್ಚರ್ಯಮೂರ್ತಿರಾಯುಷ್ಯಾಹ್ಯಾಢ್ಯಾದ್ಯಾಪ್ರಾರ್ಯಸೇವಿತಾ ।
ಆಪ್ಯಾಯಿನ್ಯಾಪ್ತವಿದ್ಯಾಖ್ಯಾತ್ವಾನಂದಾಶ್ವಾಸದಾಯಿನೀ ॥ 9 ॥

ಆಲಸ್ಯಾಗ್ನ್ಯಾಪದಾಂ ಹಂತ್ರೀ ಹ್ಯಾನಂದಾಮೃತವರ್ಷಿಣೀ ।
ಇರಾವತೀಷ್ಟದಾತ್ರೀಷ್ಟಾಪೂರ್ತಿಫಲಪ್ರದಾ ॥ 10 ॥

ಇತಿಹಾಸಶ್ರುತಿಡ್ಯಾರ್ಥಾ ತ್ವಿಹಾಮುತ್ರಶುಭಪ್ರದಾ ।
ಇಜ್ಯಾಶೀಲಸಮಿಜ್ಯೇಷ್ಠಾ ತ್ವಿಂದ್ರಾದಿಪರಿವಂದಿತಾ ॥ 11 ॥

ಇಲಾಲಂಕಾರಮಾಲಂಧ್ಯಾ ತಿಂದಿರಾರಮ್ಯಮಂದಿರಾ ।
ಇದಿಂದಿರಾದಿಸಂಸೇವ್ಯಾ ತ್ವೀಶ್ವರೀಶ್ವರವಲ್ಲಭಾ ॥ 12 ॥

ಈತಿಭೀತಿಹರೇಢ್ಯಾ ಚ ತ್ವೀಡನೀಯಚರಿತ್ರಭೃತ್ ।
ಉತ್ಕೃಷ್ಟಶಕ್ತಿರುತ್ಕೃಷ್ಟೋಡುಪಮಂಡಲಚಾರಿಣೀ ॥ 13 ॥

ಉದಿತಾಂಬರಮಾರ್ಗೋಸ್ತ್ರೋರಗಲೋಕವಿಹಾರಿಣೀ ।
ಉಕ್ಷೋರ್ವರೋತ್ಪಲೋತ್ಕುಂಭಾ ಉಪೇಂದ್ರಾಚರಣದ್ರವಾ ॥ 14 ॥

ಉದನ್ವತ್ಪೂರ್ತಿಹೇತುಶ್ಚೋದಾರೋತ್ಸಾಹಪ್ರವರ್ಧಿನೀ ।
ಉದ್ವೇಗಘ್ನ್ಯುಷ್ಣಶಮನೀ ಹ್ಯುಷ್ಣರಶ್ಮಿಸುತಾಪ್ರಿಯಾ ॥ 15 ॥

ಉತ್ಪತ್ತಿಸ್ಥಿತಿಸಂಹಾರಕಾರಿಣ್ಯುಪರಿಚಾರಿಣೀ ।
ಊರ್ಜ್ವಂ ವಹಂತ್ಯೂರ್ಜಧರೋರ್ಜಾವತೀ ಚೋರ್ಮಿಮಾಲಿನೀ ॥ 16 ॥

ಊರ್ಧ್ವರೇತಃಪ್ರಿಯೋರ್ಧ್ವಾಧ್ವಾ ಹ್ಯೂರ್ಮಿಲೋರ್ಧ್ವಗತಿಪ್ರದಾ ।
ಋಷಿವೃಂದಸ್ತುತರ್ದ್ಧಿಶ್ಚ ಋಣತ್ರಯವಿನಾಶಿನೀ ॥ 17 ॥

ಋತಂಬರರ್ದ್ಧಿದಾತ್ರೀ ಚ ಋಕ್ಸ್ವರೂಪಾ ಋಜುಪ್ರಿಯಾ ।
ಋಕ್ಷಮಾರ್ಗ ವಹರ್ಕ್ಷಾರ್ಚಿಋಜುಮಾರ್ಗಪ್ರದರ್ಶಿನೀ ॥ 18 ॥

ಏಧಿತಾಖಿಲಧರ್ಮಾರ್ಥಾತ್ವೇಕೈಕಾಮೃತದಾಯಿನೀ ।
ಏಧನೀಯಸ್ವಭಾವೈಜ್ಯಾ ತ್ವೇಜಿತಾಶೇಷಪಾತಕಾ ॥ 19 ॥

ಐಶ್ವರ್ಯದೈಶ್ವರ್ಯರೂಪಾ ಹ್ಯೈತಿಹ್ಯಂ ಹ್ಯೈಂದವೀದ್ಯುತಿಃ ।
ಓಜಸ್ವಿನ್ಯೋಷಧೀಕ್ಷೇತ್ರಮೋಜೋದೌದನದಾಯಿನೀ ॥ 20 ॥

ಓಷ್ಠಾಮೃತೌನ್ನತ್ಯದಾತ್ರೀ ತ್ವೌಷಧಂ ಭವರೋಗಿಣಾಮ್ ।
ಔದಾರ್ಯಚಂಚುರೌಪೇಂದ್ರೀ ತ್ವೌಗ್ರೀ ಹ್ಯೌಮೇಯರೂಪಿಣೀ ॥ 21 ॥

ಅಂಬರಾಧ್ವವಹಾಂಬಷ್ಠಾಂಬರಮಾಲಾಂಬುಜೇಕ್ಷಣಾ ।
ಅಂಬಿಕಾಂಬುಮಹಾಯೋನಿರಂಧೋದಾಂಧಕಹಾರಿಣೀ ॥ 22 ॥

ಅಂಶುಮಾಲಾಹ್ಯಂಶುಮತೀತ್ವಂಗೀಕೃತಷಡಾನನಾ ।
ಅಂಧತಾಮಿಸ್ರಹಂತ್ರ್ಯಂಧುರಂಜನಾ ಹ್ಯಂಜನಾವತೀ ॥ 23 ॥

ಕಲ್ಯಾಣಕಾರಿಣೀ ಕಾಮ್ಯಾ ಕಮಲೋಪತ್ಲಗಂಧಿನೀ ।
ಕುಮುದ್ವತೀ ಕಮಲಿನೀ ಕಾಂತಿಃ ಕಲ್ಪಿತದಾಯಿನೀ ॥ 24 ॥

ಕಾಂಚನಾಕ್ಷೀ ಕಾಮಧೇನುಃ ಕೀರ್ತಿಕೃತ್ ಕ್ಲೇಶನಾಶಿನೀ ।
ಕ್ರತುಶ್ರೇಷ್ಠಾ ಕ್ರತುಫಲಾ ಕರ್ಮಬಂಧವಿಭೇದಿನೀ ॥ 25 ॥

ಕಮಲಾಕ್ಷೀ ಕ್ಲಮಹರಾ ಕೃಸಾನುತಪನದ್ಯುತಿಃ ।
ಕರುಣಾದ್ರಾ ಚ ಕಲ್ಯಾಣೀ ಕಲಿಕಲ್ಮಷನಾಶಿನೀ ॥ 26 ॥

ಕಾಮರೂಪಾಕ್ರಿಯಾಶಕ್ತಿಃ ಕಮಲೋತ್ಪಲಮಾಲಿನೀ ।
ಕೂಟಸ್ಥಾ ಕರುಣಾ ಕಾಂತಾ ಕೂರ್ಮ್ಯಯಾನಾ ಕಲಾವತೀ ॥ 27 ॥

ಕಮಲಾ ಕಲ್ಪಲತಿಕಾ ಕಾಲೀ ಕಲುಷವೈರಿಣೀ ।
ಕಮನೀಯಜಲಾ ಕಮ್ರಾ ಕಪರ್ದಿಸುಕಪರ್ದಗಾ ॥ 28 ॥

ಕಾಲಕೂಟಪ್ರಶಮನೀ ಕದಂಬಕುಸುಮಪ್ರಿಯಾ ।
ಕಾಲಿಂದೀ ಕೇಲಿಲಲಿತಾಕಲಕಲ್ಲೋಲಮಾಲಿಕಾ ॥ 29 ॥

ಕ್ರಾಂತಲೋಕತ್ರಯಾ ಕಂಡೂಃ ಕಂಡೂತನಯವತ್ಸಲಾ ।
ಖಡ್ಗಿನೀ ಖಡ್ಗಧಾರಾಭಾ ಖಗಾ ಖಂಡೇಂದುಧಾರಿಣೀ ॥ 30 ॥

ಖೇಖಿಲಗಾಮಿನೀ ಖಸ್ಥಾ ಖಂಡೇಂದುತಿಲಕಪ್ರಿಯಾ ।
ಖೇಚರೀ ಖೇಚರೀವಂದ್ಯಾ ಖ್ಯಾತಿಃ ಖ್ಯಾತಿಪ್ರದಾಯಿನೀ ॥ 31 ॥

ಖಂಡಿತಪ್ರಣತಾಘೌಘಾ ಖಲಬುದ್ಧಿವಿನಾಶಿನೀ ।
ಖಾತೈನಃಕಂದಸಂದೋಹಾ ಖಡ್ಗಖಟ್ವಾಂಗಖೇಟಿನೀ ॥ 32 ॥

ಖರಸಂತಾಪಶಮನೀ ಖನಿಃ ಪೀಯೂಷಪಾಥಸಾಮ ।
ಗಂಗಾ ಗಂಧವತೀ ಗೌರೀ ಗಂಧರ್ವನಗರಪ್ರಿಯಾ ॥ 33 ॥

ಗಂಭೀರಾಂಗೀ ಗುಣಮಯೀ ಗತಾತಂಕಾ ಗತಿಪ್ರಿಯಾ ।
ಗಣನಾಥಾಂಬಿಕಾ ಗೀತಾ ಗದ್ಯಪದ್ಯಪರಿಷ್ಟುತಾ ॥ 34 ॥

ಗಾಂಧಾರೀ ಗರ್ಭಶಮನೀ ಗತಿಭ್ರಷ್ಟಗತಿಪ್ರದಾ ।
ಗೋಮತೀ ಗುಹ್ಯವಿದ್ಯಾ ಗೌರ್ಗೋಪ್ತ್ರೀ ಗಗನಗಾಮಿನೀ ॥ 35 ॥

ಗೋತ್ರಪ್ರವರ್ಧಿನೀ ಗುಣ್ಯಾ ಗುಣಾತೀತಾ ಗುಣಾಗ್ರಣೀಃ ।
ಗುಹಾಂಬಿಕಾ ಗಿರಿಸುತಾ ಗೋವಿಂದಾಂಘ್ರಿಸಮುದ್ಭವಾ ॥ 36 ॥

ಗುಣನೀಯಚರಿತ್ರಾ ಚ ಗಾಯತ್ರೀ ಗಿರಿಶಪ್ರಿಯಾ ।
ಗೂಢರೂಪಾ ಗುಣವತೀ ಗುರ್ವೀ ಗೌರವವರ್ಧಿನೀ ॥ 37 ॥

ಗ್ರಹಪೀಡಾಹರಾ ಗುಂದ್ರಾ ಗರಘ್ನೀ ಗಾನವತ್ಸಲಾ ।
ಘರ್ಮಹಂತ್ರೀ ಘೃತವತೀ ಘೃತತುಷ್ಟಿಪ್ರದಾಯಿನೀ ॥ 38 ॥

ಘಂಟಾರವಪ್ರಿಯಾ ಘೋರಾಘೌಘವಿಧ್ವಂಸಕಾರಿಣೀ ।
ಘ್ರಾಣತುಷ್ಟಿಕರೀ ಘೋಷಾ ಘನಾನಂದಾ ಘನಪ್ರಿಯಾ ॥ 39 ॥

ಘಾತುಕಾ ಘೂರ್ಣಿತಜಲಾ ಘೃಷ್ಟಪಾತಕಸಂತತಿಃ ।
ಘಟಕೋಟಿಪ್ರಪೀತಾಪಾ ಘಟಿತಾಶೇಷಮಂಗಲಾ ॥ 40 ॥

ಘೃಣಾವತೀ ಘೃಣಿನಿಧಿಘೃಸಮರಾ ಘೂಕನಾದಿನೀ ।
ಘುಸೃಣಾಪಿಂಜರತನುರ್ಘರ್ಘರಾ ಘರ್ಘರಸ್ವನಾ ॥ 41 ॥

ಚಂದ್ರಿಕಾ ಚಂದ್ರಕಾಂತಾಂಬುಶ್ಚಞ್ಚದಾಪಾ ಚಲದ್ದ್ಯುತಿಃ ।
ಚಿನ್ಮಯೀ ಚಿತಿರೂಪಾ ಚ ಚಂದ್ರಾಯುತಶತಾನನಾ ॥ 42 ॥

ಚಾಂಪೇಯಲೋಚನಾ ಚಾರುಶ್ಚಾರ್ವಂಗೀ ಚಾರುಗಾಮಿನೀ ।
ಚಾರ್ಯಾ ಚಾರಿತ್ರನಿಲಯಾ ಚಿತ್ರಕೃಚ್ಚಿತ್ರರೂಪಿಣೀ ॥ 43 ॥

ಚಂಘೂಶ್ಚಂದನಶುಚ್ಯಂಬುಚರ್ಚನೀಯಾ ಚಿರಸ್ಥಿರಾ ।
ಚಾರೂಚಂಪಕಮಾಲಾಢ್ಯಾ ಚಮಿತಾಶೇಷದುಷ್ಕೃತಾ ॥ 44 ॥

ಚಿದಾಕಾಶವಹಾ ಚಿಂತ್ಯಾ ಚಂಚಚ್ಚಾಮರವೀಜಿತಾ ।
ಚೋರಿತಾಶೇಷವೃಜಿನಾ ಚರಿತಾಶೇಷಂಡಲಾ ॥ 45 ॥

ಏದಿತಾಖಿಲಪಾಪೌಘಾ ಛದ್ಮಘ್ನೀ ಛಲಹಾರಿಣೀ ।
ಛನ್ನತ್ರಿವಿಷ್ಟಪತಲಾ ಛೋಟಿತಾಶೇಷಬಂಧನಾ ॥ 46 ॥

ಛುರಿತಾಮೃತಧಾರೌಘಾ ಛಿನ್ನೈನಾಶ್ಛಂದಗಾಮಿನೀ ।
ಛತ್ರೀಕೃತಮರಾಲೌಘಾ ಛಟೀಕೃತನಿಜಾಮೃತಾ ॥ 47 ॥

ಜಾಹ್ನವೀ ಜಯಾ ಜಗನ್ಮಾತಾ ಜಪ್ಯಾ ಜಂಘಾಲವೀಚಿಕಾ ।
ಜಯಾ ಜನಾರ್ದನಪ್ರೀತಾ ಜುಷಣೀಯಾ ಜಗದ್ಧಿತಾ ॥ 48 ॥

ಜೀವನಂ ಜೀವನಪ್ರಾಣಾ ಜಗಜ್ಜ್ಯೇಷ್ಠಾ ಜಗನ್ಮಯೀ ।
ಜೀವಜೀವಾತುಲತಿಕಾ ಜನ್ಮಿಜನ್ಮನಿಬರ್ಹಿಣೀ ॥ 49 ॥

ಜಾಡ್ಯವಿಧ್ವಂಸನಕರೀ ಜಗದ್ಯೋನಿರ್ಜಲಾವಿಲಾ ।
ಜಗದಾನಂದಜನನೀ ಜಲಜಾ ಜಲಜೇಕ್ಷಣಾ ॥ 50 ॥

ಜನಲೋಚನಪೀಯೂಷಾ ಜಟಾತಟವಿಹಾರಿಣೀ ।
ಜಯಂತೀ ಜಂಜಪೂಕಘ್ನೀ ಜನಿತಾಜ್ಞಾನವಿಗ್ರಹಾ ॥ 51 ॥

ಝಲ್ಲರೀವಾದ್ಯಕುಶಲಾ ಝಲಜ್ಝಾಲಜಲಾವೃತಾ ।
ಝಿಂಟೀಶವಂದ್ಯಾ ಝಂಕಾರಕಾರಿಣೀ ಝರ್ಝರಾವತೀ ॥ 52 ॥

ಟೀಕಿತಾಶೇಷಪಾತಾಲಾ ಟಂಕಿಕೈನೋದ್ರಿಪಾಟನೇ ।
ಟಂಕಾರನೃತ್ಯತ್ಕಲ್ಲೋಲಾ ಟೀಕನೀಯಮಹಾತಟಾ ॥ 53 ॥

ಡಂಬರಪ್ರವಹಾ ಡೀನರಾಜಹಂಸಸಕುಲಾಕುಲಾ ।
ಡಮಡ್ಡಮರುಹಸ್ತಾ ಚ ಡಾಮರೋಕ್ತಮಹಾಂಡಕಾ ॥ 54 ॥

ಢೌಕಿತಾಶೇಷನಿರ್ವಾಣಾ ಢಕ್ಕಾನಾದಚಲಜ್ಜಲಾ ।
ಢುಂಢಿವಿಘ್ನೇಶಜನನೀ ಢಣಡ್ಢುಣಿತಪಾತಕಾ ॥ 55 ॥

ತರ್ಪಣೀ ತೀರ್ಥತೀರ್ಥಾ ಚ ತ್ರಿಪಥಾ ತ್ರಿದಶೇಶ್ವರೀ ।
ತ್ರಿಲೋಕಗೋಪ್ತ್ರೀ ತೋಯೇಶೀ ತ್ರೈಲೋಕ್ಯಪರಿವಂದಿತಾ ॥ 56 ॥

ತಾಪತ್ರಿತಯಸಂಹರ್ತ್ರೀ ತೇಜೋಬಲವಿವರ್ಧಿನೀ ।
ತ್ರಿಲಕ್ಷ್ಯಾ ತಾರಣೀ ತಾರಾ ತಾರಾಪತಿಕರಾರ್ಚಿತಾ ॥ 57 ॥

ತ್ರೈಲೋಕ್ಯಪಾವನೀ ಪುಣ್ಯಾ ತುಷ್ಟಿದಾ ತುಷ್ಟಿರೂಪಿಣೀ ।
ತೃಷ್ಣಾಚ್ಛೇತ್ರೀ ತೀರ್ಥಮಾತಾ ತ್ರಿವಿಕ್ರಮಪದೋದ್ಭವಾ ॥ 58 ॥

ತಪೋಮಯೀ ತಪೋರೂಪಾ ತಪಃಸ್ತೋಮಫಲಪ್ರದಾ ।
ತ್ರೈಲೋಕ್ಯವ್ಯಾಪಿನೀ ತೃಪ್ತಿಸ್ತೃಪ್ತಿಕೃತ್ ತತ್ವರೂಪಿಣೀ ॥ 59 ॥

ತ್ರೈಲೋಕ್ಯಸುಂದರೀ ತುರ್ಯಾ ತುರ್ಯಾತೀತಫಲಪ್ರದಾ ।
ತ್ರೈಲೋಕ್ಯಲಕ್ಷ್ಮೀಸ್ತ್ರಿಪದೀ ತಥ್ಯಾ ತಿಮಿರಚಂದ್ರಿಕಾ ॥ 60 ॥

ತೇಜೋಗರ್ಭಾ ತಪಃಸಾರಾ ತ್ರಿಪುರಾರಿಶಿರೋಗೃಹಾ ।
ತ್ರಯಿಸ್ವರೂಪಿಣೀ ತನ್ವೀ ತಪನಾಂಗಜಭೀತಿನುತ್ ॥ 61 ॥

ತರಿಸ್ತರಣಿಜಾಮಿತ್ರಂ ತರ್ಪಿತಾಶೇಷಪೂರ್ವಜಾ ।
ತುಲಾವಿರಹಿತಾ ತೀವ್ರಪಾಪತೂಲತನೂನಪಾತ್ ॥ 62 ॥

ದಾರಿದ್ರ್ಯದಮನೀ ದಕ್ಷಾ ದುಷ್ಪ್ರೇಕ್ಷಾ ದಿವ್ಯಮಂಡನಾ ।
ದೀಕ್ಷಾವತೀ ದುರಾವಾಪ್ಯಾ ದ್ರಾಕ್ಷಾಮಧುರವಾರಿಭೃತ್ ॥ 63 ॥

ದರ್ಶಿತಾನೇಕಕುತುಕಾ ದುಷ್ಟದುರ್ಜಯದುಃಖಹೃತ್ ।
ದೈನ್ಯಹೃದ್ ದುರಿತಘ್ನೀ ಚ ದಾನವಾರಿಪದಾಬ್ಜಜಾ ॥ 64 ॥

ದಂದಶೂಕವಿಷಘ್ನೀ ಚ ದಾರಿತಾಘೌಘಸಂತತಿಃ ।
ದ್ರುತಾ ದೇವದ್ರುಮಚ್ಛನ್ನಾ ದುರ್ವಾರಾಘವಿಘಾತಿನೀ ॥ 65 ॥

ದಮಗ್ರಾಹ್ಯಾ ದೇವಮಾತಾ ದೇವಲೋಕಪ್ರದರ್ಶಿನೀ ।
ದೇವದೇವಪ್ರಿಯಾ ದೇವೀ ದಿಕ್ಪಾಲಪದದಾಯಿನೀ ॥ 66 ॥

ದೀರ್ಘಾಯುಃ ಕಾರಿಣೀ ದೀರ್ಘಾ ದೋಗ್ಧ್ರೀ ದೂಷಣವರ್ಜಿತಾ ।
ದುಗ್ಧಾಂಬುವಾಹಿನೀ ದೋಹ್ಯಾ ದಿವ್ಯಾ ದಿವ್ಯಗತಿಪ್ರದಾ ॥ 67 ॥

ದ್ಯುನದೀ ದೀನಶರಣಂ ದೇಹಿದೇಹನಿವಾರಿಣೀ ।
ದ್ರಾಘೀಯಸೀ ದಾಘಹಂತ್ರೀ ದಿತಪಾತಕಸಂತತಿಃ ॥ 68 ॥

ದೂರದೇಶಾಂತರಚರೀ ದುರ್ಗಮಾ ದೇವವಲ್ಲಭಾ ।
ದುರ್ವೃತ್ತಘ್ನೀ ದುರ್ವಿಗಾಹ್ಯಾ ದಯಾಧಾರಾ ದಯಾವತೀ ॥ 69 ॥

ದುರಾಸದಾ ದಾನಶೀಲಾ ದ್ರಾವಿಣೀ ದ್ರುಹಿಣಸ್ತುತಾ ।
ದೈತ್ಯದಾನವಸಂಶುದ್ಧಿಕರ್ತ್ರೀ ದುರ್ಬುದ್ಧಿಹಾರಿಣೀ ॥ 70 ॥

ದಾನಸಾರಾ ದಯಾಸಾರಾ ದ್ಯಾವಾಭೂಮಿವಿಗಾಹಿನೀ ।
ದೃಷ್ಟಾದೃಷ್ಟಫಲಪ್ರಾಪ್ತಿರ್ದೇವತಾವೃಂದವಂದಿತಾ ॥ 71 ॥

ದೀರ್ಘವ್ರತಾ ದೀರ್ಘದೃಷ್ಟಿರ್ದೀಪ್ತತೋಯಾ ದುರಾಲಭಾ ।
ದಂಡಯಿತ್ರೀ ದಂಡನೀತಿರ್ದುಷ್ಟದಂಡಧರಾರ್ಚಿತಾ ॥ 72 ॥

ದುರೋಧರಘ್ನೀ ದಾವಾರ್ಚಿದ್ರವದ್ದ್ರವ್ಯೈಕಶೇವಧಿಃ ।
ದೀನಸಂತಾಪಶಮನೀ ದಾತ್ರೀ ದವಥುವೈರಿಣೀ ॥ 73 ॥

ಧಮದ್ರವಾ ಧರ್ಮಧುರಾ ಧೇನುರ್ಧೀರಾ ಧೃತಿರ್ಧ್ರುವಾ ।
ಧೇನುದಾನಫಲಸ್ಪರ್ಶಾ ಧರ್ಮಕಾಮಾರ್ಥಮೋಕ್ಷದಾ ॥ 74 ॥

ಧರ್ಮೋರ್ಮಿವಾಹಿನೀ ಧುರ್ಯಾ ಧಾತ್ರೀ ಧಾತ್ರೀವಿಭೂಷಣಮ್ ।
ಧರ್ಮಿಣೀ ಧರ್ಮಶೀಲಾ ಚ ಧನ್ವಿಕೋಟಿಕೃತಾವನಾ ॥ 75 ॥

ಧ್ಯಾತೃಪಾಪಹರಾ ಧ್ಯೇಯಾ ಧಾವನೀ ಧೂತಕಲ್ಮಷಾ ।
ಧರ್ಮಧಾರಾ ಧರ್ಮಸಾರಾ ಧನದಾ ಧನವರ್ಧಿನೀ ॥ 76 ॥

ಧರ್ಮಾಧರ್ಮಗುಣಚ್ಛೇತ್ರೀ ಧತ್ತೂರಕುಸುಮಪ್ರಿಯಾ ।
ಧರ್ಮೇಶೀ ಧರ್ಮಶಾಸ್ತ್ರಜ್ಞಾ ಧನಧಾನ್ಯಸಮೃದ್ಧಿಕೃತ್ ॥ 77 ॥

ಧರ್ಮಲಭ್ಯಾ ಧರ್ಮಜಲಾ ಧರ್ಮಪ್ರಸವಧರ್ಮಿಣೀ ।
ಧ್ಯಾನಗಮ್ಯಸ್ವರೂಪಾ ಚ ಧರಿಣೀ ಧಾತೃಪೂಜಿತಾ ॥ 78 ॥

ಧೂರ್ಧುಜಟಿಜಟಾಸಂಸ್ಥಾ ಧನ್ಯಾ ಧೀರ್ಧಾರಣಾವತೀ ।
ನಂದಾ ನಿರ್ವಾಣಜನನೀ ನಂದಿನೀ ನುನ್ನಪಾತಕಾ ॥ 79 ॥

ನಿಷಿದ್ಧನಿಘ್ನನಿಚಯಾ ನಿಜಾನಂದಪ್ರಾಶಿಕಾಶಿನೀ ।
ನಭೋಂಗಣಚರೀ ನೂತಿರ್ನಮ್ಯಾ ನಾರಾಯಣೀ ನುತಾ ॥ 80 ॥

ನಿರ್ಮಲಾ ನಿರ್ಮಲಾಖ್ಯಾನಾ ನಾಶಿನೀ ತಾಪಸಂಪದಾಮ್ ।
ನಿಯತಾ ನಿತ್ಯಸುಖದಾ ನಾನಾಶ್ಚರ್ಯಮಹಾನಿಧಿಃ ॥ 81 ॥

ನದೀ ನದಸರೋಮಾತಾ ನಾಯಿಕಾ ನಾಕದೀರ್ಘಿಕಾ ।
ನಷ್ಟೋದ್ಧರಣಧೀರಾ ಚ ನಂದನಾ ನಂದದಾಯಿನೀ ॥ 82 ॥

ನಿರ್ಣಿಕ್ತಾಶೇಷಭುವನಾ ನಿಃಸಂಗಾ ನಿರುಪದ್ರವಾ ।
ನಿರಾಲಂಬಾ ನಿಷ್ಪ್ರಪಂಚಾ ನಿರ್ಣಾಶಿತಮಹಾಮಲಾ ॥ 83 ॥

ನಿರ್ಮಲಜ್ಞಾನಜನನೀ ನಿಃಶೇಷಪ್ರಾಣಿತಾಪಹೃತ್ ।
ನಿತ್ಯೋತ್ಸವಾ ನಿತ್ಯತೃಪ್ತಾ ನಮಸ್ಕಾರ್ಯಾ ನಿರಂಜನಾ ॥ 84 ॥

ನಿಷ್ಠಾವತೀ ನಿರಾತಂಕಾ ನಿರ್ಲೇಪಾ ನಿಶ್ಚಲಾತ್ಮಿಕಾ ।
ನಿರವದ್ಯಾ ನಿರೀಹಾ ಚ ನೀಲಲೋಹಿತಮೂರ್ಧಗಾ ॥ 85 ॥

ನಂದಿಭೃಂಗಿಗಣಸ್ತುತ್ಯಾ ನಾಗಾ ನಂದಾ ನಗಾತ್ಮಜಾ ।
ನಿಷ್ಪ್ರತ್ಯೂಹಾ ನಾಕನದೀ ನಿರಯಾರ್ಣವದೀರ್ಘನೌಃ ॥ 86 ॥

ಪುಣ್ಯಪ್ರದಾ ಪುಣ್ಯಗರ್ಭಾ ಪುಣ್ಯಾ ಪುಣ್ಯತರಂಗಿಣೀ ।
ಪೃಥುಃ ಪೃಥುಫಲಾ ಪೂರ್ಣಾ ಪ್ರಣತಾರ್ತಿಪ್ರಭಂಜನೀ ॥ 87 ॥

ಪ್ರಣದಾ ಪ್ರಾಣಿಜನನೀ ಪ್ರಾಣೇಶೀ ಪ್ರಾಣರೂಪಿಣೀ ।
ಪದ್ಮಾಲಯಾ ಪರಾಶಕ್ತಿಃ ಪುರಜಿತ್ಪರಮಪ್ರಿಯಾ ॥ 88 ॥

ಪರಾ ಪರಫಲಪ್ರಾಪ್ತಿಃ ಪಾವನಾ ಚ ಪಯಸ್ವಿನೀ ।
ಪರಾನಂದಾ ಪ್ರಕೃಷ್ಟಾರ್ಥಾ ಪ್ರತಿಷ್ಠಾ ಪಾಲಿನೀ ಪರಾ ॥ 89 ॥

ಪುರಾಣಪಠಿತಾ ಪ್ರೀತಾ ಪ್ರಣವಾಕ್ಷರರೂಪಿಣೀ ।
ಪಾರ್ವತೀ ಪ್ರೇಮಸಂಪನ್ನಾ ಪಶುಪಾಶವಿಮೋಚಿನೀ ॥ 90 ॥

ಪರಮಾತ್ಮಸ್ವರೂಪಾ ಚ ಪರಬ್ರಹ್ಮಪ್ರಕಾಶಿನೀ ।
ಪರಮಾನಂದನಿಷ್ಪಂದಾ ಪ್ರಾಯಶ್ಚಿತ್ತಸ್ವರೂಪಿಣೀ ॥ 91 ॥

ಪಾನೀಯರೂಪನಿರ್ವಾಣಾ ಪರಿತ್ರಾಣಪರಾಯಣಾ ।
ಪಾಪೇಂಧನದವಜ್ವಾಲಾ ಪಾಪಾರಿಃ ಪಾಪನಾಮನುತ್ ॥ 92 ॥

ಪರಮೈಶ್ವರ್ಯಜನನೀ ಪ್ರಜ್ಞಾ ಪ್ರಾಜ್ಞಾ ಪರಾಪರಾ ।
ಪ್ರತ್ಯಕ್ಷಲಕ್ಷ್ಮೀಃ ಪದ್ಮಾಕ್ಷೀ ಪರವ್ಯೋಮಾಮೃತಸ್ರವಾ ॥ 93 ॥

ಪ್ರಸನ್ನರೂಪಾ ಪ್ರಣಿಧಿಃ ಪೂತಾ ಪ್ರತ್ಯಕ್ಷದೇವತಾ ।
ಪಿನಾಕಿಪರಮಪ್ರೀತಾ ಪರಮೇಷ್ಠಿಕಮಂಡಲುಃ ॥ 94 ॥

ಪದ್ಮನಾಭಪದಾರ್ಘ್ಯೇಣ ಪ್ರಸೂತಾ ಪದ್ಮಮಾಲಿನೀ ।
ಪರರ್ದ್ಧಿದಾ ಪುಷ್ಟಿಕರೀ ಪಥ್ಯಾ ಪೂರ್ತಿ ಪ್ರಭಾವತೀ ॥ 95 ॥

ಪುನಾನಾ ಪೀತಗರ್ಭಘ್ನೀ ಪಾಪಪರ್ವತನಾಶಿನೀ ।
ಫಲಿನೀ ಫಲಹಸ್ತಾ ಚ ಫುಲ್ಲಾಂಬುಜವಿಲೋಚನಾ ॥ 96 ॥

ಫಾಲಿತೌನೋಮಹಾಕ್ಷೇತ್ರಾ ಫಣಿಲೋಕವಿಭೂಷಣಾ ।
ಫೇನಚ್ಛಲಪ್ರಣುನ್ನೈನಾಃ ಫುಲ್ಲಕೈರವಗಂಧಿನೀ ॥ 97 ॥

ಫೇನಿಲಾಚ್ಛಾಂಬುಧಾರಾಭಾ ಫಡುಚ್ಚಾಟಿತಪಾತಕಾ ।
ಫಾಣಿತಸ್ವಾದುಸಲಿಲಾ ಫಾಂಟಪಥ್ಯಜಲಾವಿಲಾ ॥ 98 ॥

ವಿಶ್ವಮಾತಾ ಚ ವಿಶ್ವೇಶೀ ವಿಶ್ವಾ ವಿಶ್ವೇಶ್ವರಪ್ರಿಯಾ ।
ಬ್ರಹ್ಮಣ್ಯಾ ಬ್ರಹ್ಮಕೃದ್ ಬ್ರಾಹ್ಮೀ ಬ್ರಹ್ಮಿಷ್ಠಾ ವಿಮಲೋಕದಾ ॥ 99 ॥

ವಿಭಾವರೀ ಚ ವಿರಜಾ ವಿಕ್ರಾಂತಾನೇಕವಿಷ್ಟಪಾ ।
ವಿಶ್ವಾಮಿತ್ರಂ ವಿಷ್ಣುಪದೀ ವೈಷ್ಣವೀ ವೈಷ್ಣವಪ್ರಿಯಾ ॥ 100 ॥

ವಿರೂಪಾಕ್ಷಪ್ರಿಯಕರೀ ವಿಭೂತಿರ್ವಿಶ್ವತೋಮುಖೀ ।
ವಿಪಾಶಾ ವೈಬುಧೀ ವೇದ್ಯಾ ವೇದಾಕ್ಷರರಸಸ್ರವಾ ॥ 101 ॥

ವಿದ್ಯಾ ವೇಗವತೀ ವಂದ್ಯಾ ಬೃಂಹಣೀ ಬ್ರಹ್ಮವಾದಿನೀ ।
ವರದಾ ವಿಪ್ರಕೃಷ್ಟಾ ಚ ವರಿಷ್ಠಾ ಚ ವಿಶೋಧನೀ ॥ 102 ॥

ವಿದ್ಯಾಧರೀ ವಿಶೋಕಾ ಚ ವಯೋವೃಂದನಿಷೇವಿತಾ ।
ಬಹೂದಕಾ ಬಲವತೀ ವ್ಯೋಮಸ್ಥಾ ವಿಬುಧಪ್ರಿಯಾ ॥ 103 ॥

ವಾನೀ ವೇದವತೀ ವೇತ್ತಾ ಬ್ರಹ್ಮವಿದ್ಯಾತರಂಗಿಣೀ ।
ಬ್ರಹ್ಮಾಂಡಕೋಟಿವ್ಯಾಪ್ತಾಂಬುರ್ಬ್ರಹ್ಮಹತ್ಯಾಪಹಾರಿಣೀ ॥ 104 ॥

ಬ್ರಹ್ಮೇಶವಿಷ್ಣುರೂಪಾ ಚ ಬುದ್ಧಿರ್ವಿಭವವರ್ಧಿನೀ ।
ವಿಲಾಸಿಸುಖದಾ ವಶ್ಯಾ ವ್ಯಾಪಿನೀ ಚ ವೃಷಾರಣಿಃ ॥ 105 ॥

ವೃಷಾಮಕಮೌಲಿನಿಲಯಾ ವಿಪನ್ನಾರ್ತಿಪ್ರಭಂಜನೀ ।
ವಿನೀತಾ ವಿನತಾ ಬಧ್ನತನಯಾ ವಿನಯಾನ್ವಿತಾ ॥ 106 ॥

ವಿಪಂಚೀ ವಾದ್ಯಕುಶಲಾ ವೇಣುಶ್ರುತಿವಿಚಕ್ಷಣಾ ।
ವರ್ಚಸ್ಕರೀ ಬಲಕರೀ ಬಲೋನ್ಮೂಲಿತಕಲ್ಮಷಾ ॥ 107 ॥

ವಿಪಾಪಾ ವಿಗತಾತಂಕಾ ವಿಕಲ್ಪಪರಿವರ್ಜಿತಾ ।
ವೃಷ್ಟಿಕರ್ತ್ರೀ ವೃಷ್ಟಿಜಲಾ ವಿಧಿರ್ವಿಚ್ಛಿನ್ನಬಂಧನಾ ॥ 108 ॥

ವೃತರೂಪಾ ವಿತ್ತರೂಪಾ ಬಹುವಿಘ್ನವಿನಾಶಕೃತ್ ।
ವಸುಧಾರಾ ವಸುಮತೀ ವಿಚಿತ್ರಾಂಗೀ ವಿಭಾವಸುಃ ॥ 109 ॥

ವಿಜಯಾ ವಿಶ್ವಬೀಜಾ ಚ ವಾಮದೇವೀ ವರಪ್ರದಾ ।
ವೃಷಾಶ್ರಿತಾ ವಿಷಘ್ನೀ ಚ ವಿಜ್ಞಾನೋರ್ಮ್ಯಂಶುಮಾಲಿನೀ ॥ 110 ॥

ಭವ್ಯಾ ಭೋಗವತೀ ಭದ್ರಾ ಭವಾನೀ ಭೂತಭಾವನೀ ।
ಭೂತಧಾತ್ರೀ ಭಯಹರಾ ಭಕ್ತದಾರಿದ್ರ್ಯಘಾತಿನೀ ॥ 111 ॥

ಭುಕ್ತಿಮುಕ್ತಿಪ್ರದಾ ಭೇಶೀ ಭಕ್ತಸ್ವರ್ಗಾಪವರ್ಗದಾ ।
ಭಾಗೀರಥೀ ಭಾನುಮತೀ ಭಾಗ್ಯಂ ಭೋಗವತೀ ಭೃತಿಃ ॥ 112 ॥

ಭವಪ್ರಿಯಾ ಭವದ್ವೇಷ್ಟ್ರೀ ಭೂತಿದಾ ಭೂತಿಭೂಷಣಾ ।
ಭಾಲಲೋಚನಭಾವಜ್ಞಾ ಭೂತಭವ್ಯಭವತ್ಪ್ರಭುಃ ॥ 113 ॥

ಭ್ರಾಂತಿರ್ಜ್ಞಾನಪ್ರಶಮನೀ ಭಿನ್ನಬ್ರಹ್ಮಾಂಡಮಂಡಪಾ ।
ಭೂರಿದಾ ಭಕ್ತಸುಲಭಾ ಭಾಗ್ಯವದ್ದೃಷ್ಟಿಗೋಚರೀ ॥ 114 ॥

ಭಂಜಿತೋಪಪ್ಲವಕುಲಾ ಭಕ್ಷ್ಯಭೋಜ್ಯಸುಖಪ್ರದಾ ।
ಭಿಕ್ಷಣೀಯಾ ಭಿಕ್ಷುಮಾತಾ ಭಾವಾ ಭಾವಸ್ವರೂಪಿಣೀ ॥ 115 ॥

ಮಂದಾಕಿನೀ ಮಹಾನಂದಾ ಮಾತಾ ಮುಕ್ತಿತರಂಗಿಣೀ ।
ಮಹೋದಯಾ ಮಧುಮತೀ ಮಹಾಪುಣ್ಯಾ ಮುದಾಕರೀ ॥ 116 ॥

ಮುನಿಸ್ತುತಾ ಮೋಹಹಂತ್ರೀ ಮಹಾತೀರ್ಥಾ ಮಧುಸ್ರವಾ ।
ಮಾಧವೀ ಮಾನಿನೀ ಮಾನ್ಯಾ ಮನೋರಥಪಥಾತಿಗಾ ॥ 117 ॥

ಮೋಕ್ಷದಾ ಮತಿದಾ ಮುಖ್ಯಾ ಮಹಾಭಾಗ್ಯಜನಶ್ರಿತಾ ।
ಮಹಾವೇಗವತೀ ಮೇಧ್ಯಾ ಮಹಾಮಹಿಮಭೂಷಣಾ ॥ 118 ॥

ಮಹಾಪ್ರಭಾವಾ ಮಹತೀ ಮೀನಚಂಚಲಲೋಚನಾ ।
ಮಹಾಕಾರುಣ್ಯಸಂಪೂರ್ಣಾ ಮಹರ್ದ್ಧಿಶ್ಚ ಮಹೋತ್ಪಲಾ ॥ 119 ॥

ಮೂರ್ತಿಮನ್ಮುಕ್ತಿರಮಣೀ ಮಣಿಮಾಣಿಕ್ಯಭೂಷಣಾ ।
ಮುಕ್ತಾಕಲಾಪನೇಪಥ್ಯಾ ಮನೋನಯನನಂದಿನೀ ॥ 120 ॥

ಮಹಪಾತಕರಾಶಿಘ್ನೀ ಮಹಾದೇವಾರ್ಘಹಾರಿಣೀ ।
ಮಹೋರ್ಮಿಮಾಲಿನೀ ಮುಕ್ತಾ ಮಹಾದೇವೀ ಮನೋನ್ಮನೀ ॥ 121 ॥

ಮಹಾಪುಣ್ಯೋದಯಪ್ರಾಪ್ಯಾ ಮಾಯಾತಿಮಿರಚಂದ್ರಿಕಾ ।
ಮಹಾವಿದ್ಯಾ ಮಹಾಮಾಯಾ ಮಹಾಮೇಧಾ ಮಹೌಷಧಮ್ ॥ 122 ॥

ಮಾಲಾಧರೀ ಮಹೋಪಾಯಾ ಮಹೋರಗವಿಭೂಷಣಾ ।
ಮಹಾಮೋಹಪ್ರಶಮನೀ ಮಹಾಮಂಗಲಮಂಗಲಮ್ ॥ 123 ॥

ಮಾರ್ತಾಂಡಮಂಡಲಚರೀ ಮಹಾಲಕ್ಷ್ಮೀರ್ಮದೋಜ್ಝಿತಾ ।
ಯಶಸ್ವಿನೀ ಯಶೋದಾ ಚ ಯೋಗ್ಯಾ ಯುಕ್ತಾತ್ಮಸೇವಿತಾ ॥ 124 ॥

ಯೋಗಸಿದ್ಧಿಪ್ರದಾ ಯಾಚ್ಯಾ ಯಜ್ಞೇಶಪರಿಪೂರಿತಾ ।
ಯಜ್ಞೇಶೀ ಯಜ್ಞಫಲದಾ ಯಜನೀಯಾ ಯಶಸ್ಕರೀ ॥ 125 ॥

ಯಮಿಸೇವ್ಯಾ ಯೋಗಯೋನಿರ್ಯೋಗಿನೀ ಯುಕ್ತಬುದ್ಧಿದಾ ।
ಯೋಗಜ್ಞಾನಪ್ರದಾ ಯುಕ್ತಾ ಯಮಾದ್ಯಷ್ಟಾಂಗಯೋಗಯುಕ್ ॥ 126 ॥

ಯಂತ್ರಿತಾಘೌಘಸಂಚಾರಾ ಯಮಲೋಕನಿವಾರಿಣೀ ।
ಯಾತಯಾತಪ್ರಶಮನೀ ಯಾತನಾನಾಮಕೃಂತನೀ ॥ 127 ॥

ಯಾಮಿನೀಶಹಿಮಾಚ್ಛೋದಾ ಯುಗಧರ್ಮವಿವರ್ಜಿತಾ ।
ರೇವತೀ ರತಿಕೃದ್ ರಮ್ಯಾ ರತ್ನಗರ್ಭಾ ರಮಾ ರತಿಃ ॥ 128 ॥

ರತ್ನಾಕರಪ್ರೇಮಪಾತ್ರಂ ರಸಜ್ಞಾ ರಸರೂಪಿಣೀ ।
ರತ್ನಪ್ರಾಸಾದಗರ್ಭಾ ಚ ರಮಣೀಯತರಂಗಿಣೀ ॥ 129 ॥

ರತ್ನಾರ್ಚಿ ರುದ್ರರಮಣೀ ರಾಗದ್ವೇಷವಿನಾಶಿನೀ ।
ರಮಾ ರಾಮಾ ರಮ್ಯರೂಪಾ ರೋಗಿಜೀವಾನುರೂಪಿಣೀ ॥ 130 ॥

ರುಚಿಕೃದ್ ರೋಚನೀ ರಮ್ಯಾ ರುಚಿರಾ ರೋಗಹಾರಿಣೀ ।
ರಾಜಹಂಸಾ ರತ್ನವತೀ ರಾಜತ್ಕಲ್ಲೋಲರಾಜಿಕಾ ॥ 131 ॥

ರಾಮಣೀಯಕರೇಖಾ ಚ ರುಜಾರೀ ರೋಗರೋಷಿಣೀ ।
ರಾಕಾ ರಂಕಾರ್ತಿಶಮನೀ ರಮ್ಯಾ ರೋಲಂಬರಾವಿಣೀ ॥ 132 ॥

ರಾಗಿಣೀ ರಂಜಿತಶಿವಾ ರೂಪಲಾವಣ್ಯಶೇವಧಿಃ ।
ಲೋಕಪ್ರಸೂರ್ಲೋಕವಂದ್ಯಾ ಲೋಲತ್ಕಲಲ್ಲೋಲಮಾಲಿನೀ ॥ 133 ॥

ಲೀಲಾವತೀ ಲೋಕಭೂಮಿರ್ಲೋಕಲೋಚನಚಂದ್ರಿಕಾ ।
ಲೇಖಸ್ರವಂತೀ ಲಟಭಾ ಲಘುವೇಗಾ ಲಘುತ್ವಹೃತ್ ॥ 134 ॥

ಲಾಸ್ಯತರಂಗಹಸ್ತಾ ಚ ಲಲಿತಾ ಲಯಭಂಗಿಗಾ ।
ಲೋಕಬಂಧುರ್ಲೋಕಧಾತ್ರೀ ಲೋಕೋತ್ತರಗುಣೋರ್ಜಿತಾ ॥ 135 ॥

ಲೋಕತ್ರಯಹಿತಾ ಲೋಕಾ ಲಕ್ಷ್ಮೀರ್ಲಕ್ಷಣಲಕ್ಷಿತಾ ।
ಲೀಲಾ ಲಕ್ಷಿತನಿರ್ವಾಣಾ ಲಾವಣ್ಯಾಮೃತವರ್ಷಿಣೀ ॥ 136 ॥

ವೈಶ್ವಾನರೀ ವಾಸವೇಢ್ಯಾ ವಂಧ್ಯತ್ವಪರಿಹಾರಿಣೀ ।
ವಾಸುದೇವಾಂಘ್ರಿರೇಣುಘ್ನೀ ವಜ್ರಿವಜ್ರನಿವಾರಿಣೀ ॥ 137 ॥

ಶುಭಾವತೀ ಶುಭಫಲಾ ಶಾಂತಿಃ ಶಂತನುವಲ್ಲಭಾ ।
